

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಡಿಸೆಂಬರ್ 3 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 46 | ಸಂಚಿಕೆ: 225 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮಾಜಿ ಸಿಎಂ ಬಿಎಸ್‌ವೈ ವಿರುದ್ಧದ ಪೋಕ್ಸೊ ಪ್ರಕರಣಕ್ಕೆ ಸುಪ್ರೀಂಕೋರ್ಟ್ ತಡೆ

ನವದೆಹಲಿ: ಬಾಲಕಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣ ಕಾಯ್ದೆ) ಪ್ರಕರಣದ ವಿಚಾರಣೆಗೆ ಸುಪ್ರೀಂಕೋರ್ಟ್ ಮಂಗಳವಾರ ತಡೆ ನೀಡಿದೆ.



ತನ್ನ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದುಗೊಳಿಸಲು ನಿರಾಕರಿಸಿದ ಕರ್ನಾಟಕ ಹೈಕೋರ್ಟ್‌ನ ನವೆಂಬರ್ 13ರ ಆದೇಶದ ವಿರುದ್ಧ ಯಡಿಯೂರಪ್ಪ ಸಲ್ಲಿಸಿದ್ದ ವಿಶೇಷ ರಜೆ ಅರ್ಜಿಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಅವರನ್ನೊಳಗೊಂಡ ಪೀಠವು ವಿಚಾರಣೆ ನಡೆಸಿತು. ತಮ್ಮ ವಿರುದ್ಧದ ಪ್ರಕರಣವನ್ನು ಸಂಪೂರ್ಣವಾಗಿ (ಅರ್ಹತೆಯ ಆಧಾರದ ಮೇಲೆ) ಮತ್ತೊಮ್ಮೆ ಹೈಕೋರ್ಟ್ ಮುಂದೆ ಮಂಡಿಸಲು ಸ್ವಾತಂತ್ರ್ಯವಿದೆಯೇ ಎಂಬುದರ ಕುರಿತು ಯಡಿಯೂರಪ್ಪ ಅವರ ಮನವಿಗೆ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂಕೋರ್ಟ್ ■ 6ನೇ ಪುಟಕ್ಕೆ

ಸ್ಮಾರ್ಟ್ ಮೀಟರ್ ಟೆಂಡರ್ ಹಗರಣ: ದೂರು ರದ್ದುಪಡಿಸಿದ ಹೈಕೋರ್ಟ್

ಸಚಿವ ಕೆ.ಜೆ. ಜಾರ್ಜ್‌ಗೆ ರಿಲೀಫ್



ಬೆಂಗಳೂರು: ಸ್ಮಾರ್ಟ್ ಮೀಟರ್ ಟೆಂಡರ್ ಹಗರಣ ಆರೋಪಕ್ಕೆ ಸಂಬಂಧಿಸಿದಂತೆ ಸಚಿವ ಕೆ.ಜೆ.ಜಾರ್ಜ್ ಸೇರಿದಂತೆ ಕೆಲ ಪ್ರಮುಖರ ವಿರುದ್ಧ ದಾಖಲಾಗಿದ್ದ ಖಾಸಗಿ ದೂರುಗಳನ್ನು ಕರ್ನಾಟಕ ಹೈಕೋರ್ಟ್ ರದ್ದುಪಡಿಸಿದೆ.

ಬಿಜೆಪಿ ನಾಯಕರು ದಾಖಲಿಸಿದ್ದ ಪ್ರಕರಣ ರದ್ದುಪಡಿಸಿ ನ್ಯಾ.ಎಂ.ಐ.ಅರುಣ್ ಅವರಿದ್ದ ಹೈಕೋರ್ಟ್ ಪೀಠ ಆದೇಶಿಸಿದೆ. ಆ ಮೂಲಕ ಅಧಿಕಾರಿಗಳಾದ ಗೌರವ್ ಗುಪ್ತಾ, ಮಹಾಂತೇಶ ಬೀಳಗಿ, ಹೆಚ್.ಜೆ.ರಮೇಶ್ ವಿರುದ್ಧದ ಕೇಸ್ ಕೂಡ ರದ್ದಾಗಿದೆ. ಸ್ಮಾರ್ಟ್ ವಿದ್ಯುತ್ ಮೀಟರ್ ವಿಚಾರದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಇಂಧನ ಇಲಾಖೆ ವಿರುದ್ಧ ಬಿಜೆಪಿ ಸಮರ ಸಾರಿತ್ತು. ಸ್ಮಾರ್ಟ್ ಮೀಟರ್ ಖರೀದಿಯಲ್ಲಿ ಭಾರೀ ಅವ್ಯವಹಾರ ನಡೆದಿದೆ. ಇತರೆ ಕಂಪೆನಿಗಳನ್ನು ಕೈಬಿಟ್ಟು ದಾವಣಗೆರೆಯ ರಾಜಶ್ರೀ ಎಲೆಕ್ಟ್ರಿಕಲ್ಸ್‌ಗೆ ಗುತ್ತಿಗೆ ನೀಡಲಾಗಿದೆ. ಈ ಕಂಪೆನಿಗಾಗಿ ಇತರೆ ಕಂಪೆನಿಗಳು ಟೆಂಡರ್‌ನಲ್ಲಿ ಭಾಗವಹಿಸದಂತೆ ನೋಡಿಕೊಳ್ಳಲಾಗಿದೆ ■ 6ನೇ ಪುಟಕ್ಕೆ

ವರಿಷ್ಠರು ಬಯಸಿದಾಗ ಡಿಕೆಶಿ ಸಿಎಂ ಆಗ್ತಾರೆ...!

• ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನೆಯಲ್ಲಿ ಉಪಹಾರ ಕೂಟದಲ್ಲಿ ಪಾಲ್ಗೊಂಡ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ • ಡಿ.8ಕ್ಕೆ ಇಬ್ಬರು ದೆಹಲಿಗೆ ಹೋಗ್ತೇವೆ; ಅವಕಾಶ ಸಿಕ್ಕರೆ ವರಿಷ್ಠರ ಭೇಟಿ ಆಗ್ತೇವೆ

ಬೆಂಗಳೂರು, ಡಿ.2(ಕೆಎಂಶಿ)– ಪಕ್ಷದ ವರಿಷ್ಠರು, ರಾಹುಲ್ ಗಾಂಧಿ ಯಾವಾಗ ಹೇಳುವರೋ ಆವಾಗ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಸಿಎಂ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.



ಡಿಸಿಎಂ ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ಸಿಎಂ ಸಿದ್ದರಾಮಯ್ಯ ಉಪಹಾರ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸದಾಶಿವನಗರದ ತಮ್ಮ ನಿವಾಸದಲ್ಲಿ ಏರ್ಪಡಿಸಿದ್ದ ಉಪಹಾರ ಕೂಟದಲ್ಲಿ ಭಾಗವಹಿಸಿದ ನಂತರ ಜಂಟಿಯಾಗಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರ ಹಂಚಿಕೆ ಕುರಿತಂತೆ ಪಕ್ಷದ ವರಿಷ್ಠರು ರಾಹುಲ್ ಗಾಂಧಿ ಏನು ತೀರ್ಮಾನ ಮಾಡುತ್ತಾರೋ ಅದರಂತೆ ನಾವು ನಡೆದುಕೊಳ್ಳುತ್ತೇವೆ. ಡಿಸೆಂಬರ್ 8ರಂದು ದೆಹಲಿಗೆ ಇಬ್ಬರೂ ಹೋಗಲು ತೀರ್ಮಾನ ಮಾಡಿದ್ದೇವೆ. ಪ್ರವಾಸ ಸಂದರ್ಭದಲ್ಲಿ ವರಿಷ್ಠರು ಅವಕಾಶ ನೀಡಿದರೆ ಭೇಟಿ ಮಾಡುತ್ತೇವೆ. ■ 6ನೇ ಪುಟಕ್ಕೆ

ಮೈಸೂರು ಶೈಲಿಯಲ್ಲಿ ಮಾಡಿದ ತಟ್ಟೆ ಇಡ್ಲಿ, ನಾಟಿಕೋಳಿ ಸಾರು ಸವಿದ ಸಿಎಂ!

ಬೆಂಗಳೂರು, ಡಿ.2(ಕೆಎಂಶಿ)– ಮೈಸೂರು ಶೈಲಿಯ ರುಚಿ ಉಪಹಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಬೆಳಗ್ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ಸವಿದರು.

ಶಿವಕುಮಾರ್ ಆಹ್ವಾನದ ಮೇರೆಗೆ ಸದಾಶಿವನಗರದ ಮನೆಗೆ ಧಾವಿಸಿದ ಮುಖ್ಯಮಂತ್ರಿಗಳು, ನಾಟಿ ಕೋಳಿ ಸಾರು, ತಟ್ಟೆ ಇಡ್ಲಿ ಸೇರಿದಂತೆ ಇತರ ತಿನಿಸುಗಳನ್ನು ಸವಿದರು. ಮಾಂಸಹಾರ ತ್ಯಜಿಸಿರುವ ಡಿ.ಕೆ. ಶಿವಕುಮಾರ್ ಇಡ್ಲಿ, ಸಾಂಬಾರ್, ಫ್ರೂಟ್ ಸಲಾಡ್ ಇನ್ನಿತರ ಸಸ್ಯಾಹಾರ ಸೇವಿಸಿದರು. ಮೈಸೂರಿನಿಂದ ಕರೆಸಿದ್ದ ಬಾಣಸಿಗರಿಂದ ಶಿವಕುಮಾರ್ ಉಪಹಾರ ಸಿದ್ಧಪಡಿಸಿದ್ದರು. ನಿಗದಿತ ಸಮಯಕ್ಕೆ ಧಾವಿಸಿದ ಸಿದ್ದರಾಮಯ್ಯ, ಮಾಜಿ ಸಂಸದ ಡಿ.ಕೆ.ಸುರೇಶ್, ವಿಧಾನಸಭಾ ಸದಸ್ಯ ರಂಗನಾಥ್ ಜೊತೆಗೂಡಿ ಉಪಹಾರ ಸೇವಿಸಿದರು.

ನಂತರ ಮುಖ್ಯಮಂತ್ರಿ ಹಾಗೂ ಶಿವಕುಮಾರ್ ಪ್ರತ್ಯೇಕ ಕೊಠಡಿಯಲ್ಲಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಪ್ರಸಕ್ತ ರಾಜಕಾರಣ, ಪಕ್ಷ ಸಂಘಟನೆ ಸೇರಿದಂತೆ ಹಲವು ವಿಚಾರಗಳ ಕುರಿತು ಚರ್ಚಿಸಿ ಸುದ್ದಿಗಾರರೊಂದಿಗೆ ಮಾತನಾಡಲು ಹೊರ ಬಂದರು.

ಸಿಎಂ ಸಿದ್ದರಾಮಯ್ಯರೊಂದಿಗೆ ಮಹತ್ವದ ರಾಜಕೀಯ ಚರ್ಚೆ: ಡಿಕೆಶಿ

ಪರಿಷತ್‌ನ 4 ಸ್ಥಾನಕ್ಕೆ ಪಕ್ಷದ ಅಭ್ಯರ್ಥಿ ಆಯ್ಕೆ ವಿಚಾರ; ಚಳಿಗಾಲ ಅಧಿವೇಶನ ವಿಷಯ; ಮೇಕೆದಾಟು ಯೋಜನೆ ಪ್ರಸ್ತಾಪ

ಬೆಂಗಳೂರು, ಡಿ.2(ಕೆಎಂಶಿ)– ವಿಧಾನ ಪರಿಷತ್‌ಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆ, ದೆಹಲಿಯಲ್ಲಿ ಸರ್ವಪಕ್ಷ ಸಂಸದರ ಸಭೆ, ಬೆಳಗಾವಿಯಲ್ಲಿ ವಿಧಾನಮಂಡಲದ ಚಳಿಗಾಲದ ಅಧಿವೇಶನದ ಕಾರ್ಯತಂತ್ರ ಸೇರಿದಂತೆ ಪಕ್ಷ, ಸರ್ಕಾರ ಹಾಗೂ ರಾಜಕೀಯ ವಿಚಾರಗಳ ಕುರಿತು ಉಪಹಾರ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಚರ್ಚೆ ಮಾಡಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸದಾಶಿವನಗರದ ತಮ್ಮ ನಿವಾಸದಲ್ಲಿ ಉಪಹಾರ ಕೂಟದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಮುಖ್ಯಮಂತ್ರಿ ಅವರನ್ನು ಉಪಹಾರಕ್ಕೆ ಬರುವಂತೆ ಮೊದಲು ಕರೆದಿದ್ದೆ, ಮೊದಲು ನೀವೇ ನಮ್ಮ ಮನೆಗೆ ಬನ್ನಿ, ಆ ಮೇಲೆ ಬರುತ್ತೇನೆ ಎಂದಿದ್ದರು. ಅದರಂತೆ ನಾನು ಅವರ ಮನೆಗೆ ಹೋಗಿದ್ದೆ. ಇಂದು ನಮ್ಮ ಮನೆಗೆ ಆಹ್ವಾನಿಸಿದ್ದೆ. ■ 6ನೇ ಪುಟಕ್ಕೆ

ಸಂಕ್ರಾಂತಿ ನಂತರ ರಾಜ್ಯದ ನಾಯಕತ್ವ ವಿವಾದ ನಿವಾರಣೆ

ಕೆ.ಆರ್.ಪೇಟೆ, ಡಿ.2– ಮಕರ ಸಂಕ್ರಮಣದ ನಂತರ ರಾಜ್ಯ ರಾಜಕಾರಣದಲ್ಲಿ ಮಹತ್ತರ ಬದಲಾವಣೆಗಳಾಗಲಿವೆ ಎಂದು ಕೋಡಿಮಠದ ಶ್ರೀಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ತಿಳಿಸಿದರು.



ತಾಲೂಕಿನ ಹರಿಹರಪುರ ಶ್ರೀ ಆಂಜನೇಯಸ್ವಾಮಿ ರಥೋತ್ಸವದಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವನಮುಡಿಯ ಮೇಲಿರುವ ಮಲ್ಲಿಗೆಯು ಶಿವನ ಪಾದಕ್ಕೆ ಬೀಳಲೇಬೇಕು. ರಾಜ್ಯ ರಾಜಕಾರಣದ ಗೊಂದಲವು ಸಂಪೂರ್ಣವಾಗಿ ಬಗೆಹರಿಯಲಿದ್ದು ಸುಖಾಂತ್ಯವಾಗಲಿದೆ ಮಕರ ಸಂಕ್ರಾಂತಿಯ ನಂತರ ರಾಜ್ಯ ರಾಜಕಾರಣದ ನಾಯಕತ್ವದ ಗುದ್ದಾಟವು ಬಗೆಹರಿಯಲಿದೆ ಎಂದರು.

ನಾನು ಶಾಸ್ತ್ರ ಹೇಳುವವನಲ್ಲ, ಶಾಸ್ತ್ರಕಾರನೂ ಅಲ್ಲ ಮುಂದೆ ನಡೆಯುವ ವಿಚಾರಗಳನ್ನು ತಿಳಿಸುವ ಶಕ್ತಿ ಹೊಂದಿದ್ದೇನೆ ಅಷ್ಟೇ. ರಾಷ್ಟ್ರ ರಾಜಕಾರಣದಲ್ಲಿಯೂ ಕೂಡ ಯುಗಾದಿಯ ನಂತರ ಸಮಸ್ಯೆಗಳು ಎದುರಾಗಲಿವೆ. ಇತ್ತೀಚಿಗೆ ನಡೆದ ಬಾಂಬ್ ಬ್ಲಾಸ್ಟ್‌ನಂತಹ ಅಹಿತಕರ ಘಟನೆಗಳು ರಾಷ್ಟ್ರ ಮಟ್ಟದಲ್ಲಿ ಮುಂದೆಯೂ ನಡೆಯಲಿವೆ ಎಂದರು. ರಾಜಕಾರಣಿಗಳು ರಾಜಕಾರಣವನ್ನೇ ■ 6ನೇ ಪುಟಕ್ಕೆ

ಏಪ್ರಿಲ್ 2026, ಫೆಬ್ರವರಿ 2027 ಎರಡು ಹಂತದಲ್ಲಿ ಜನಗಣತಿ

ಲೋಕಸಭೆಗೆ ಕೇಂದ್ರ ಮಾಹಿತಿ

ನವದೆಹಲಿ: ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು, ಮೊದಲನೆಯದು ಏಪ್ರಿಲ್ 2026 ರಿಂದ ಸೆಪ್ಟೆಂಬರ್ 2026ರವರೆಗೆ ಮತ್ತು ಎರಡನೆಯದು ಫೆಬ್ರವರಿ 2027ರಲ್ಲಿ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರ ಮಂಗಳವಾರ ಲೋಕಸಭೆಗೆ ತಿಳಿಸಿದೆ.

ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ, ಎರಡು ಹಂತಗಳಲ್ಲಿ ಜನಗಣತಿ ನಡೆಸಲಾಗುವುದು. ಹಂತ I – ಮನೆ ಪಟ್ಟಿ ಮತ್ತು ವಸತಿ ಗಣತಿ ನಂತರ ಹಂತ II – ಜನಸಂಖ್ಯಾ ಎಣಿಕೆ (PE) ಆಗಿರುತ್ತವೆ ಎಂದು ಹೇಳಿದರು.

ಏಪ್ರಿಲ್‌ನಿಂದ ಸೆಪ್ಟೆಂಬರ್ 2026 ರವರೆಗಿನ ಮೊದಲ ಹಂತವನ್ನು ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳ ಅನುಕೂಲಕ್ಕೆ ಅನುಗುಣವಾಗಿ 30 ದಿನಗಳ ಅವಧಿಯಲ್ಲಿ ನಡೆಸಲಾಗುವುದು. ಲಡಾಖ್ ಕೇಂದ್ರಾಡಳಿತ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ ರಾಜ್ಯಗಳ ಹಿಮದಿಂದ ಆವೃತವಲ್ಲದ ಪ್ರದೇಶಗಳನ್ನು ಹೊರತುಪಡಿಸಿ, ಇತರ ಪ್ರದೇಶಗಳಲ್ಲಿ ಫೆಬ್ರವರಿ 2027 ರಲ್ಲಿ ಉಲ್ಲೇಖ ■ 6ನೇ ಪುಟಕ್ಕೆ

ಸಾಲ ಸೌಲಭ್ಯದಿಂದ ಆರ್ಥಿಕ ಸ್ವಾವಲಂಬನೆ ಸಾಧಿಸಿ

ಫಲಾನುಭವಿಗಳಿಗೆ ಭೋವಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಸಲಹೆ



ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವತಿಯಿಂದ ನಿರ್ಮಿಸಿರುವ ಮಳಿಗೆಗೆ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಭೇಟಿ ನೀಡಿ, ವೀಕ್ಷಣೆ ಮಾಡಿದರು.

ಮೈಸೂರು, ಡಿ.2(ಎಂಕೆ)– ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವತಿಯಿಂದ ನೀಡುವ ಸಾಲ–ಸೌಲಭ್ಯಗಳನ್ನು ಪಡೆದುಕೊಂಡು ಆರ್ಥಿಕ ಸ್ವಾವಲಂಬನೆ ಸಾಧಿಸುವಂತೆ ನಿಗಮದ ಅಧ್ಯಕ್ಷ ಎಂ.ರಾಮಪ್ಪ ಸಲಹೆ ನೀಡಿದ್ದಾರೆ.

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವತಿಯಿಂದ ನಿರ್ಮಿಸಿರುವ ಮಳಿಗೆಗೆ ಭೇಟಿ ನೀಡಿ, ಮಳಿಗೆ ವೀಕ್ಷಣೆ ಮಾಡಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಮಳಿಗೆಯನ್ನು ಆಕರ್ಷಕವಾಗಿ ನಿರ್ಮಾಣ ಮಾಡಲಾಗಿದ್ದು, ಭೋವಿ ಸಮುದಾಯಕ್ಕೆ ಸರ್ಕಾರದಿಂದ ದೊರೆಯುವ ಎಲ್ಲಾ ಸಾಲ–ಸೌಲಭ್ಯಗಳ ಮಾಹಿತಿಯನ್ನು ನೀಡಲಾಗಿದೆ ಎಂದು ಹೇಳಿದರು.

ನೇರ ಸಾಲ ಯೋಜನೆ, ಉದ್ಯಮ ಶೀಲತೆ ಯೋಜನೆ, ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆ, ಭೂ ಒಡೆತನ ಯೋಜನೆ ಹಾಗೂ ಗಂಗಾ ಕಲ್ಯಾಣ ಯೋಜನೆಯಡಿ ಸಬ್ಸಿಡಿ ದರದಲ್ಲಿ ಸಾಲ–ಸೌಲಭ್ಯ ಪಡೆದು ಆರ್ಥಿಕ ಸ್ವಾವಲಂಬನೆ ಸಾಧಿಸಬಹುದಾಗಿದೆ. ಈ ನಿಟ್ಟಿನಲ್ಲಿ ದಸರಾ ವಸ್ತುಪ್ರದರ್ಶನಕ್ಕೆ ಆಗಮಿಸುವ ಪ್ರತಿಯೊಬ್ಬರೂ ಮಳಿಗೆಗೂ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುವಂತೆ ಮನವಿ ಮಾಡಿದರು. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಶ್ರೀಧರ್ ಮೂರ್ತಿ, ಸಿಬ್ಬಂದಿ ಮಹಾಲಕ್ಷ್ಮಿ ಮತ್ತಿತರರಿದ್ದರು.

ನೂತನ ನಿರ್ದೇಶಕರ ಆಯ್ಕೆ



ಮೈಸೂರಿನ ಹಿನಕಲ್‌ನ ಶ್ರೀ ಚಾಮುಂಡೇಶ್ವರಿ ವಿವಿದೋದ್ದೇಶ ಸಹಕಾರ ಸಂಘದ ಆಡಳಿತ ಮಂಡಳಿಗೆ ನಿರ್ದೇಶಕರಾಗಿ ಆಯ್ಕೆಗೊಂಡವರು.

ಮೈಸೂರು, ಡಿ.2–ಮೈಸೂರು ಹಿನಕಲ್‌ನ ಶ್ರೀ ಚಾಮುಂಡೇಶ್ವರಿ ವಿವಿದೋದ್ದೇಶ ಸಹಕಾರ ಸಂಘದ ಆಡಳಿತ ಮಂಡಳಿಗೆ ನೂತನ ನಿರ್ದೇಶಕರು ಆಯ್ಕೆಯಾಗಿದ್ದಾರೆ.

ಭಾನುವಾರ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಎಸ್.ಕುಮಾರ್ (182 ಮತ), ಎನ್.ರಾಜಕುಮಾರ್ (179), ಹೆಚ್.ಜಿ.ವೆಂಕಟೇಶ್(161), ಎಸ್.ಆರ್.ಶ್ರೀನಿವಾಸ(159), ಆರ್.ಗೋವಿಂದ (148), ಬಿ.ಎ.ಪ್ರಸನ್ನ(147), ಎಲ್.ಹರೀಶ್ (147), ಹಿಂದುಳಿದ ವರ್ಗ ಎ ಪ್ರವರ್ಗದಿಂದ ಬಿ.ಕೆ.ಮಂಜುನಾಥ (138), ಬಿ ಪ್ರವರ್ಗದಿಂದ ನಂಜುಂಡಸ್ವಾಮಿ(142) ಹಾಗೂ ಪರಿಶಿಷ್ಟ ಪಂಗಡದಿಂದ ಗೌರಿ (134) ಚುನಾಯಿತರಾಗಿದ್ದು, ಮಹಿಳಾ ಮೀಸಲು ಕ್ಷೇತ್ರದಿಂದ ಪುಷ್ಪರಾಜ್ ಹಾಗೂ ಪುಷ್ಪಲತಾ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಜಯರಾಮ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹನೀಯರ ಜಯಂತಿ ಕಾರ್ಯಕ್ರಮ...



ನಜರ್‌ಬಾದ್ ಗೆಳೆಯರ ಬಳಗದ ವತಿಯಿಂದ ಏರ್ಪಡಿಸಿದ್ದ 70ನೇ ಕನ್ನಡ ರಾಜ್ಯೋತ್ಸವ, ಕೆಂಪೇಗೌಡರ ಜಯಂತಿ, ವಾಲ್ಮೀಕಿ ಜಯಂತಿ, ಕನಕದಾಸ ಜಯಂತಿ ಕಾರ್ಯಕ್ರಮಕ್ಕೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು. ಇದೇ ವೇಳೆ ನಜರ್‌ಬಾದ್ ಬಡಾವಣೆಯ ಹಿರಿಯರನ್ನು ಸನ್ಮಾನಿಸಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮಾಜಿ ಕಾರ್ಪೋರೇಟರ್‌ಗಳಾದ ಗೋಪಿ, ವರದರಾಜು, ಕಾಂಗ್ರೆಸ್ ಮುಖಂಡ ಎಸ್.ಆರ್.ರವಿಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ವಿದ್ಯುತ್ ಕಂಬಕ್ಕೆ ಡಿಕ್ಕಿ; ಕಾರು ಬೆಂಕಿಗಾಹುತಿ

ನಾಲ್ವರಿಗೆ ಗಾಯ, ಪುಷ್ಪಾಶ್ರಮದ ಬಳಿ ರಿಂಗ್ ರಸ್ತೆಯಲ್ಲಿ ಕಳೆದ ಭಾನುವಾರ ಮುಂಜಾನೆ ಘಟನೆ

ಮೈಸೂರು, ಡಿ.2(ಆರ್‌ಕೆ)– ಕಾರೊಂದು ರಸ್ತೆ ವಿಭಜಕದ ವಿದ್ಯುತ್ ಕಂಬಕ್ಕೆ ಅಪ್ಪಳಿಸಿದ ಪರಿಣಾಮ ಬೆಂಕಿ ಹೊತ್ತಿಕೊಂಡು ನಾಲ್ವರು ಯುವಕರಿಗೆ ತೀವ್ರ ಗಾಯಗಳಾಗಿರುವ ಘಟನೆ ಮೈಸೂರಿನ ಪುಷ್ಪಾಶ್ರಮದ ಬಳಿ ರಿಂಗ್ ರಸ್ತೆಯಲ್ಲಿ ಭಾನುವಾರ ಮುಂಜಾನೆ ಸಂಭವಿಸಿದೆ.

ಕಾರು ಚಾಲಕ ಮೊಹಮ್ಮದ್ ಇಬ್ರಾಹಿಂ, ಮೊಹಮ್ಮದ್ ಮಾಜ್, ಸೈಯದ್ ರೋಷನ್ ಹಾಗೂ ಮಹಮ್ಮದ್ ಅಸಿಪ್ ಗಾಯಗೊಂಡವರಾಗಿದ್ದು ಅವರನ್ನು ಜಯಲಕ್ಷ್ಮೀಪುರಂನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ನಾರಾಯಣ ಹೃದಯಾಲಯದ ಕಡೆಯಿಂದ ಮಣಿಪಾಲ್ ಆಸ್ಪತ್ರೆ ಕಡೆಗೆ ವೇಗವಾಗಿ ಬರುತ್ತಿದ್ದ ಸ್ಕೋಡಾ ಕಾರು ಭಾನುವಾರ ಮುಂಜಾನೆ ಸುಮಾರು 4 ಗಂಟೆ ವೇಳೆಗೆ ಪುಷ್ಪಾಶ್ರಮ ಬಳಿ ರಿಂಗ್ ರಸ್ತೆಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ.

ಕಾರು ಅಪ್ಪಳಿಸಿದ ರಭಸಕ್ಕೆ ಬೆಂಕಿ ಹೊತ್ತಿಕೊಂಡಿದೆ. ತಕ್ಷಣ ಕಾರಿನಲ್ಲಿದ್ದ ನಾಲ್ವರು ಹೊರಕ್ಕೆ ಜಿಗಿದಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಎನ್.ಆರ್.ಸಂಚಾರ ಠಾಣೆ ಇನ್ಸ್‌ಪೆಕ್ಟರ್ ರೇಖಾಬಾಯಿ ಹಾಗೂ ಸಿಬ್ಬಂದಿ, ಅಗ್ನಿಶಾಮಕ ದಳದ ಸಿಬ್ಬಂದಿ ಕರೆಸಿಕೊಂಡು ಬೆಂಕಿ ನಂದಿಸಿ, ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಿದರು. ಚಾಲಕ ಸೈಯದ್ ಇಬ್ರಾಹಿಂ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಕಾರು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.

‘ಮುಗಿಲೆತ್ತರದ ನಂಬಿಕೆ–ಅಪ್ಪ’ ಪುಸ್ತಕಕ್ಕಾಗಿ ಲೇಖನಗಳ ಆಹ್ವಾನ

ಮೈಸೂರು,ಡಿ.2–ಕನಸು ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್ ವತಿಯಿಂದ ‘ಮುಗಿಲೆತ್ತರದ ನಂಬಿಕೆ–ಅಪ್ಪ’ ಶೀರ್ಷಿಕೆಯಡಿ ಲೇಖನಗಳ ಸಂಗ್ರಹ ಪುಸ್ತಕವನ್ನು ಪ್ರಕಟಿಸುವ ಉದ್ದೇಶ ಹೊಂದಲಾಗಿದೆ. ಈ ಹಿನ್ನೆಲೆಯಲ್ಲಿ ಯುವ ಕವಿ, ಕವಯತ್ರಿ, ಲೇಖಕ, ಲೇಖಕಿಯರನ್ನು ಪ್ರೋತ್ಸಾಹಿಸುವುದು ಹಾಗೂ ತಂದೆ–ಮಕ್ಕಳ ಬಾಂಧವ್ಯವನ್ನು ಅಕ್ಷರಗಳ ಮೂಲಕ ಸ್ಮರಣೀಯವಾಗಿಸಲು ಈ ಪ್ರಯತ್ನ ಕೈಗೊಳ್ಳಲಾಗಿದೆ. ತಂದೆ–ತನ್ನ ನೂರು ಕಷ್ಟಗಳ ನಡುವೆಯೂ ಮನೆಗೆ ಸಂತೋಷ ತರುವ, ಮಕ್ಕಳಿಗೆ ಮೌನದ ಬೆಂಬಲವಾಗಿರುವ ಅಪರೂಪದ ವ್ಯಕ್ತಿ. ಅವರಿಗೆ ನೇರವಾಗಿ ಹೇಳಲಾಗದ ಅನೇಕ ಭಾವನೆಗಳನ್ನು ಪತ್ರದ ಮೂಲಕ ಹಂಚಿಕೊಳ್ಳುವ ವಿಶಿಷ್ಟ ಅವಕಾಶ ಇದಾಗಿದೆ. ಆಸಕ್ತರು ನಿಮ್ಮ ತಂದೆಯೊಂದಿಗೆ ಹೊಂದಿರುವ ಅನುಭವಗಳು, ನೆನಪುಗಳು ಹಾಗೂ ಅವರು ನಿಮಗೆ ಹೇಗೆ ಸ್ಫೂರ್ತಿ ಎನಿಸಿದ್ದಾರೆ ಎಂಬುದನ್ನು 2 ಪುಟಕ್ಕೆ ಮೀರದಂತೆ ಡಿ.31ರೊಳಗೆ ಜೇನು ಮಲೆ, ಗೋಲ್ಡ್ ಪಿಂಚ್ ಹೆರಿಟೇಜ್ ಲೇಔಟ್, ಹಂಚ್ಯಾ ರಸ್ತೆ, ಮೊ. 99721 25718 ಕಳುಹಿಸಲು ಕೋರಲಾಗಿದೆ.

ಮೈಸೂರಲ್ಲಿ ‘ಟೀಂ ಮೈಸೂರು’ನಿಂದ ಪಾರ್ಕ್, ಅರಳಿಕಟ್ಟೆಯಲ್ಲಿ ಬಿಸಾಡಿರುವ ಫೋಟೋಗಳಿಗೆ ಮುಕ್ತಿ

ಅವುಗಳ ಸಂಗ್ರಹಿಸಿ, ಸೂಕ್ತ ರೀತಿ ವಿಲೇವಾರಿ





ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಸಂಗ್ರಹಿಸಿರುವ ರಾಶಿ ರಾಶಿ ಫೋಟೋಗಳನ್ನು ವಿಲೇವಾರಿ ಕಾರ್ಯ ಮಾಡುತ್ತಿರುವುದು. ಬಲಚಿತ್ರದಲ್ಲಿ ಮಣ್ಣಿನಲ್ಲಿ ಕೊಳೆಯುವ ವಸ್ತುಗಳನ್ನು ಗುಂಡಿಯಲ್ಲಿ ಹಾಕಿ ನಂತರ ಅಲ್ಲಿ ಸಸಿ ನೆಡುವ ಮೂಲಕ ಟೀಂ ಮೈಸೂರು ತಂಡ ವಿಶೇಷ ಜಾಗೃತಿ ಮೂಡಿಸುತ್ತಿರುವುದು.

ಮೈಸೂರು, ಡಿ.2(ಜಿಎ)–ಮೈಸೂರಿನ ಉದ್ಯಾನವನ, ಅರಳಿಕಟ್ಟೆ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಅನಾಥವಾಗಿ ಬಿಸಾಡಿರುವ ದೇವರ ಮತ್ತು ಹಿರಿಯರ ಫೋಟೋಗಳಿಗೆ ಮುಕ್ತಿ ನೀಡುವ ಕಾರ್ಯದಲ್ಲಿ ಟೀಂ ಮೈಸೂರು ತಂಡ ತೊಡಗಿದೆ.

ನಗರದ ಪರಿಸರ ಕಾಳಜಿಯಿಂದ ಹುಟ್ಟಿಕೊಂಡಿರುವ ಟೀಂ ಮೈಸೂರು ತಂಡವು ಸಾಕಷ್ಟು ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದು, ಇದೀಗಾ 4 ವಾರದಿಂದ ಮೈಸೂರಿನ ಉದ್ಯಾನವನ, ಅರಳಿಕಟ್ಟೆಗಳ ಬಳಿ ಇದ್ದ ಫೋಟೋ ಫ್ರೇಮ್‌ಗಳನ್ನು ಸಂಗ್ರಹಿಸಿ, ಅವುಗಳನ್ನು ಬಿಡಿ ಬಿಡಿಯಾಗಿ ಬೇರ್ಪಡಿಸುವ ಮೂಲಕ ನಿಯಮಾನುಸಾರ ವಿಲೇವಾರಿ ಮಾಡುತ್ತಿದ್ದಾರೆ.

ಈ ಹಿಂದೆ ದೇವರ ಮತ್ತು ಹಿರಿಯರ ಫೋಟೋಗಳು ಡ್ಯಾಮೇಜ್ ಆದರೆ, ಅದನ್ನು ಯಾವುದಾದರೂ ನದಿಯಲ್ಲಿ ಹಾಕುತ್ತಿದ್ದರು. ಇದರಿಂದ ನೀರು ಕಲುಷಿತವಾಗುತ್ತದೆ. ಜಲಚರ ಪ್ರಾಣಿಗಳು ಮತ್ತು ನೀರಿಗಿಳಿಸುವ ಜನರಿಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ದೇವರು, ಹಿರಿಯ ಫೋಟೋಗಳನ್ನು ಉದ್ಯಾನವನ, ಅರಳಿಕಟ್ಟೆ, ದೇವಸ್ಥಾನ ಬಳಿ ಇಟ್ಟು ಹೋಗುತ್ತಿದ್ದಾರೆ. ಇದನ್ನು ಗಮನಿಸಿರುವ ಧಾರ್ಮಿಕ ಚಿಂತಕರು ಇದಕ್ಕೆ ಪರಿಹಾರ ನೀಡಬೇಕು ಎಂದು ಟೀಂ ಮೈಸೂರು ತಂಡದೊಂದಿಗೆ ಚರ್ಚಿಸಿದ್ದಾಗ ಫೋಟೋಗಳಿಗೆ ಮುಕ್ತಿ ನೀಡಲು ಮುಂದಾಗಿದ್ದಾರೆ.

ದೇವರ ಹಳೆಯ ಫೋಟೋಗಳ ವಿಲೇವಾರಿ ಆರಂಭಿಸುವ ಮುನ್ನ ಪ್ರಮುಖ ಉದ್ಯಾನವನವನ್ನು ಆಯ್ಕೆ ಮಾಡಿಕೊಂಡು ನಂತರ ಅಲ್ಲಿರುವ ಸ್ಥಳೀಯ ಸಂಘ–ಸಂಸ್ಥೆ ಮತ್ತು ಮಹಾನಗರಪಾಲಿಕೆ ಮಾಜಿ ಸದಸ್ಯರಿಗೆ ಸಹಕಾರ ನೀಡುವಂತೆ ಸಂದೇಶ ತಲುಪಿಸಿ, ಅವರನ್ನು ತೊಡಗಿಸಿಕೊಂಡು ಉದ್ಯಾನವನದಲ್ಲಿರುವ ಫೋಟೋಗಳನ್ನು ಸಂಗ್ರಹಿಸುತ್ತಿದ್ದಾರೆ.

ಬೇರ್ಪಡಿಸುವುದು: ಫೋಟೋಗಳನ್ನು ಸಂಗ್ರಹಿಸಿದ ನಂತರ ಉದ್ಯಾನದ ಒಂದು ಭಾಗದಲ್ಲಿ ತಂಡದ ಸದಸ್ಯರು ಕುಳಿತು ಫೋಟೋಗಳಲ್ಲಿರುವ ಗಾಜು, ಮರದ ಕಟ್ಟಿಗೆ, ರಟ್ಟಿನ ಪದಾರ್ಥ, ಪ್ಲಾಸ್ಟಿಕ್‌ಗಳನ್ನು ಮೊದಲು ಬೇರ್ಪಡಿಸಿಕೊಳ್ಳುತ್ತಾರೆ. ಹಂತ ಹಂತವಾಗಿ ಎಲ್ಲವನ್ನು ವಿಭಜಿಸುತ್ತಾರೆ.

ಗಾಜಿಗೆ ಡಿಮ್ಯಾಂಡ್ ಇಲ್ಲ: ಬಹುತೇಕ ಎಲ್ಲಾ ಫೋಟೋ ಫ್ರೇಮ್‌ಗಳಲ್ಲಿ ಗಾಜು ಹೊಡೆದು ಹೋಗಿರುತ್ತದೆ. ಅದನ್ನು ಗಮನಿಸಿ, ಸೂಕ್ಷ್ಮವಾಗಿ ವಿಂಗಡಿಸಿ, ನಂತರ ಕೆಲವರು ಅದು ನಮಗೆ ಉಪಯೋಗಕ್ಕೆ ಬರುತ್ತದೆ ಎಂದು ಕೇಳಿ ಪಡೆದುಕೊಂಡು ಹೋಗುತ್ತಿದ್ದಾರೆ. ಉಳಿದಿದ್ದನ್ನು ಗುಜುರಿಗೆ ನೀಡಲಾಗುತ್ತಿದೆ. ಗುಜುರಿಯಲ್ಲಿ ಗಾಜಿಗೆ ಬೆಲೆ ಇಲ್ಲ ಎಂದು ಉಚಿತವಾಗಿಯೇ ಗುಜರಿಗೆ ನೀಡಲಾಗುತ್ತದೆ.

ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ರಾಮಕೃಷ್ಣ ನಗರದ ಯೋಗ ಉದ್ಯಾನವನ, ನರಸಿಂಹರಾಜ ಕ್ಷೇತ್ರದಲ್ಲಿರುವ ಶಿವಾಜಿ ಉದ್ಯಾನವನ, ಯಾದವಗಿರಿಯಲ್ಲಿರುವ ಚೆಲುವಾಂಬ ಉದ್ಯಾನವನದಲ್ಲಿ ಈವರೆಗೂ ಪ್ರತಿ ಭಾನುವಾರ ಬೆಳಗ್ಗೆ 7 ರಿಂದ 10ರವರೆಗೆ ಸಂಗ್ರಹಣೆ ಕಾರ್ಯ ನಡೆಸಿ, ಬರೋಬ್ಬರಿ 2,100 ಫೋಟೋಗಳಿಗೆ ಮುಕ್ತ ನೀಡಿದ್ದಾರೆ.

ಸಸಿ ನೆಟ್ಟು ಜಾಗೃತಿ: ಫೋಟೋ ಫ್ರೇಮ್‌ನಲ್ಲಿರುವ ಮರದ ಕಟ್ಟಿಗೆ, ರಟ್ಟಿನ ಪದಾರ್ಥ ಮಣ್ಣಿನಲ್ಲಿ ಕೊಳೆಯುತ್ತದೆ. ಈ ಹಿನ್ನೆಲೆಯಲ್ಲಿ ಅವುಗಳನ್ನು ಉದ್ಯಾನವನದ ಒಂದು ಭಾಗದಲ್ಲಿ ಆಳವಾದ ಗುಂಡಿ ತೆಗೆದು ಸುರಿದು ನಂತರ ಅಲ್ಲಿ ಒಂದು ಸಸಿ ನೆಡುವ ಮೂಲಕ ಟೀಂ ಮೈಸೂರು ತಂಡವು ವಿಶೇಷವಾಗಿ ಜಾಗೃತಿ ಮೂಡಿಸುತ್ತಿದ್ದಾರೆ.

ಪ್ಲಾಸ್ಟಿಕ್ ವಿಲೇವಾರಿ ತಲೆನೋವು: ಹಳೆಯ ಫೋಟೋ ಫ್ರೇಮ್‌ಗಳಿಗೆ ಮರದ ಕಟ್ಟಿಗೆಗಳನ್ನು ಬಳಸಲಾಗುತ್ತಿತು. ಆದರೆ, ಇಂದು ಎಲ್ಲಾ ಫೋಟೋಗಳಿಗೆ ಪ್ಲಾಸ್ಟಿಕ್ ಬಳಕೆ ಮಾಡಲಾಗುತ್ತಿದೆ. ಅದನ್ನು ನಗರ ಪಾಲಿಕೆಗೆ ನೀಡಬೇಕು. ಆದರೆ, ಪಾಲಿಕೆ ಸಿಬ್ಬಂದಿ ಅದನ್ನು ಸಂಗ್ರಹಿಸಲು ಹಿಂದೇಟು ಹಾಕುತ್ತಿದ್ದಾರೆ. ಆದರೆ, ಟೀಂ ಮೈಸೂರು ತಂಡದ ಸದಸ್ಯರು ಪಾಲಿಕೆ ಸಿಬ್ಬಂದಿಯ ಮನವೊಲಿಸಿ ಪ್ಲಾಸ್ಟಿಕ್ ವಸ್ತುಗಳನ್ನು ಕಷ್ಟಪಟ್ಟು ವಿಲೇವಾರಿ ಮಾಡಿಸುತ್ತಿದ್ದಾರೆ.

ವಿಭಿನ್ನ ತಂಡ: ಒಂದೇ ವಯೋಮಾನ ಅಥವಾ ವೃತ್ತಿಯ ಸದಸ್ಯರನ್ನು ಅನೇಕ ಸಂಘ–ಸಂಸ್ಥೆಗಳಲ್ಲಿ ಕಾಣುವುದು ಸಾಮಾನ್ಯ. ಆದರೆ, ಟೀಂ ಮೈಸೂರು ತಂಡವೂ ಬಹಳ ವಿಭಿನ್ನವಾಗಿದ್ದು, ತಂಡದಲ್ಲಿ ವಕೀಲರು, ನಿವೃತ್ತ ಅಧಿಕಾರಿಗಳು, ಐಟಿ ಉದ್ಯೋಗಿಗಳು, ಗೃಹಿಣಿಯರು ಸೇರಿದಂತೆ 36 ಮಂದಿ ಸದ್ಯರನ್ನೊಳಗೊಂಡಿದ್ದು, ಗೋಕುಲ್ ಗೋವರ್ಧನ್, ಕಿರಣ್ ಜೈರಾಮ್‌ಗೌಡ, ಅನಿಲ್‌ಜೈನ್, ಹಿರಿಯಣ್ಣ, ಆನಂದ್, ಮನೋಹರ್, ರಾಮಪ್ರಸಾದ್, ಮುರಳಿ, ಯತೀಶ್, ಬಾಲಕೃಷ್ಣ, ಹರೀಶ್ ಶೆಟ್ಟಿ, ಮುರಳಿ, ಬಸವರಾಜ್ ಬಳ್ಳಾರಿ, ಪ್ರಸನ್ನ ರಾಜಗುರು, ಶ್ರೀನಿಧಿ, ಧರ್ಮೆಂದ್ರ, ನಾಗೇಂದ್ರ, ಶ್ರೀನಿವಾಸ್, ಕೃಷ್ಣ, ರಮೇಶ್, ಚಂದನ್, ರಾಜಾರಾಮ್, ಉಮಾ, ಸಹನಾ, ಜ್ಯೋತಿ, ಲೀಲಾ ವೆಂಕಟೇಶ್, ನಂದಿನಿ, ಕುಮಾರಿ ಸುಕೃತ, ಪುಟಾಣಿ ಮಿನುಗು ಸೇರಿದಂತೆ 30 ಮಂದಿ ಸದಸ್ಯರು ಪಾಲ್ಗೊಂಡಿದ್ದರು.

ಈ ಕಾರ್ಯವನ್ನು ನಡೆಸುತ್ತಿರುವ ಟೀಂ ಮೈಸೂರು ತಂಡಕ್ಕೆ ಸಾರ್ವಜನಿಕರಿಂದ ಶ್ಲಾಘನೆ ದೊರೆಯುತ್ತಿದೆ. ನ.1ರಂದು ಓವೆಲ್ ಮೈದಾನದಲ್ಲಿ ಜಿಲ್ಲಾಡ ಳಿತದಿಂದ ನಡೆದ ರಾಜ್ಯೋತ್ಸವದಲ್ಲಿ ಟೀಂ ಮೈಸೂರು ತಂಡಕ್ಕೆ ರಾಜ್ಯೋತ್ಸವ ಪುರಸ್ಕಾರ ನೀಡಿ, ಅಭಿನಂದಿಸಲಾಗಿದೆ. ಡಿ.7ರಂದು ಸರಸ್ವತಿಪುರಂನ ಜವರೇಗೌಡ ಉದ್ಯಾನವನ ಬೆಳಿಗ್ಗೆ 730ರಿಂದ 9:30ರವರೆಗೆ ಫೋಟೋ ಫ್ರೇಮ್ ಸಂಗ್ರಹ ನಡೆಯಲಿದೆ. ಮಾಹಿತಿಗೆ. ಮೊ.9880837370, 741133789

ನಾಳೆ ಶ್ರೀ ದತ್ತಾತ್ರೇಯ ಜಯಂತಿ

ಮೈಸೂರು, ಡಿ.2– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಡಿ.4ರಂದು ಗುರುವಾರ ಹುಣ್ಣಿಮೆ ಪ್ರಯುಕ್ತ ಶ್ರೀ ದತ್ತಾತ್ರೇಯ ದೇವರಿಗೆ ವಿಶೇಷ ಪೂಜೆ ಏರ್ಪಡಿಸಲಾಗಿದೆ. ಮೇಷ, ಸಿಂಹ, ವೃಶ್ಚಿಕ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಭಾದಾನಿವಾರಕ ಮಹಾ ಸುದರ್ಶನ ಹೋಮ ಮೃತ್ಯುಂಜಯ ಹೋಮ ಸ್ವಯಂವರ ಪಾರ್ವತೀ ಹೋಮ ಏರ್ಪಡಿಸಲಾಗಿದೆ. ಬೆಳಿಗ್ಗೆ 9.30ಕ್ಕೆ ಪ್ರಾರಂಭ ವಾಗಿ 12.30ಕ್ಕೆ ಮಹಾ ಪೂರ್ಣಾಹುತಿ ಮತ್ತು ಮಹಾಮಂಗಳಾರತಿ ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಬಾರ್‌ನಲ್ಲಿ ಲಂಚ ಸ್ವೀಕರಿಸುತ್ತಿದ್ದ ಸರ್ವೇಯರ್ ಲೋಕಾಯುಕ್ತ ಬಲೆಗೆ



ಕೆ.ಆರ್.ರವೀಂದ್ರ

ಮೈಸೂರು,ಡಿ.2(ಆರ್‌ಕೆ)–ಸ್ಕೆಚ್ ಮಾಡಿ ಕೊಡಲು ರೈತನಿಂದ ಲಂಚ ಸ್ವೀಕರಿಸುತ್ತಿದ್ದ ಸರ್ವೇಯರ್ ಹುಣಸೂರಿನ ಬಾರ್‌ವೊಂದರಲ್ಲಿ ಸೋಮವಾರ ಸಂಜೆ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಪಿರಿಯಾಪಟ್ಟಣದ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಸರ್ವೇಯರ್ ಕೆ.ಆರ್.ರವೀಂದ್ರ ಪೊಲೀಸರಿಗೆ ಸಿಕ್ಕಿಬಿದ್ದವರು. ಪಿರಿಯಾಪಟ್ಟಣ ತಾಲೂಕು ಸುಂಡುವಾಳಿಯ ರಾಘವೇಂದ್ರ ತಮ್ಮ ಜಮೀನಿನ 11/ಎ, ಸ್ಕೆಚ್ ಗಾಗಿ ಅರ್ಜಿ ಸಲ್ಲಿಸಿದ್ದರು. ಸ್ಕೆಚ್ ತಯಾರಿಸಿ ಕೊಡಲು ರವೀಂದ್ರ ಅವರು 90 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಭಾನುವಾರ ಸಂಜೆ ಸುಮಾರು 6.30 ಗಂಟೆ ವೇಳೆಗೆ ಹುಣಸೂರು ಪಟ್ಟಣದ ಬಾರ್‌ವೊಂದರಲ್ಲಿ 30 ಸಾವಿರ ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಇನ್ಸ್‌ಪೆಕ್ಟರ್ ವಿಜಯಕುಮಾರ್ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿ ರವೀಂದ್ರರನ್ನು ಹಣದ ಸಮೇತ ವಶಕ್ಕೆ ಪಡೆದುಕೊಂಡರು. ಲೋಕಾಯುಕ್ತ ಟಿ.ಜೆ. ಉದೇಶ್ ನಿರ್ದೇಶನದಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಬಳಿಕ ಇಂದು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.12.2025 ಬುಧವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025 ರಿಂದ 15.12.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಶ್ರೀ ಗೀತಾ ಪ್ರಚಾರಿಣಿ ಸಭಾ ಟ್ರಸ್ಟ್ (ಬ್ರಹ್ಮೀಭೂತ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳಿಂದ ಸ್ಥಾಪಿತ ಗೀತಾಮಂದಿರ, ಮೈಸೂರು:** 91ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 8ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, 8.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಸಂಜೆ 5.45ಕ್ಕೆ ಶ್ರೀ ವಿದ್ಯಾವಿಷ್ಣು ಸಭಾ ಟ್ರಸ್ಟ್ ಇವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30ರಿಂದ ಬಿ.ಎನ್. ಮಾಧವಾಚಾರ್ ಅವರಿಂದ ಶ್ರೀ ರಾಮಚಾರಿತ್ರ ಮಂಜರಿ. ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ತಲೆ ಕೂದಲು, ಗಂಟಲು, ದಂತ ಮತ್ತು ಆಮವಾತಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.
- **ಮಹಾಜನ ಕಾನೂನು ಕಾಲೇಜು :** ಸಾಂವಿಧಾನಿಕ ಆಡಳಿತ ಮತ್ತು ನ್ಯಾಯಾಂಗ : ಮುಂದಿನ ಹಾದಿ ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಒಡಿಸ್ಸಾ ನ್ಯಾಯಾಧೀಶ ಕೃಷ್ಣ ಎಸ್. ದೀಕ್ಷಿತ್, ಕರ್ನಾಟಕ ರಾಜ್ಯ ಕಾನೂನು ವಿವಿ, ಹುಬ್ಬಳ್ಳಿ ಕುಲಪತಿ ಪ್ರೊ.ಸಿ. ಬಸವರಾಜು, ಅಧ್ಯಕ್ಷತೆ : ಮಹಾಜನ ಎಜುಕೇಷನ್ ಸೊಸೈಟಿ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಉಪಸ್ಥಿತರು : ವಕೀಲ ಪ್ರಶಾಂತ್ ಜಿ. ಸುರಾಂಗಿಣಿ, ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಆಡಳಿತಾಧಿಕಾರಿ ಪ್ರೊ. ಪಿ. ಸರೋಜಮ್ಮ, ಪ್ರಿನ್ಸಿಪಾಲ್ ಶ್ರೀಮತಿ ಕೆ. ಸೌಮ್ಯ, ಸ್ಥಳ: ಸುಬ್ಬಲಕ್ಷ್ಮಿ ಹಾಲ್, ಬೆಳಗ್ಗೆ 10ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಆಂತರಿಕ ಗುಣಮಟ್ಟ ಖಾತರಿ ಘಟಕ :** ಔಟ್‌ಕಂ ಬೇಸ್ಡ್ ಎಜುಕೇಷನ್ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಉಪಸ್ಥಿತರು : ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಸಿಐಐಎಲ್ ವಿಶ್ರಾಂತ ನಿರ್ದೇಶಕ ಪ್ರೊ. ಸಿ.ಜಿ. ವೆಂಕಟೇಶಮೂರ್ತಿ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ 30ನೇ ಸಂಗೀತ ಸಮ್ಮೇಳನ, ಬೆಳಗ್ಗೆ 10 ರಿಂದ ವಿದುಷಿ ಕೋವಿಲಡಿ ಆರ್. ಕಲಾರವರ ಶಿಷ್ಯ ವೃಂದದವರಿಂದ ಸಂಗೀತಾಂಜಲಿ, ಬೆಳಗ್ಗೆ 10.30ಕ್ಕೆ ವಿದುಷಿ ಡಾ. ಉಮಾಕುಮಾರ್ ಅವರಿಂದ ವಿದ್ವತ್ ಗೋಷ್ಠಿ, ವಿಶ್ವದ ಪ್ರಮುಖ ಶಾಸ್ತ್ರೀಯ ಸಂಗೀತ ಪದ್ಧತಿಗಳ ಸಮಗ್ರ ಅವಲೋಕನ, ಬೆಳಗ್ಗೆ 11.30 ರಿಂದ ವಿದ್ವಾನ್ ಶ್ರೀಕಾಂತಂ ನಾಗೇಂದ್ರಶಾಸ್ತ್ರಿ ಅವರಿಂದ ನವತಿ ಮೇಳ ತಾಳ ಮಾಲಿಕಾ–90 ಮೇಳ ಮತ್ತು 90 ಮೇಳ ತಾಳಗಳ ಲಕ್ಷ್ಯ–ಲಕ್ಷಣ ಸಹಿತ ನೂತನ ಅನುಸಂಧಾನ, ಸಂಜೆ 5.30ಕ್ಕೆ ವಿದುಷಿ ಡಾ. ಸುರಭಿ ಪುಸ್ತಕಂ ಅವರಿಂದ ವೀಣೆ, ವಿದ್ವಾನ್ ಸಾಯಿ ಶಿವು–ಮೃದಂಗ, ಸಂಜೆ 6.30 ರಿಂದ ವಿದ್ವಾನ್ ರಾಮಕೃಷ್ಣಮೂರ್ತಿ, ಚೆನ್ನೈ ಅವರಿಂದ ಗಾಯನ, ವಿದ್ವಾನ್ ನಿಶಾಂತ್ ಚಂದ್ರನ್–ವಯೋಲಿನ್, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್–ಘಟಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ದತ್ತಾತ್ರೇಯ ಜಯಂತಿ ಮಹೋತ್ಸವ, ಬೆಳಿಗ್ಗೆ 7 ಗಂಟೆಗೆ ಕಾರ್ಯಸಿದ್ಧಿ ಹನುಮಾನ್ ಸ್ವಾಮಿಗೆ 13ನೇ ವಾರ್ಷಿಕ ಅಭಿಷೇಕ, ಬೆಳಿಗ್ಗೆ 11 ಗಂಟೆಗೆ ಹನುಮದ್ ವ್ರತ ಪೂಜೆ, ಸಂಜೆ 5 ಗಂಟೆಗೆ ರಥೋತ್ಸವ, ಸಂಜೆ 6 ಗಂಟೆಗೆ ಸನಾತನ ದತ್ತ ಬಂಧು ಮಹೋತ್ಸವ ಮತ್ತು ರಾತ್ರಿ 8 ಗಂಟೆಗೆ ಹನುಮಾನ್ ದೇವಾಲಯದಲ್ಲಿ ಲಕ್ಷ ದೀಪೋತ್ಸವ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.
- **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 25ನೇ ವರ್ಷದ ಹನುಮಜಯಂತಿ ಮಹೋತ್ಸವ, ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ಪ್ರಸಾದ ಸೇವೆ, ಧಾರ್ಮಿಕ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ.
- **ಮರಿಮಲ್ಲಪ್ಪ ಪ್ರೌಢಶಾಲೆ :** ಅಂತರ ಪ್ರೌಢಶಾಲಾ ಪ್ರಬಂಧ ಮತ್ತು ಚದುರಂಗ ಸ್ಪರ್ಧೆಗಳ ಬಹುಮಾನ ವಿತರಣೆ, ಜ್ಯೋತಿ ಹಸ್ತಪತ್ರಿಕೆ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಿ ಸ್ವಾಮಿ, ಮುಖ್ಯ ಆಹ್ವಾನಿತರು : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಉಪಸ್ಥಿತರು : ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳಾ ಮುದ್ದುಮಾದಪ್ಪ, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಸ್. ಮಮತ, ಮುಖ್ಯ ಶಿಕ್ಷಕ ಹೆಚ್.ಎಸ್. ಮಹೇಶ್, ಸ್ಥಳ: ಶಾಲಾ ಗ್ಯಾಲರಿ ಹಾಲ್, ಮಧ್ಯಾಹ್ನ 2ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ವ್ಯಾಸತೀರ್ಥಾಚಾರ್ಯ ಅವರಿಂದ ಮಹಾಭಾರತ ತಾತ್ಪರ್ಯ ನಿರ್ಣಯ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಕಲಾ ಸಪ್ತಮಿ ವಾರದ ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ಸಂಚಾರಿ ಥಿಯೇಟರ್ ಅಭಿನಯಿಸುವ ರೊಶೊಮೊನ್ ನಾಟಕ ಪ್ರದರ್ಶನ, ಪಾತ್ರದಾರಿಗಳು : ವಿ. ನಾಗರಾಜ್, ಚಿರಂತನ್, ಸಂದೀಪ್ ಜೈನ್, ಧನುಷ್ ನಾಗ್, ಸೂರಜ್ ನಾಯ್ಕ್, ಚುಕ್ಕಿ ರ.ಮ., ಅಭಿಷೇಕ್ ನಾಯ್ಕ್, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6 ರಿಂದ.
- **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಹನುಮ ಜಯಂತಿ, ಬೆಳಗ್ಗೆ ಶ್ರೀ ಸ್ವಾಮಿಯವರಿಗೆ ವಿಶೇಷ ಪೂಜೆ, ಅಲಂಕಾರ, ಸಂಜೆ 6.30ಕ್ಕೆ ಶ್ರೀ ಕೃಷ್ಣ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ, ಹನುಮಂತನಗರ, ಬನ್ನಿಮಂಟಪ ಸಿ ಬಡಾವಣೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ :** ಸಂಜೆ ಶಿವದೀಪೋತ್ಸವ – ಕೃತ್ತಿಕೋತ್ಸವ, ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಂಜೆ 5.30ಕ್ಕೆ ಶ್ರೀ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವದ ಪ್ರಸಾರ ರಥಕ್ಕೆ ಪೂಜೆ ಸಲ್ಲಿಸಿ ಚಾಲನೆ, 6.00ಕ್ಕೆ ಜೆಎಸ್‌ಎಸ್ ವಸತಿ ಶಾಲಾ ಸಂಗೀತ ಶಿಕ್ಷಕರು ಹಾಗೂ ಮಕ್ಕಳಿಂದ ಸಾಮೂಹಿಕ ಪ್ರಾರ್ಥನೆ. ರಾತ್ರಿ 7.00ಕ್ಕೆ ಇಲ್ಯುಮಿನ್ ನಾಲೆಡ್ಜ್ ರಿಸೋರ್ಸಸ್ ಲಿಮಿಟೆಡ್‌ನ ಸಂಶೋಧಕರಾದ ಡಾ. ನಾಗಮಣಿ ಎಸ್. ಖಂಡ್ರೆ ಅವರಿಂದ ಉಪನ್ಯಾಸ, 8.00ಕ್ಕೆ ಮಹಾಮಂಗಳಾರತಿ, ಪ್ರಾಕಾರೋತ್ಸವ, ದೀಪೋತ್ಸವಗಳು, ಶ್ರೀಕ್ಷೇತ್ರದ ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ–ಪಾರಿವಾಳದಿಂದ ಡ್ರೋನ್‌ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಪಿ. ರೇವತಿ, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ನಮ್ಮ ಆರೋಗ್ಯ–ಅಂತರರಾಷ್ಟ್ರೀಯ ವಿಶೇಷಚೇತನರ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ತಿಳಿಸಿಕೊಡಲಿದ್ದಾರೆ ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ವಾಕ್–ಭಾಷಾ ದೋಷ ವಿಭಾಗದ ಮುಖ್ಯಸ್ಥರಾದ ಡಾ. ಜಯಶ್ರೀ ಶಾನ್ ಬಾಳ್. ಇವರೊಂದಿಗೆ ಭಾಗವಹಿಸುತ್ತಾರೆ –ಬೇದ್ರೆ ಮಂಜುನಾಥ, 8.30 ಚಿತ್ರಗೀತೆಗಳು, 9.00 ಮನೋನಂದ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ, ಮೈಸೂರು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಪಿ. ಸುರಭಿ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ನಿರ್ಮಾಣ, ನಿರ್ವಹಣೆ–ಭಾಗವಹಿಸುತ್ತಾರೆ ಮೈಸೂರಿನ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಡೀನ್ ಡಾ.ಹೆಚ್.ಎಸ್. ಪ್ರಸನ್ನ ಮತ್ತು ಯೋಜನಾ ಸಂಯೋಜಕರಾದ ಮಂಜುನಾಥ್, ಪ್ರಸ್ತುತಿ –ಎನ್. ಕೇಶವಮೂರ್ತಿ, 6.50 ಕೃಷಿರಂಗ–ಚಳಿಗಾಲದಲ್ಲಿ ರೇಷ್ಮೆಹುಳು ಸಾಕಾಣಿಕೆ ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಎಲ್.ಸತೀಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು–ವಿಶೇಷ ಕಾರ್ಯಕ್ರಮ ಸರಣಿ, ಭಾಗವಹಿಸುವ ಅತಿಥಿಗಳು ಮೈಸೂರಿನ ಹಿರಿಯ ಕುಟುಂಬ ವೈದ್ಯದಂಪತಿ ಡಾ. ನಾಗೇಂದ್ರ ಪ್ರಸಾದ್ ಮತ್ತು ಡಾ. ರಮಾ ನಾಗೇಂದ್ರ ಪ್ರಸಾದ್, ನಡೆಸಿಕೊಡುತ್ತಾರೆ– ಟಿ.ವಿ. ವಿದ್ಯಾಶಂಕರ್, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10,00 ಜನಪದ ಸಂಗೀತ, 10.30 ಸವಿನೆನಪು

ರಾಜಕೀಯ ನಮ್ಮಪ್ಪನ ಆಸ್ತಿಯಾ?; ಏನ್ ಆಗುತ್ತೋ ಆಗಲಿ; ನಾನು ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ

ಅಚ್ಚರಿ ಮೂಡಿಸಿರುವ ಸಿಎಂ ಸಿದ್ದರಾಮಯ್ಯನವರ ಹೊಸ ವರಸೆ ಡೈಲಾಗ್!

ಬೆಂಗಳೂರು: ರಾಜಕೀಯ ಶಾಶ್ವತ ಅಲ್ಲ. ನಾನು ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ ರಾಜಕೀಯ ನಮ್ಮಪ್ಪನ ಆಸ್ತಿಯಾ, ಏನ್ ಆಗುತ್ತೋ ಆಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಚ್ಚರಿ ಮಾತುಗಳನ್ನು ಆಡಿದ್ದಾರೆ.

ವಿಧಾನಸೌಧದಲ್ಲಿ ಸಭೆ ಮುಗಿಸಿ ಹೊರಬರುತ್ತಿದ್ದ ಸಿಎಂ ಸಿದ್ದರಾಮಯ್ಯಗೆ ಅಡ್ಡ ಬಂದ ಬೇಳೂರು ಗೋಪಾಲಕೃಷ್ಣ, ಮೊದಲು ಹಾಸ್ಯದ ಧಾಟಿಯಲ್ಲೇ ನಾಟಿ ಕೋಳಿ ಸಾಂಬಾರ್ ಹೇಗಿತ್ತು ಸಾರ್ ಎಂದು ಪ್ರಶ್ನಿಸಿದ್ದಾರೆ. ಆದರೆ ಸಿಎಂ ಅವರ ಉತ್ತರ ಸಂಪೂರ್ಣ ಗಂಭೀರವಾಗಿತ್ತು.

ರಾಜಕೀಯ ಶಾಶ್ವತ ಅಲ್ಲ ಗೋಪಾಲಕೃಷ್ಣ. ನಾನು ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ರಾಜಕೀಯ ನಮ್ಮಪ್ಪನ ಆಸ್ತಿಯಾ, ಏನ್ ಆಗುತ್ತೋ ಆಗಲಿ ಎಂದು ಅಚ್ಚರಿ ಮಾತುಗಳನ್ನು ಆಡಿದ್ದಾರೆ. ಈ ಒಂದು ಸಣ್ಣ ಸಂಭಾಷಣೆ ರಾಜ್ಯ ರಾಜಕಾರಣದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ.


ಬೇಳೂರು ಗೋಪಾಲಕೃಷ್ಣ ಸಿಎಂ ಸಿದ್ದರಾಮಯ್ಯ ಅವರ ಮಾತನಾಡಿಸಿದಾಗ ಈ ವೇಳೆ ಸಿಎಂ ಸಿದ್ದರಾಮಯ್ಯ

ಸಚಿವ ಸ್ಥಾನಕ್ಕೆ ಆಕಾಂಕ್ಷಿಯಾಗಿರುವ ಸಾಗರ ಶಾಸಕ ಆಡಿರುವ ಮಾತು ಬಹಳಷ್ಟು ಚರ್ಚೆಗೆ ಕಾರಣವಾಗಿದೆ.

ಡಿಕೆಶಿ ಮನೆಯಲ್ಲಿ ನಡೆದ ಬ್ರೇಕ್‌ಫಾಸ್ಟ್ ಭೇಟಿ, ಅಧಿಕಾರ ಹಂಚಿಕೆ ಯುದ್ಧ, ದೆಹಲಿಯಲ್ಲಿ ನಡೆಯುತ್ತಿರುವ ಸಭೆಗಳು ಎಲ್ಲದರ ನಡುವೆಯೂ ಸಿಎಂ ಸಿದ್ದರಾಮಯ್ಯ ಹೈ ಕಮಾಂಡ್ ಮಾತೇ ಅಂತಿಮ ಎಂದು ಹೇಳುತ್ತಿದ್ದಾರೆ. ಇದೀಗ ಅಚ್ಚರಿ ಹೇಳಿಕೆ ಕೊಟ್ಟ ಸಿಎಂ ಏನ್ ಆಗುತ್ತೋ ಆಗಲಿ, ನಾನು ತಲೆ ಕಡೆಸಿಕೊಳ್ಳುವುದಿಲ್ಲ, ರಾಜಕೀಯ ಶಾಶ್ವತ ಅಲ್ಲ, ನಮ್ಮಪ್ಪನ ಆಸ್ತಿಯೂ ಅಲ್ಲ ಎಂದು ಅಚ್ಚರಿ ಹೇಳಿಕೆ ನೀಡಿದ್ದಾರೆ.

ಕಳೆದ ಕೆಲವು ತಿಂಗಳುಗಳಿಂದ ಸಚಿವ ಸ್ಥಾನಕ್ಕಾಗಿ ತೀವ್ರ ಲಾಬಿ ಮಾಡುತ್ತಿರುವ ಬೇಳೂರು ಗೋಪಾಲಕೃಷ್ಣ ದೆಹಲಿಯಲ್ಲಿಯೂ ಹೈಕಮಾಂಡ್‌ಗೆ ಒತ್ತಡ ಹೇರಿದ್ದರು. ಆದರೆ ಸಿಎಂ ಅವರ ಈ ಮಾತುಗಳು ಸಚಿವ ಸ್ಥಾನ ಖಾತರಿಯಿಲ್ಲ ಎಂಬ ಸ್ಪಷ್ಟ ಸಂದೇಶವನ್ನೇ ನೀಡಿವೆ ಎಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ನಾನೇ ಹಳ್ಳಿಯಿಂದ ಕೋಳಿ ತರಿಸಿ ಅಡುಗೆ ಮಾಡಲು ಹೇಳಿದ್ದೆ; ಡಿಕೆಶಿ ನಾನ್‌ವೆಜ್ ಮುಟ್ಟಲ್ಲ!

ಸಿಎಂ ಸಿದ್ದರಾಮಯ್ಯ ಉಪಹಾರ ಬಳಿಕ ಹೋಂ ಟೂರ್

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ನಡೆಯುತ್ತಿರುವ ಗುದ್ದಾಟ ಸಿಎಂ-ಡಿಸಿಎಂ ಬ್ರೇಕ್ ಫಾಸ್ಟ್ ಮೀಟಿಂಗ್ ನಲ್ಲಿ ಸದ್ದು ಮಾಡುತ್ತಿದೆ. ಕಳೆದ ಮೂರ್ನಾಲ್ಕು ದಿನದ ಹಿಂದೆ ಸಿಎಂ ಸಿದ್ದರಾಮಯ್ಯ ನಿವಾಸದಲ್ಲಿ ಬ್ರೇಕ್ ಫಾಸ್ಟ್ ಮೀಟಿಂಗ್ ಆಯೋಜನೆ ಮಾಡಲಾಗಿತ್ತು. ಡಿಸಿಎಂ ಡಿ.ಕೆ ಶಿವಕುಮಾರ್ ಬ್ರೇಕ್‌ಫಾಸ್ಟ್ ಮೀಟಿಂಗ್‌ಗೆ ಆಗಮಿಸಿದ್ದರು. ಇಂದು ಎರಡನೇ ಬ್ರೇಕ್‌ಫಾಸ್ಟ್ ಮೀಟಿಂಗ್ ಡಿಕೆಶಿ ನಿವಾಸದಲ್ಲಿ ನಡೆದಿದೆ.

ನಾನ್‌ವೆಜ್ ಸೇವನೆ ಬಿಟ್ಟಿರುವ ಡಿ.ಕೆ. ಶಿವಕುಮಾರ್: ಇಂದು ಡಿ.ಕೆ. ಶಿವಕುಮಾರ್ ನಿವಾಸದಲ್ಲಿ ನಡೆದ ಎರಡನೇ ಬ್ರೇಕ್‌ಫಾಸ್ಟ್ ಮೀಟಿಂಗ್‌ನಲ್ಲಿ ಡಿ.ಕೆ. ಶಿವಕುಮಾರ್ ಸಹೋದರ, ಮಾಜಿ ಸಂಸದ ಡಿ.ಕೆ. ಸುರೇಶ್ ಮತ್ತು ಕುಣಿಗಲ್ ಶಾಸಕ ಹೆಚ್.ಡಿ ರಂಗನಾಥ್ ಭಾಗಿಯಾಗಿದ್ದರು. ಈ ವೇಳೆ ಸಿಎಂ ಸಿದ್ದರಾಮಯ್ಯ ಮಾತ್ರ ಇಡ್ಲಿ ಮತ್ತು ನಾಟಿ ಕೋಳಿ ಸಾಂಬಾರ್ ಸವಿದಿದ್ದು, ಇತ್ತ ನಾನ್‌ವೆಜ್ ಮುಟ್ಟದ ಡಿ.ಕೆ ಶಿವಕುಮಾರ್ ಇಡ್ಲಿ, ಚಟ್ನಿ, ವೆಜ್ ಸಾಂಬಾರ್ ಹಾಗೂ ಫ್ರೂಟ್ ಸಲಾಡ್‌ಗೆ ಮಾತ್ರ ಸೀಮಿತರಾದರು ಎನ್ನಲಾಗಿದೆ. ಕಳೆದ ಹಲವು ದಿನಗಳಿಂದ ನಾನ್‌ವೆಜ್ ಸಂಪೂರ್ಣ ಬಿಟ್ಟಿರುವ ಡಿಕೆಶಿ ತಮ್ಮ ಆರೋಗ್ಯ ಮತ್ತು ಧಾರ್ಮಿಕ ನಂಬಿಕೆಗಳನ್ನು ಪರಿಗಣಿಸಿ ವೆಜ್ ಆಹಾರಕ್ಕೆ ಸೀಮಿತರಾಗಿದ್ದಾರಂತೆ.



ನನ್ನ ಮನೆಗೆ ಊಟಕ್ಕೆ ಅಥವಾ ಬ್ರೇಕ್ ಫಾಸ್ಟ್‌ಗೆ ಬನ್ನಿ ಅಂತ ಡಿಕೆಶಿ ಕರೆದಿದ್ರು. ನಾನು ಮಂಗಳವಾರ ಬರುತ್ತೇನೆ ಎಂದಿದ್ದೆ. ನಾನೇ ಹಳ್ಳಿಯಿಂದ ಕೋಳಿ ತರಿಸಿ ಅಡುಗೆ ಮಾಡಲು ಹೇಳಿದ್ದೆ. ಅವ್ರು ನಾನ್‌ವೆಜ್ ತಿನ್ನಲ್ಲ ಹೀಗಾಗಿ ನಮ್ಮ ಮನೆಯಲ್ಲಿ ವೆಜ್ ಊಟ, ಡಿಕೆ ಶಿವಕುಮಾರ್ ಮನೆಯಲ್ಲಿ ನಾನು ನಾನ್‌ವೆಜ್ ಊಟ ಮಾಡಿದೆ, ಮೈಸೂರು ಶೈಲಿಯಲ್ಲಿಯೇ ಮಾಡಿದ್ದಾರೆ ಎಂದರು. ತಿಂಡಿ ಸೇವನೆ ನಂತರ ಡಿ.ಕೆ. ಶಿವಕುಮಾರ್ ತಮ್ಮ ಮನೆಯನ್ನು ಸಿದ್ದರಾಮಯ್ಯ ಅವರಿಗೆ ತೋರಿಸಿದರು.

ಒಂದೇ ಕಂಪನಿಯ ವಾಚ್ ಕಟ್ಟಿ ಒಗ್ಗಟ್ಟು ಪ್ರದರ್ಶಿಸಿದ ಸಿಎಂ, ಡಿಸಿಎಂ!

ಬೆಂಗಳೂರು: ಈ ಹಿಂದೆ 2016 ಮುಖ್ಯಮಂತ್ರಿಯಾಗಿದ್ದಾಗ ಹ್ಯೂಬ್ಲೋಟ್ ವಾಚಿನಿಂದ ತೀವ್ರ ವಿವಾದಕ್ಕೆ ಕಾರಣವಾಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗ ಮತ್ತೊಮ್ಮೆ ಕಾರ್ಟಿಯರ್ ವಾಚ್‌ನಿಂದ ಸುದ್ದಿಯಲ್ಲಿದ್ದಾರೆ.

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರು ಇಂದು ಎರಡನೇ ಬಾರಿ ಬ್ರೇಕ್ ಫಾಸ್ಟ್ ಮೀಟಿಂಗ್ ಮಾಡುವ ಮೂಲಕ ಮತ್ತೆ ಒಗ್ಗಟ್ಟು ಪ್ರದರ್ಶಿಸಿದ್ದಾರೆ. ಆದರೆ ಈ ಉಭಯ ನಾಯಕರು ಕಟ್ಟಿರುವ ಒಂದೇ ಕಂಪನಿಯ ಒಂದೇ ತರಹದ ವಾಚ್ ತೀವ್ರ ಚರ್ಚೆಗೆ ಕಾರಣವಾಗಿದೆ. ಒಗ್ಗಟ್ಟು ಪ್ರದರ್ಶಿಸಲು ಇಬ್ಬರು ನಾಯಕರು ಒಂದೇ ತರಹದ ವಾಚ್ ಕಟ್ಟಿದ್ದಾರೆ ಅನ್ನೋ ಮಾತುಗಳು ಕೇಳಿಬರುತ್ತಿವೆ. ಕಾರಣ ಇಂದಿನ ಬ್ರೇಕ್ ಫಾಸ್ಟ್ ಮೀಟಿಂಗ್ ವೇಳೆ ಇಬ್ಬರು ನಾಯಕರು ಕಾರ್ಟಿಯರ್ ಬ್ರ್ಯಾಂಡ್ ವಾಚ್ ಕಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.

ಮಾಧ್ಯಮಗಳ ಕ್ಯಾಮರಾದಲ್ಲಿ ಇಬ್ಬರ ವಾಚ್ ಒಂದೇ ರೀತಿ ಹಾಗೂ ಒಂದೇ ಬ್ರ್ಯಾಂಡ್ ಇರುವುದು ಗೋಚರಿಸುತ್ತಿದೆ. ಆದರೆ ಪ್ರಶ್ನೆ ಇದಲ್ಲ, ಇದರ ಬೆಲೆ, ಆ ಕಂಪನಿಯ ವೆಬ್‌ಸೈಟ್‌ನಲ್ಲಿ ಒಂದು ವಾಚಿಗೆ ಬರೋಬ್ಬರಿ 43 ಲಕ್ಷ ರೂಪಾಯಿ ಎಂದು ಹೇಳುತ್ತಿದೆ.

ಈ ವಾಚ್‌ನ ವಿಶೇಷತೆ: ಕಾರ್ಟಿಯರ್ ಅತ್ಯಂತ ಲಕ್ಷುರಿ ವಾಚ್ ಬ್ರ್ಯಾಂಡ್ ಆಗಿದ್ದು, ಸ್ಯಾಂಟೋಸ್ ಡೇ ಕಾರ್ಟಿಯರ್ ವಾಚ್ ಎಡಿಶನ್ ಇದಾಗಿದೆ. ಈ ವಾಚ್‌ನಲ್ಲಿ ಹಲವು ವಿಶೇಷತೆಗಳಿವೆ. ಕಾರಣ ಈ ವಾಚ್‌ನಲ್ಲಿ ಚಿನ್ನ ಹಾಗೂ ಬೆಳ್ಳಿ ಬಳಕೆ ಮಾಡಲಾಗಿದೆ. ಇದರ ಡೈಯಲ್, ಚೈನ್ ಸೇರಿದಂತೆ ಬಹುತೇಕ ಭಾಗದಲ್ಲಿ 750/1000 ಕೇಸ್ ಚಿನ್ನ ಬಳಕೆ ಮಾಡಲಾಗಿದೆ. ಇನ್ನು ಬೆಳ್ಳಿ ಒಪಾನಲೈನ್ ಡೈಯಲ್ ಬಳಕೆ ಮಾಡಲಾಗಿದೆ. ಇದರ 7 ಸೈಡೆಡ್ ಕ್ರೌನ್‌ನಲ್ಲಿ ರೋಸ್ ಗೋಲ್ಡ್ ಬಳಕೆ ಮಾಡಲಾಗಿದೆ.

ಸಿಎಂ, ಡಿಸಿಎಂ ವಿರುದ್ಧ ಬಿಜೆಪಿ ವಾಗ್ದಾಳಿ: ಕಾರ್ಟಿಯರ್ ವಾಚ್‌ಗೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಅವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರತಿಪಕ್ಷ ಬಿಜೆಪಿ, ಅಂದು 70 ಲಕ್ಷ ರೂ ವಾಚ್, ಇಂದು 43 ಲಕ್ಷ ರೂ. ವಾಚ್! ಕೈ ಗಡಿಯಾರ ಬದಲಾಗಿದೆ ಹೊರತು, ಮಜಾವಾದಿ ಮನಸ್ಥಿತಿ ಬದಲಾಗಿಲ್ಲ. ಸಮಾಜವಾದ'ದ ಮುಖವಾಡ ಧರಿಸಿ ಮಜಾವಾದದ ಜೀವನ ನಡೆಸುತ್ತಿರುವ ಸಿದ್ದರಾಮಯ್ಯ ಅವರೇ, ಇದೇನಾ ನಿಮ್ಮ ಸಾಮಾಜಿಕ ನ್ಯಾಯ ಎಂದು ಎಕ್ಸ್‌ನಲ್ಲಿ ಪ್ರಶ್ನಿಸಿದೆ.



ಎಲ್‌ಕೆಜಿ-ಯುಕೆಜಿ ಮಕ್ಕಳಿಗೂ ಬಿಸಿಯೂಟ ಯೋಜನೆ

ಸರ್ಕಾರ ಆದೇಶ

ಬೆಂಗಳೂರು: ಸರ್ಕಾರಿ ಶಾಲೆಗಳ ಎಲ್‌ಕೆಜಿ-ಯುಕೆಜಿ ಮಕ್ಕಳಿಗೂ ಬಿಸಿಯೂಟ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಆದೇಶ ಹೊರಡಿಸಿದೆ.



ಡಿಸೆಂಬರ್ 1 ರಿಂದಲೇ ಅನ್ವಯವಾಗುವಂತೆ ಬಿಸಿಯೂಟ, ಕ್ಷೀರಭಾಗ್ಯ, ಮೊಟ್ಟೆ, ಬಾಳೆಹಣ್ಣು ಕೊಡಲಿದೆ. ಬಿಸಿಯೂಟ ಮಾಡುವ ಅಡುಗೆಯವರಿಗೂ ಗೌರವಧನ ನೀಡುವಂತೆ ಆದೇಶದಲ್ಲಿ ಶಿಕ್ಷಣ ಇಲಾಖೆ ಉಲ್ಲೇಖಿಸಿದೆ.

ಪ್ರಧಾನಮಂತ್ರಿ ಪೋಷಣ ಶಕ್ತಿ ನಿರ್ಮಾಣ ಯೋಜನೆಯ ಮಾರ್ಗಸೂಚಿಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಈ ಯೋಜನೆಯ ಫಲಾನುಭವಿಗಳೆಂದು ಪರಿಗಣಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

ಈ ಯೋಜನೆಯ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುವ ಪಿಎಬಿಯ ಸಭಾ ನಡಾವಳಿಯಲ್ಲಿ ಪೂರ್ವ ಪ್ರಾಥಮಿಕ ತರಗತಿ (ಬಾಲವಾಟಿಕಾಗಳು)ಗಳಲ್ಲಿನ 1,98,270 ಮಕ್ಕಳಿಗೆ ಮಧ್ಯಾಹ್ನ ಉಪಾಹಾರ ನೀಡಲು 2,215 ಲಕ್ಷ ರೂ. ಕೇಂದ್ರದ ಪಾಲಿನ ಅನುದಾನಕ್ಕೆ ಅನುಮೋದನೆ ನೀಡಲಾಗಿದೆ.

ಮನೆ ಮೇಲೆ ದಾಳಿ ನಡೆಸಿ 2 ಕೆಜಿ ಗಾಂಜಾ, 7.30 ಲಕ್ಷ ರೂ. ನಗದು; 10 ತಲ್ವಾರ್ ಇನ್ನಿತರೆ ಮಾರಕಾಸ್ತ್ರ ಜಪ್ತಿ

ದುಷ್ಕೃತ್ಯ ನಡೆಸುತ್ತಿದ್ದ ಇಬ್ಬರ ಬಂಧನ




ರೋಶನ್


ಫಿರ್ದೋಸ್





ಮೈಸೂರಿನ ಮಂಡಿ ಪೊಲೀಸ್ ಠಾಣಾ ವ್ಯಾಪ್ತಿಯ ಮೂರು ಮನೆಗಳ ಮೇಲೆ ಪೊಲೀಸರು ದಾಳಿ ನಡೆಸಿದ ವೇಳೆ, ವಶಪಡಿಸಿಕೊಂಡ ಗಾಂಜಾ, ಹಣ ಹಾಗೂ ಮಾರಕಾಸ್ತ್ರಗಳನ್ನು ಚಿತ್ರಗಳಲ್ಲಿ ಕಾಣಬಹುದು.

ಮೈಸೂರು, ಡಿ.2- ಮೈಸೂರು ನಗರ ಪೊಲೀಸರು ಮೂರು ಮನೆಗಳ ಮೇಲೆ ದಾಳಿ ನಡೆಸಿ, ಅಪಾರ ಪ್ರಮಾಣದ ಗಾಂಜಾ, ಲಕ್ಷಾಂತರ ಹಣ ಹಾಗೂ ಮಾರಕಾಸ್ತ್ರಗಳನ್ನು ವಶಪಡಿಸಿಕೊಳ್ಳುವುದರ ಜೊತೆಗೆ ಇಬ್ಬರನ್ನು ಬಂಧಿಸಿದ್ದಾರೆ.

ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯ ಮೂರು ಮನೆಗಳ ಮೇಲೆ ಸರ್ಚ್ ವಾರೆಂಟ್‌ನೊಂದಿಗೆ ದಾಳಿ ನಡೆಸಿದ ಪೊಲೀಸರು, 2 ಕೆಜಿ ಗಾಂಜಾ, 7.30ರೂ. ಲಕ್ಷ ನಗದು, 10 ತಲ್ವಾರ್, ಕತ್ತಿ, ಮಚ್ಚು ಸೇರಿದಂತೆ ವಿವಿಧ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಇದೇ ವೇಳೆ ಫಿರ್ದೋಸ್ ಹಾಗೂ ರೋಶನ್‌ನನ್ನು ಬಂಧಿಸಿದ್ದು, ತಲೆಮರೆಸಿಕೊಂಡಿರುವ ಇತರೆ ಆರೋಪಿಗಳಿಗೆ ಶೋಧ ಮುಂದುವರೆಸಿದ್ದಾರೆ

ಗಾಂಜಾ ಶೋಧ ಕಾರ್ಯಾಚರಣೆ ವೇಳೆ ಈ ದಾಳಿ ನಡೆದಿದೆ. ಪೊಲೀಸರು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದರೂ ಮಾದಕ ವಸ್ತು ಪೆಡ್ಲರ್‌ಗಳು ನಿರ್ಭಯವಾಗಿ ತಮ್ಮ ದುಷ್ಕೃತ್ಯ ನಡೆಸುತ್ತಿದ್ದಾರೆ ಎಂಬುದಕ್ಕೆ ಇಂದಿನ ದಾಳಿಯೇ ಸಾಕ್ಷಿಯಾಗಿದೆ. ಪೊಲೀಸರ ಕಣ್ಗಾವಲು ತಪ್ಪಿಸಿ ಇಷ್ಟೊಂದು ಪ್ರಮಾಣದ ಗಾಂಜಾವನ್ನು ಹೇಗೆ ತರಿಸಿಕೊಂಡರು, ಮನೆಯಲ್ಲಿ ಇಷ್ಟು ಸಂಖ್ಯೆಯ ಮಾರಕಾಸ್ತ್ರಗಳನ್ನು ಇಟ್ಟುಕೊಂಡಿದ್ದು ಏಕೆ? ಗಾಂಜಾ ಮಾರಾಟದ ಜೊತೆಗೆ ಇನ್ಯಾವ ಅಪರಾಧ ಕೃತ್ಯಗಳನ್ನು ನಡೆಸುತ್ತಿದ್ದರು? ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸಬೇಕಿದೆ. ಪೆಡ್ಲರ್‌ಗಳು ಹಾಗೂ ಸೇವನೆ ಮಾಡುವವರನ್ನು ಕಠಿಣ ಶಿಕ್ಷೆಗೆ ಗುರಿಯಾಗಿಸದಿದ್ದರೆ ಅಪರಾಧ ಕೃತ್ಯಗಳನ್ನು ತಡೆಯುವುದು ಕಷ್ಟಸಾಧ್ಯವಾಗಿದೆ.

ಕನ್ನಡ ರಾಜ್ಯೋತ್ಸವ; ಕರುನಾಡ ಸೇವಾ ಸೇನೆ ರಾಜ್ಯಾಧ್ಯಕ್ಷ ಗಣೇಶ್ ಹುಟ್ಟುಹಬ್ಬ ಆಚರಣೆ


ಮೈಸೂರಿನ ಕರುನಾಡ ಸೇವಾ ಸೇನೆ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಹಲವು ಗಣ್ಯರು ಭಾಗವಹಿಸಿದ್ದರು.

ಮೈಸೂರು, ಡಿ.2- ಮೈಸೂರು ವಿದ್ಯಾರಣ್ಯಪುರಂನ ಚಾಮುಂಡಿ ವನದ ಬಳಿ ಕರುನಾಡ ಸೇವಾ ಸೇನೆಯ ಮೂರನೇ ವಾರ್ಷಿಕೋತ್ಸವ, ಕನ್ನಡ ರಾಜ್ಯೋತ್ಸವ ಹಾಗೂ ಸೇನೆಯ ರಾಜ್ಯಾಧ್ಯಕ್ಷ ಬಿ.ಗಣೇಶ್ ಅವರ ಹುಟ್ಟುಹಬ್ಬವನ್ನು ಆಯೋಜಿಸಲಾಗಿತ್ತು.

ಫೆಡರೇಶನ್ ಆಫ್ ಮೈಸೂರು ಜಿಲ್ಲಾ ಲಾರಿ ಮಾಲೀಕರ ಹಾಗೂ ಏಜೆಂಟರ ಸಂಘದ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಗಣೇಶ್ ಅವರು ಸಾಕಷ್ಟು ಜನಪರ ಕೆಲಸಗಳ ಮೂಲಕ ಗುರುತಿಸಿಕೊಂಡಿದ್ದಾರೆ. ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಸಂಘಟನೆ ಮೂಲಕ ನೆಲ, ಜಲ, ಭಾಷೆ ವಿಚಾರದಲ್ಲೂ ಹೋರಾಟ ನಡೆಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಗಣೇಶ ಅವರ ಸ್ನೇಹಿತರು, ಅಭಿಮಾನಿಗಳು ಸೇವಾ ಕಾರ್ಯಗಳ ಮೂಲಕ ಗಣೇಶ್ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದ್ದಾರೆ. ಸಮಾಜದಲ್ಲಿ ಬಡವರ ನೋವಿಗೆ ಸ್ಪಂದಿಸುವುದೇ ನಿಜವಾದ ಮಾನವೀಯ ಸಮಾಜ ಸೇವೆ. ಇದೇ ಮಾರ್ಗದಲ್ಲಿ ಗಣೇಶ್ ಅವರ ಅಭಿಮಾನಿಗಳು ಮುಂದುವರೆದಿದ್ದಾರೆ ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಕನ್ನಡ ಭಾಷೆಯನ್ನು ಬಳಸುವುದರೊಂದಿಗೆ ಅನ್ಯ ಭಾಷಿಕರಿಗೂ ನಾವು ಕನ್ನಡ ಕಲಿಸಬೇಕಿದೆ. ರಾಜ್ಯದಲ್ಲಿ ಸಾವಿರಾರು ಕನ್ನಡ ಶಾಲೆಗಳು ಮುಚ್ಚಿರುವುದು ಅತೀವ ನೋವಿನ ಸಂಗತಿ. ಕನ್ನಡ ರಾಜ್ಯೋತ್ಸವವು ನಿತ್ಯೋತ್ಸವ ಆಗಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಹರೀಶ್, ಸಮಾಜ ಸೇವಕರಾದ ರಘುರಾಮ್ ವಾಜಪೇಯಿ, ಎಸ್.ಶ್ರೀಕಾಂತ್, ಮಹೇಶ್, ರಂಗಸ್ವಾಮಿ, ರವಿ, ಉದ್ಯಮಿ ಶ್ರೀಕಂಠ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಸಂವಿಧಾನ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಭಾಸ್ಕರ್, ಕಾಂಗ್ರೆಸ್ ಮುಖಂಡರಾದ ಮಾವಿನಹಳ್ಳಿ ಸಿ.ರವಿ, ಉದ್ಯಮಿ ದಿನೇಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಗಣೇಶ್ ಅವರ ಹುಟ್ಟುಹಬ್ಬದ ಪ್ರಯುಕ್ತ ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ, ಅನ್ನದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ವ್ಯಕ್ತಿಯ ಹತ್ಯೆ; ಆರೋಪಿಗಳ ಬಂಧನ

ಮೈಸೂರು, ಡಿ.2- ಸಿಮೆಂಟ್ ಪೈಪ್ ಹಾಗೂ ಟೈಲ್ಸ್‌ನಿಂದ ಹೊಡೆದು ವ್ಯಕ್ತಿಯೊಬ್ಬನನ್ನು ಹತ್ಯೆ ಮಾಡಿರುವ ಘಟನೆ ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿ ಭಾನುವಾರ ತಡರಾತ್ರಿ ನಡೆದಿದ್ದು, ಮರುದಿನ ಬೆಳಗ್ಗೆ ಬೆಳಕಿಗೆ ಬಂದಿದೆ.

ಶಶಿಕುಮಾರ್ ಅಲಿಯಾಸ್ ಕೆಂಚ ಎಂಬಾತನನ್ನು ಹತ್ಯೆ ಮಾಡಲಾಗಿದ್ದು, ಈತ ಕೊಲೆ ಹಾಗೂ ಕಳ್ಳತನ ಪ್ರಕರಣಗಳ ಆರೋಪಿ ಎನ್ನಲಾಗಿದೆ.

ಚಾಮರಾಜ ಜೋಡಿ ರಸ್ತೆಯ ಹಾಸಿಗೆ ಮಳಿಗೆಗಳ ಮುಂಭಾಗದ ಫುಟ್‌ಪಾತ್‌ನಲ್ಲಿ ವ್ಯಕ್ತಿಯೊಬ್ಬ ಸಾವನ್ನಪ್ಪಿರುವ ಬಗ್ಗೆ ಸೋಮವಾರ ಬೆಳಗ್ಗೆ 7 ಗಂಟೆ ವೇಳೆಗೆ ಮಾಹಿತಿ ತಿಳಿದ ಕೆ.ಆರ್. ಠಾಣೆ ಪೊಲೀಸರು, ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದಾಗ ಆತ ತಮ್ಮ ಠಾಣೆಯ ಹಳೆಯ ಆರೋಪಿ ಎನ್ನುವುದು ಗೊತ್ತಾಗಿದೆ. ಆತನನ್ನು ಯಾರೋ ದುಷ್ಕರ್ಮಿಗಳು ಕೊಲೆ ಮಾಡಿರುವುದಾಗಿ ಕಂಡುಬಂದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದರು. ಘಟನೆ ಬೆಳಕಿಗೆ ಬಂದ ಕೆಲವೇ ಗಂಟೆಗಳಲ್ಲಿ ಅಪ್ರಾಪ್ತ ಸೇರಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಿರುವುದಾಗಿ ತಿಳಿದುಬಂದಿದೆ ಮಾದಕ ವ್ಯಸನಿಗಳಾದ ಆರೋಪಿಗಳು ಹಣಕ್ಕಾಗಿ ಒತ್ತಾಯಿಸಿದಾಗ ಶಶಿಕುಮಾರ್ ಪ್ರತಿರೋಧ ವ್ಯಕ್ತಪಡಿಸಿದ್ದರಿಂದ ಆತನನ್ನು ಹತ್ಯೆ ಮಾಡಿರಬಹುದು ಎನ್ನಲಾಗಿದ್ದು, ಪೊಲೀಸರ ತನಿಖೆಯಿಂದ ಹೆಚ್ಚಿನ ಮಾಹಿತಿ ಲಭ್ಯವಾಗಬೇಕಿದೆ

ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ ; ಡಾ.ಕಾವೇರಿ ಪ್ರಕಾಶ್ ಮೈಸೂರು ಜಿಲ್ಲಾಧ್ಯಕ್ಷೆ

ಮೈಸೂರು,ಡಿ.2(ಪಿಎಂ)- ನಗರದ ಮಹಾರಾಣಿ ವಿಜ್ಞಾನ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ಕಾವೇರಿ ಪ್ರಕಾಶ್ ಅವರನ್ನು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಜಿಲ್ಲೆ-ತಾಲೂಕು ಘಟಕಗಳ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ವಿವರಗಳನ್ನು ರಾಜ್ಯ ಸಂಘಕ್ಕೆ ಸಲ್ಲಿಸುವಂತೆ ಹಾಗೂ ಜಿಲ್ಲಾ ಘಟಕ ಮತ್ತು ತಾಲೂಕು ಘಟಕಗಳ ಚಟುವಟಿಕೆಗಳ ಬಗ್ಗೆ ರಾಜ್ಯ ಘಟಕದ ಪೂರ್ವಾನುಮತಿ ಪಡೆಯಲು ಹಾಗೂ ಚಟುವಟಿಕೆಗಳ ವಿವರಗಳನ್ನು ರಾಜ್ಯಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗೆ ವರದಿ ಮಾಡುವಂತೆ ಡಾ.ಕಾವೇರಿ ಪ್ರಕಾಶ್ ಅವರಿಗೆ ನೇಮಕಾತಿ ಪತ್ರದಲ್ಲಿ ಸಂಘದ ರಾಜ್ಯಾಧ್ಯಕ್ಷೆ ರೋಶನಿ ಗೌಡ ತಿಳಿಸಿದ್ದಾರೆ.



ಡಿ.9ರವರೆಗೆ ಕುಷ್ಠರೋಗ ಪತ್ತೆ ಅಭಿಯಾನ ; ಮೈಸೂರು ನಗರ-ಗ್ರಾಮಾಂತರ, ನಂಜನಗೂಡು, ತಿ.ನರಸೀಪುರ ತಾಲೂಕುಗಳಲ್ಲಿ ಸರ್ವೇ

ಇಬ್ಬರು ಮಕ್ಕಳಲ್ಲಿ ಸೋಂಕು ದೃಢ ; 863 ಶಂಕಿತ ಪ್ರಕರಣಗಳು


ತಿಳಿಬಿಳಿ ಬಣ್ಣದ ಮಚ್ಚೆಗಳು (ಸಂಗ್ರಹ ಚಿತ್ರ)

ಮೈಸೂರು,ಡಿ.2(ಪಿಎಂ)- ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ ಮೈಸೂರು ಜಿಲ್ಲೆಯಲ್ಲಿ ನ.24ರಿಂದ ಕುಷ್ಠರೋಗ ಪ್ರಕರಣಗಳ ಪತ್ತೆ ಹಚ್ಚುವ ಅಭಿಯಾನ ಕೈಗೆತ್ತಿಕೊಂಡಿದ್ದು, ಮೈಸೂರು ನಗರ ಮತ್ತು ಗ್ರಾಮಾಂತರ, ನಂಜನಗೂಡು ಹಾಗೂ ತಿ.ನರಸೀಪುರ ತಾಲೂಕುಗಳಲ್ಲಿ ನಡೆಸಿದ ಸರ್ವೇಯಲ್ಲಿ ಇಬ್ಬರು ಮಕ್ಕಳಲ್ಲಿ ಕುಷ್ಠರೋಗ ದೃಢಪಟ್ಟಿದೆ. ಜೊತೆಗೆ 863 ಮಂದಿಗೆ ಸಂಬಂಧಿಸಿದಂತೆ ಕುಷ್ಠರೋಗದ ಶಂಕಿತ ಪ್ರಕರಣಗಳೆಂದು ಗುರುತಿಸಲಾಗಿದೆ.

ಮೈಸೂರು ನಗರ ಮತ್ತು ಗ್ರಾಮಾಂತರ ಹಾಗೂ ಈ ಎರಡು ತಾಲೂಕುಗಳಲ್ಲಿ ಈವರೆಗೆ 41,698 ಮನೆಗಳಿಗೆ ಭೇಟಿ ನೀಡಿ ಸರ್ವೆ ನಡೆಸಿದ್ದು, 1,18,039 ಜನಸಂಖ್ಯೆಯನ್ನು ತಲುಪಲಾಗಿದೆ. ಈ ವೇಳೆ 863 ಶಂಕಿತ ಕುಷ್ಠರೋಗದ ಪ್ರಕರಣಗಳು ಕಂಡುಬಂದಿದ್ದರೆ, ಇಬ್ಬರು ಮಕ್ಕಳಲ್ಲಿ ತೀವ್ರತರವಲ್ಲದ ಕುಷ್ಠರೋಗ ಪತ್ತೆಯಾಗಿದೆ.

ಈ ನಾಲ್ಕು ಪ್ರದೇಶಗಳಿಂದ ಒಟ್ಟಾರೆ 76,980 ಮನೆಗಳಿಗೆ ಭೇಟಿ ನೀಡಿ, 3,09,984 ಜನಸಂಖ್ಯೆ ತಲುಪುವ ಗುರಿ ಹೊಂದಲಾಗಿದೆ. ಈ ಅಭಿಯಾನಕ್ಕಾಗಿ ಒಟ್ಟಾರೆ 275 ತಂಡಗಳನ್ನು ನಿಯೋಜಿಸಿದ್ದು, ಎಲ್ಲಾ ತಂಡಗಳಿಂದ ಒಟ್ಟಾರೆ 550 ಮಂದಿ ಕಾರ್ಯ ನಿರತರಾಗಿದ್ದಾರೆ. 27 ಮಂದಿ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಮೈಸೂರು ನಗರ ಹಾಗೂ ಗ್ರಾಮಾಂತರ ವ್ಯಾಪ್ತಿಯಲ್ಲಿ 44,418 ಮನೆಗಳು, ನಂಜನಗೂಡು ತಾಲೂಕಿನಲ್ಲಿ 85,897 ಮನೆಗಳು, ತಿ.ನರಸೀಪುರ ತಾಲೂಕಿನಲ್ಲಿ 51,800 ಮನೆಗಳಿಗೆ ಭೇಟಿ ನೀಡುವ ಗುರಿ ಹೊಂದಲಾಗಿದೆ.

ನ.24ರಿಂದ ಸರ್ವೇ ಕಾರ್ಯ ಪ್ರಗತಿಯಲ್ಲಿ


ಮನೆ ಮನೆ ಸರ್ವೇ ಕಾರ್ಯ ನಡೆಸುವವರಿಗೆ ಸಲಹೆ ಸೂಚನೆ ನೀಡುತ್ತಿರುವ ಅಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ನಗರ ಮತ್ತು ಗ್ರಾಮಾಂತರ ವ್ಯಾಪ್ತಿಯಲ್ಲಿ ಒಟ್ಟಾರೆ 318 ಮಂದಿ ಒಳಗೊಂಡ 159 ತಂಡಗಳು ಸರ್ವೇ ಕಾರ್ಯ ನಡೆಸುತ್ತಿದ್ದು, ಅದೇ ರೀತಿ ನಂಜನಗೂಡು ತಾಲೂಕಿನಲ್ಲಿ ಒಟ್ಟಾರೆ 146 ಮಂದಿಯ 73 ತಂಡಗಳು, ತಿ.ನರಸೀಪುರ ತಾಲೂಕಿನಲ್ಲಿ ಒಟ್ಟು 86 ಮಂದಿ ಒಳಗೊಂಡಂತೆ 43 ತಂಡಗಳು ಕಾರ್ಯನಿರ್ವಹಿಸುತ್ತಿವೆ. ಡಿ.9 ರವರೆಗೆ ಕುಷ್ಠರೋಗ ಪ್ರಕರಣಗಳ ಪತ್ತೆ ಹಚ್ಚುವ ಅಭಿಯಾನದಡಿ ಈ ಸರ್ವೇ ಕಾರ್ಯ ನಡೆಯಲಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಬಿ.ಬೃಂದಾ, ಈವರೆಗೆ ಸರ್ವೇಯಲ್ಲಿ ಪತ್ತೆಯಾಗಿರುವ 863 ಶಂಕಿತ ಪ್ರಕರಣಗಳ ಸಂಬಂಧ ಇನ್ನಷ್ಟು ತಪಾಸಣೆ ಅಗತ್ಯವಾಗಿದೆ. ಈ ಅಭಿಯಾನಕ್ಕಾಗಿಯೇ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರಯೋಗಾಲಯ ತಂತ್ರಜ್ಞರಿಗೆ ಎಸ್‌ಎಸ್‌ಎಸ್ ಪರೀಕ್ಷೆ (ಸ್ಲಿಟ್ ಸ್ಕಿನ್ ಸ್ಮೀಯರ್ ಪರೀಕ್ಷೆ) ಸಂಬಂಧ ತರಬೇತಿ ನೀಡಲಾಗಿದೆ. ಸದರಿ ತಂತ್ರಜ್ಞರು ತಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೇ ಈ ಪರೀಕ್ಷೆ ನಡೆಸಲು ಸಹ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಒಂದು ತಂಡದಲ್ಲಿ ಒಬ್ಬರು ಪುರುಷ (ಆರೋಗ್ಯ ಅಧಿಕಾರಿ) ಮತ್ತು ಒಬ್ಬರು ಮಹಿಳೆ (ಆಶಾ ಕಾರ್ಯಕರ್ತೆ) ಸೇರಿದಂತೆ ಇಬ್ಬರು ಇರಲಿದ್ದಾರೆ. ಪುರುಷರು ಹಾಗೂ ಮಹಿಳೆಯರನ್ನು ತಪಾಸಣೆ ಮಾಡಬೇಕಿರುವ ಹಿನ್ನಲೆಯಲ್ಲಿ ಈ ರೀತಿಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ತಂಡವೊಂದು ದಿನಕ್ಕೆ ನಗರ ವ್ಯಾಪ್ತಿಯಲ್ಲಿ 25 ಮನೆಗಳು ಹಾಗೂ ಗ್ರಾಮಾಂತರ ವ್ಯಾಪ್ತಿಯಲ್ಲಿ 20 ಮನೆಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಲು ಗುರಿ ನಿಗದಿ ಮಾಡಲಾಗಿದೆ ಎಂದು ಹೇಳಿದರು.

ಈಗ ದೃಢಪಟ್ಟಿರುವ ಇಬ್ಬರು ಮಕ್ಕಳ ಕುಷ್ಠರೋಗವು ತೀವ್ರ ಸ್ವರೂಪದ್ದಲ್ಲ. ಇದನ್ನು ಪಿಬಿ ವಿಧವೆಂದು ಕರೆಯಲಾಗುತ್ತದೆ. ಇದಕ್ಕೆ 6 ತಿಂಗಳ ಚಿಕಿತ್ಸೆ ನೀಡಲಾಗುತ್ತದೆ. ಜಿಲ್ಲೆಯಲ್ಲಿ ಈ ವರ್ಷ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 47 ಹೊಸ ಪ್ರಕರಣಗಳು ಪತ್ತೆಯಾಗಿವೆ. ಇದೇ ಅವಧಿಯಲ್ಲಿ 56 ಮಂದಿಗೆ ಜಿಲ್ಲೆಯಲ್ಲಿ ಚಿಕಿತ್ಸೆ ಪೂರ್ಣಗೊಳಿಸಲಾಗಿದೆ ಎಂದರು.

ಕುಷ್ಠರೋಗಿಗಳಿಗೆ ಅಂಗವಿಕಲ ಶಸ್ತ್ರಚಿಕಿತ್ಸೆ (ಆರ್‌ಸಿಎಸ್) ಅಗತ್ಯವಾಗಿದ್ದಲ್ಲಿ ಉಚಿತವಾಗಿ ಮಾಡಿಸಲಾಗುತ್ತದೆ. ಜೊತೆಗೆ ಈ ಶಸ್ತ್ರಚಿಕಿತ್ಸೆಗೆ ಒಳಗಾದವರಿಗೆ ಸರ್ಕಾರ 12 ಸಾವಿರ ರೂ. ಸಹಾಯಧನ ನೀಡುತ್ತದೆ. ಜೊತೆಗೆ ವರ್ಷಕ್ಕೆ ಎರಡು ಬಾರಿ ಉಚಿತವಾಗಿ ಎಂಸಿಆರ್ (ಮಲ್ಟಿ ಸೆಲ್ಯುಲರ್ ರಬ್ಬರ್) ಪಾದರಕ್ಷೆ ನೀಡಲಾಗುತ್ತದೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕುಷ್ಠರೋಗಕ್ಕೆ ಚಿಕಿತ್ಸೆ ಹಾಗೂ ಔಷಧ ಉಚಿತವಿದ್ದು, ಈ ರೋಗಕ್ಕೆ ಬಹುವಿಧದ ಔಷಧ ಅಗತ್ಯವಾಗುತ್ತದೆ ಎಂದು ವಿವರಿಸಿದರು.

ರೋಗ ಲಕ್ಷಣ

ಮಾನವ ಕುಲದ ಅತ್ಯಂತ ಪ್ರಾಚೀನ ರೋಗಗಳಲ್ಲಿ ಕುಷ್ಠವೂ ಸೇರಿದೆ. ಇದು ಮೈಕೋಬ್ಯಾಕ್ಟೀರಿಯಂ ಲೆಪ್ರೆ ಎಂಬ ರೋಗಾಣುವಿನಿಂದ ಬರುತ್ತದೆ. ಈ ಕಾಯಿಲೆ ಮುಖ್ಯವಾಗಿ ಚರ್ಮ ಹಾಗೂ ನರಗಳಿಗೆ ಸಂಬಂಧಿಸಿದೆ. ಕೆಮ್ಮಿದಾಗ ಹಾಗೂ ಕಫದ ಮೂಲಕ ರೋಗಾಣು ಹೊರಗೆ ಬಂದು ಗಾಳಿಯ ಮೂಲಕ ಆರೋಗ್ಯವಂತರ ಶರೀರದಲ್ಲಿ ಪ್ರವೇಶಿಸಿ ಸೋಂಕು ಉಂಟು ಮಾಡುತ್ತದೆ. ದೇಹದ ಯಾವುದೇ ಭಾಗದ ಮೇಲೆ ತುರಿಕೆ ಇಲ್ಲದ ತಿಳಿಬಿಳಿ ಅಥವಾ ತಾಮ್ರ ಬಣ್ಣದ ಮತ್ತು ಸ್ಪರ್ಶದ ಅನುಭವ ಉಂಟು ಮಾಡದ ಮಚ್ಚೆಗಳು ಇದ್ದಲ್ಲಿ ಅವುಗಳು ಕುಷ್ಠರೋಗಕ್ಕೆ ಸಂಬಂಧಿಸಿದ್ದಾಗಿರುತ್ತವೆ.

ಹೆಚ್ಚು ಪ್ರಕರಣ ಇರುವ ತಾಲೂಕುಗಳು ಆಯ್ಕೆ...



ಮೈಸೂರು ನಗರ ಹಾಗೂ ಗ್ರಾಮಾಂತರ, ತಿ.ನರಸೀಪುರ ಮತ್ತು ನಂಜನಗೂಡು ತಾಲೂಕುಗಳಲ್ಲಿ ಮಾತ್ರ ಅಭಿಯಾನ ಕೈಗೆತ್ತಿಕೊಳ್ಳಲಾಗಿದೆ. ಈ ತಾಲೂಕುಗಳಲ್ಲಿ ಈಗಾಗಲೇ ಹೆಚ್ಚು ಪ್ರಕರಣಗಳು ಕಂಡು ಬಂದಿರುವ ಹಿನ್ನೆಲೆಯಲ್ಲಿ ಅವುಗಳನ್ನು ಅಭಿಯಾನಕ್ಕೆ ಆಯ್ಕೆ ಮಾಡಿಕೊಂಡು ವಿಶೇಷ ಒತ್ತು ನೀಡಲಾಗಿದೆ. ತಿ.ನರಸೀಪುರ ಹಾಗೂ ನಂಜನಗೂಡು ತಾಲೂಕುಗಳು ಸೇರಿದಂತೆ 19 ಪ್ರಕರಣಗಳು ಈಗಾಗಲೇ (ಹಳೆಯವು) ಇವೆ. ಅದೇ ರೀತಿ ಮೈಸೂರು ನಗರ ಹಾಗೂ ಗ್ರಾಮಾಂತರಗಳಲ್ಲಿ 20 ಪ್ರಕರಣಗಳು ಇವೆ. ಈ ಎಲ್ಲಾ 39 ಮಂದಿ ಈಗಾಗಲೇ ಚಿಕಿತ್ಸೆಯಲ್ಲಿದ್ದಾರೆ.

-ಡಾ.ಬಿ.ಬೃಂದಾ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು, ಮೈಸೂರು.

ನಕ್ಕರೆ ಅದೇ ಸ್ವರ್ಗ

ರೋಗಿ : (ಡಾಕ್ಟರ್‌ಗೆ ಕರೆ ಮಾಡಿ) ಡಾಕ್ಟರ್, ನೀವು ನನಗೆ ದಿನಕ್ಕೆ 10 ಕಿಲೋಮೀಟರ್ ನಡೆಯಲು ಹೇಳಿದ್ದೀರಲ್ಲ..?
ಡಾಕ್ಟರ್ : ಹಾಂ... ಹೌದು ಒಂದು ತಿಂಗಳಾಯ್ತು. ನೀವು ಈ ಕಡೆ ಬರದೆ ಎಲ್ಲಿದ್ದೀರಿ!
ರೋಗಿ : ನಡೀತಾ ನಡೀತಾ ದಿಲ್ಲಿ ತನಕ ಬಂದು ಬಿಟ್ಟೆ. ಈಗೇನು ವಾಪಸ್ ಬರಲೋ ಹಾಗೆ ಮುಂದೆ ಹೋಗ್ಲೋ!

ಮೈಸೂರು ಮಿತ್ರ
ಬುಧವಾರ, 3 ಡಿಸೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಜಗತ್ತಿನಲ್ಲಿ ಕಂಡು ಬರುವ ಬಣ್ಣ ಬಣ್ಣದ ಆಟಗಳನ್ನು ಕಣ್ಣಾರೆ ಕಂಡರೂ ಏನನ್ನೂ ಸಹ ನೋಡಿಲ್ಲ ಎನ್ನುವಂತೆ ಇದ್ದು ಬಿಡಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹನಿ ಹನಿಗೂಡಿದರೆ ಹಳ್ಳ, ತೆನೆ ತೆನೆಗೂಡಿದರೆ ಬಳ್ಳ

ನಿಮ್ಮ ಪತ್ರಗಳು

ಪ್ರವಾಸ ಹೊರಡುವ ಪ್ರತಿ ವಿದ್ಯಾರ್ಥಿ ಮೇಲೆ ಕನಿಷ್ಠ 10 ಲಕ್ಷ ಜೀವ ವಿಮಾ ಪಾಲಿಸಿ ಕಡ್ಡಾಯಗೊಳಿಸಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ, ಶಾಲಾ ಮಕ್ಕಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ರಸ್ತೆ ಅಪಘಾತಗಳು ಸಂಭವಿಸುತ್ತಿರುವುದು ವರದಿಯಾಗುತ್ತಿವೆ. ಶಾಲಾ ಮಕ್ಕಳನ್ನು ಆ ವರ್ಷದ ಶೈಕ್ಷಣಿಕ ಅವಧಿಯಲ್ಲಿ ಒಂದು ದಿನದ ಮಟ್ಟಿಗೆ ಪ್ರವಾಸ ಕೈಗೊಳ್ಳಲು ವಿದ್ಯಾರ್ಥಿ ಶಾಲೆಗೆ ಪ್ರವೇಶ ಪಡೆಯುವ ಸಂದರ್ಭ ಇಂತಿಷ್ಟು ಹಣವನ್ನು ಕಡ್ಡಾಯವಾಗಿ ಪಡೆದಿರುತ್ತಾರೆ. ಆದರೆ, ಕೆಲವು ಶಾಲೆಗಳ ಮುಖ್ಯಸ್ಥರು, ಪ್ರವಾಸ ಹೊರಡುವ ಸಂದರ್ಭದಲ್ಲಿ ಕನಿಷ್ಠ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೇ ಬೇಜವಾಬ್ದಾರಿತನ ತೋರಿಸುತ್ತಾರೆ. ಶಾಲೆಗಳ ಮುಖ್ಯಸ್ಥರು ಆಯಾಯಾ ಶಾಲಾ ವ್ಯಾಪ್ತಿಯ ಬಿಇಓಯಿಂದ ಕಡ್ಡಾಯವಾಗಿ ಅನುಮತಿ ಪಡೆದಿರಬೇಕು. ಆದರೆ ಈ ನಿಯಮವನ್ನು ಬಹುತೇಕ ಶಾಲೆಗಳಲ್ಲಿ ಪಾಲಿಸುವುದಿಲ್ಲ (ಇತ್ತೀಚೆಗೆ ಸಂಭವಿಸಿದ ಅಪಘಾತದಲ್ಲಿ ವಿದ್ಯಾರ್ಥಿಯೊಬ್ಬ ಅಸುನೀಗಿದ. ಮೈಸೂರಿನ ತರಳಬಾಳು ಶಿಕ್ಷಣ ಸಂಸ್ಥೆಯವರು ಬಿಇಓಯಿಂದ ಅನುಮತಿ ಪಡೆದಿರಲಿಲ್ಲ ಎಂದು ಬಿಇಓ ಪತ್ರಿಕಾ ಹೇಳಿಕೆ ನೀಡಿದ್ದಾರೆ). ಸಾಮಾನ್ಯವಾಗಿ ವರ್ಷದ ಕೊನೆಯ ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲೇ ಎಲ್ಲಾ ಶಾಲೆಗಳಲ್ಲಿ ಪ್ರವಾಸ ಕೈಗೊಳ್ಳು ವುದರಿಂದ ಸಂಚಾರ ದಟ್ಟಣೆಯಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಹೆಚ್ಚು ಇರುತ್ತದೆ. ಇದರ ಬದಲಾಗಿ ಆ ಶೈಕ್ಷಣಿಕ ವರ್ಷದ ಯಾವ ತಿಂಗಳಲ್ಲಿ ಬೇಕಾದರೂ ಪ್ರವಾಸ ಕೈಗೊಳ್ಳುವಂತಾಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಪ್ರಯಾಣ ದರ ಕಡಿಮೆ ಎನ್ನುವ ಕಾರಣಕ್ಕಾಗಿ ಖಾಸಗಿ ಬಸ್‌ಗಳ ಮೊರೆ ಹೋಗುತ್ತಾರೆ. ಅದರ ಬದಲು ಕಡ್ಡಾಯವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲೇ ಪ್ರವಾಸ ಕೈಗೊಳ್ಳಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು. ಇದು ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ಅನ್ವಯವಾಗಬೇಕು. ಪ್ರವಾಸ ಹೊರಡುವ ಪ್ರತಿ ವಿದ್ಯಾರ್ಥಿ, ವಿದ್ಯಾರ್ಥಿನಿಯ ಮೇಲೆ ವೈಯಕ್ತಿಕವಾಗಿ ಕನಿಷ್ಠ 10 ಲಕ್ಷ ಜೀವ ವಿಮಾ ಪಾಲಿಸಿ ಇರುವಂತೆ ಕಡ್ಡಾಯಗೊಳಿಸಿ ಸರ್ಕಾರ ಆದೇಶ ಹೊರಡಿಸಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಗ್ರೇಟರ್ ಮೈಸೂರು ಯೋಜನೆಗೆ ಅಪಸ್ವರವೇಕೆ?

ಮಾನ್ಯರೆ,

ಮೈಸೂರು ಈಗ ಗ್ರೇಟರ್ ಮೈಸೂರು ಯೋಜನೆಯಡಿ ಅಭಿವೃದ್ಧಿಗೊಳ್ಳುತ್ತಿರುವ ಬಗ್ಗೆ ಈಗಾಗಲೇ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಹಲವು ದಿನಗಳಿಂದ ರಿಂಗ್ ರೋಡ್ ಬಳಿಯ ಹಲವು ಖಾಸಗಿ ಬಡಾವಣೆಗಳು ಕಂದಾಯ ಕಟ್ಟಿಯೂ ಸಹ ಯಾವುದೇ ಮೂಲ ಸೌಲಭ್ಯವಿಲ್ಲದೆ ನರಕದ ಹಾದಿಯಲ್ಲಿದ್ದು, ಈಗ ಈ ವಿಷಯ ಕೇಳಿ ನಿಟ್ಟುಸಿರು ಬಿಟ್ಟಂತಾಗಿದೆ. ಖಾಸಗಿ ಬಡಾವಣೆಗಳು ಇತ್ತ ಹಳ್ಳಿಯೂ ಅಲ್ಲದೆ, ಇತ್ತ ಪಟ್ಟಣವೂ ಅಲ್ಲದೆ ಕುಡಿಯಲು ನೀರಿಲ್ಲದೆ, ಹರಿದ ರಸ್ತೆಗಳಲ್ಲಿ, ಒಡೆದ ಚರಂಡಿಗಳಿಂದ ಮುಕ್ತಿ ದೊರೆಯುವ ಕಾಲ ಹತ್ತಿರಕ್ಕೆ ಬಂದಿರುವುದು ಸ್ವಾಗತಾರ್ಹ. ಆದರೆ ಕೆಲವರು ಇದರ ಬಗ್ಗೆ ಅಪಸ್ವರ ಎತ್ತುತ್ತಿರುವುದು ನಿಜಕ್ಕೂ ಶೋಚನೀಯ. ಇವರ ಪ್ರಕಾರ ಗ್ರೇಟರ್ ಮೈಸೂರು ಜಾರಿಗೆ ಬಂದರೆ ನಗರದಲ್ಲಿ ಕುಡಿಯುವ ನೀರಿರುವುದಿಲ್ಲ ಹಾಗೂ ಮೈಸೂರು ಬೆಂಗಳೂರಿನಂತಾ ಗುತ್ತದೆ ಎಂಬೆಲ್ಲಾ ಊಹಾಪೋಹ ಹರಿದಾಡುತ್ತಿದೆ. ಹಾಗಾದರೆ ಸ್ವಾಮಿ, ಖಾಸಗಿ ಬಡಾವಣೆಗಳಲ್ಲಿರುವವರು, ರಿಂಗ್ ರೋಡ್ ಸುತ್ತ ಹೊರ ವಲಯದಲ್ಲಿರುವವರು ನಾವೇನು ಬೇರೆ ದೇಶದವರೇ? ಕೋಟ್ಯಾಂತರ ರೂಪಾಯಿ ಕಂದಾಯ ಸಂಗ್ರಹ ವಾಗುತ್ತಿದ್ದರೂ ನಮಗೆ ಮೂಲ ಸೌಲಭ್ಯ ಕೊಡುವುದರಲ್ಲಿ ತಪ್ಪೇನಿದೆ? ತಮಿಳುನಾಡು ಕೇಳಿದಾಗಲೆಲ್ಲಾ ಕೃಷ್ಣರಾಜ ಅಣೆಕಟ್ಟೆಯಿಂದ ಡ್ಯಾಮ್ ಬರಿದಾಗುವಷ್ಟು ನೀರು ಕೊಡುವಾಗ ಸುಮ್ಮನಿರುವ ನೀವುಗಳು, ಅದರಲ್ಲಿ ಶೇಕಡ 1–2%ರಷ್ಟು ಹೆಚ್ಚುವರಿ ನೀರು ಖಾಸಗಿ ಬಡಾವಣೆಗಳಿಗೆ ಬಿಟ್ಟರೆ ತಮಗೇಕೆ ಸಹಿಸಲಾಗುತ್ತಿಲ್ಲ? ವರ್ಷಕ್ಕೊಮ್ಮೆ ತಮ್ಮ ಸಂಬಳ ಚೆನ್ನಾಗಿ ಬೆಳೆಯಬೇಕು ಎಂದು ಆಸೆ ಪಡುವ ಜನರು ಊರು ಮಾತ್ರ ಬೆಳೆಯಬಾರದು ಎಂದು ಹೇಳುವ ತರ್ಕ ಸರಿಯೇ? ರಿಂಗ್ ರೋಡ್ ಸುತ್ತ ಹೊರ ವಲಯಗಳಲ್ಲಿ ಶೇಕಡ 90ರಷ್ಟು ಭಾಗದಲ್ಲಿ ಜನಗಳು ವಾಸವಿದ್ದಾರೆಯೇ ಹೊರತು ಬೆಂಗಳೂರಿನಂತಾಗಲು ಇಲ್ಲಿ ಯಾವುದೇ ದೊಡ್ಡ ವಾಣಿಜ್ಯ ಸಂಸ್ಥೆಗಳಾಗಲಿ, ಬೃಹತ್ ಕೈಗಾರಿಕೆಗಳಾಗಲಿ ಇಲ್ಲ. ಆದ್ದರಿಂದ ಬೆಂಗಳೂರಿನಂತೆ ವಾಹನ ದಟ್ಟಣೆಯಾಗುವುದು ಎಂಬುದು ಶುದ್ಧ ಕಾಲ್ಪನಿಕ. ಹಲವು ವರ್ಷಗಳ ಖಾಸಗಿ ಬಡಾವಣೆಗಳ ಬೇಡಿಕೆಗಳಿಗೆ ಸರ್ಕಾರ ತಡವಾಗಿಯಾದರೂ ಸ್ಪಂದಿಸುತ್ತಿರುವುದಕ್ಕೆ ಧನ್ಯವಾದಗಳು.

–ಎಂ.ಎಸ್. ರಾಘವೇಂದ್ರ, ಮೈಸೂರು.


ಪುಣ್ಯ ಕೋಟಿ...ಮತ್ತು ವ್ಯಾಘ್ರನ ನವ್ಯ ಕಥೆ

ಮಾನ್ಯರೆ,

ಸಿದ್ದು ಸಿಂಹ! ಹೈಕಮಾಂಡ್ ಕೇವಲ ಬೆಕ್ಕು! 30.11.25ರ ವಿಕ್ರಂ ಮುತ್ತಣ್ಣರ ಬಿಚ್ಚು ನುಡಿ ಲೇಖನ ಕರ್ನಾಟಕದ ಈಗಿನ ರಾಜಕೀಯ ದೊಂಬರಾಟವನ್ನು ವಿವರವಾಗಿ, ಸರಳವಾಗಿ ವಿವರಿಸಿದೆ. ಸಿದ್ದರಾಮಯ್ಯನವರ ಚತುರ, ಸಂಘಟಿತ, ಹೋರಾಟ, ಡಿ.ಕೆ. ಶಿವಕುಮಾರ್ ಅವರ ಏಕಾಂಗಿ ಹೋರಾಟ, ಹೈಕಮಾಂಡ್‌ನ ಶಕ್ತಿ ಹೀನತೆ ಮಾಧ್ಯಮಗಳ ರಂಜನೆಗೆ ಕಾರಣವಾಗಿವೆ. ಡಿ.ಕೆ.ಶಿವಕುಮಾರ್ ಅವರಿಗೆ ನೀಡಿರುವ ಆಶ್ವಾಸನೆ ಹೈ ಕಮಾಂಡ್‌ಗೆ ಬಿಸಿ ತುಪ್ಪವಾಗಿದೆ. ಒಂದು ವೇಳೆ ಅಧಿಕಾರ ಹಸ್ತಾಂತರ ಮಾಡಿದರೆ ಎಲ್ಲಿ ಸರ್ಕಾರ ಬಿದ್ದು ಹೋಗುವುದೋ ಎನ್ನುವ ಆತಂಕ ಹೈಕಮಾಂಡ್ ಅನ್ನು ಕಾಡುತ್ತಿರುವಂತಿದೆ. ಅದಕ್ಕೆ ಕಾರಣ ಸಿದ್ದರಾಮಯ್ಯನವರು ಎಣೆದಿರುವ ಬಲೆ! ಇಲ್ಲಿ ಇನ್ನೂ ಒಂದು ವಿಚಿತ್ರವಿದೆ. ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಒಟ್ಟಾಗಿ ಸಿದ್ದರಾಮಯ್ಯನವರನ್ನೇ ಬೆಂಬಲಿಸುತ್ತಿದ್ದಾರೆ. ಇದಕ್ಕೆ ಕಾರಣ ನಾನೂ ಮುಖ್ಯ ಮಂತ್ರಿಯಾಗಬೇಕು. ಆದಾಗದಿದ್ದರೆ ನೀನೇ ಇರು! ಆತನಂತೂ ಆಗುವುದು ಬೇಡ ಎನ್ನುವ ಧೋರಣೆ! ಇಡೀ ದೇಶದಲ್ಲಿ ಕೇವಲ 2–3 ರಾಜ್ಯಗಳಲ್ಲಿ ಮಾತ್ರ ನೆಲೆ ಇರುವ ಪಕ್ಷಕ್ಕೆ ಎಲ್ಲಿ ಕೂಡ 'ಕೈ' ತಪ್ಪಿ ಹೋಗಬಹುದು ಎನ್ನುವ ಆತಂಕ ಕಾಡುತ್ತಿರುವಂತಿದೆ. ಏಕೆಂದರೆ ವಿರೋಧ ಪಕ್ಷಗಳು ಹೇಳುವಂತೆ ಕರ್ನಾಟಕವು ಕಾಂಗ್ರೆಸ್‌ನ ಸದ್ಯದ ಪ್ರಮುಖ ಎಟಿಎಂ ಆಗಿದೆ ಎನ್ನುವುದು.

ಆದರೆ ಇದನ್ನೆಲ್ಲಾ ಬದಿಗೊತ್ತಿ ಪಕ್ಷವು 2023 ರಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ವೇಳೆ ಉದ್ಭವಿಸಿದ್ದ ಬಿಕ್ಕಟ್ಟಿನ ವೇಳೆ ಆಗಿದ್ದ ಒಪ್ಪಂದದಂತೆ ನಡೆದುಕೊಳ್ಳುವುದು ಅದರ ಜವಾಬ್ದಾರಿಯಾಗಿದೆ. 'ವರ್ಡ್ ಪವರ್ ಇಸ್ ವರ್ಲ್ಡ್ ಪವರ್' ಎಂದು ಹೇಳಿರುವುದು ಇದೇ ಭಾಷೆಯನ್ನು. ಪುಣ್ಯ ಕೋಟಿಯ ಕತೆಯಂತೆ ವ್ಯಾಘ್ರ ಈಗ ಕೊಟ್ಟ ಮಾತಿನಂತೆ ವಾಪಸ್ ಬಂದ ಪುಣ್ಯಕೋಟಿ ಹಸುವನ್ನು ತಿನ್ನುವುದೇ? ಇಲ್ಲ ಎನ್ನುವುದೇ ಈಗಿನ ಕುತೂಹಲ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಭಕ್ತಿ ರಕ್ತದಿ ಹರಿಗೆ

ಭಗವತ್ ಪ್ರಾಪ್ತಿಗೆ ನಾನಾ ಮಾರ್ಗಗಳಿದ್ದರೂ, ಹಲವಾರು ಯೋಗಗಳನ್ನು ಗ್ರಂಥಗಳು ಹೇಳಿದ್ದರೂ ಭಕ್ತಿ ಯೋಗವು ಸಕಲಜನ ಸಾಧ್ಯವಾಗಿರುವುದು. ಅದರ ಜನಪ್ರಿಯತೆಗೆ ಕಾರಣವಾಗಿದೆ. ಸ್ವತಂತ್ರ ಚಿಂತನೆ, ವೈಜ್ಞಾನಿಕ ಪ್ರಯೋಗ, ವೈಚಾರಿಕ ವಿಚಾರ ಎಂದು ಹೇಳುವ ಈ ಕಾಲದಲ್ಲೂ ಎಷ್ಟೋ ದೇವಸ್ಥಾನಗಳಲ್ಲಿ ಗಂಟೆಗಟ್ಟಲೇ ಸಾಲಿನಲ್ಲಿ ನಿಂತು, ಮಳೆಯಲ್ಲಿ ನೆನೆದು, ಬಿಸಿಲಲ್ಲಿ ಬೆಂದು, ಚಳಿಯಲ್ಲಿ ನಡುಗಿ ದೇವರ ದರ್ಶನವನ್ನು ಮಾಡುವ ಭಕ್ತರಿರುವುದು ಭಕ್ತಿಯೋಗದ ಮಹಿಮೆಗೆ ಸಾಕ್ಷಿ. ಭಕ್ತರು ನಾನಾ ವಿಧಗಳವರಾಗಿರಬಹುದು. ಡಿವಿಜಿ ಅವರೆನ್ನುತ್ತಾರೆ–

ಹರಿಭಜಕರೊಳು ಭಯದಿನೊಗೆದುದನಿಬರ ಭಕುತಿ
ಮರದ ಮೇಲಣ ಭಕ್ತಿಯನಿಬರದು ನೋಡೆ ।
ಬರಿಯ ಸಂತೋಷದನುರಾಗರಸ ನಿಜಭಕ್ತಿ
ಪರಮದಾಕರ್ಷೆಯದು ಮಂಕುತಿಮ್ಮ ॥

ಕೆಲವರಿಗೆ ಭಗವಂತನಲ್ಲಿ ಭಕ್ತಿ ಇರುವುದಕ್ಕೆ ಕಾರಣ ಭಯ. ನಾವು ಎಷ್ಟೊಂದು ಪಾಪಗಳನ್ನು ಮಾಡಿದ್ದೇವೆ. ಏನು ಶಿಕ್ಷೆ ನಮಗೆ ಕಾದಿದೆಯೋ ಎಂಬ ಭೀತಿ. ಆ ಶಿಕ್ಷೆಯಿಂದ ವಿನಾಯಿತಿಯನ್ನು ಪಡೆಯಲು ಅವರು ದೇವಸ್ಥಾನಗಳಿಗೆ ಹೋಗುತ್ತಾರೆ, ಬೇಡಿಕೊಳ್ಳುತ್ತಾರೆ. ಇನ್ನು ಕೆಲವರದು ವರದ ಮೇಲಣ ಭಕ್ತಿ. ನನಗೆ ಮಂತ್ರಿ ಸ್ಥಾನ ಕೊಡಿಸು, ಕೋಟಿ ರೂಪಾಯಿ ಲಾಭ ಬರುವಂತೆ ಮಾಡು, ನಾನು ನಿನಗೆ ಗರುಡೋತ್ಸವ ಮಾಡಿಸುತ್ತೇನೆ ಎಂದು ಹೇಳುವ ವ್ಯಾಪಾರಿ ಲೆಕ್ಕಾಚಾರದ ಜನರಿವರು. ಆದರೆ ನಿಜವಾದ, ಸತ್ಯವಾದ ಭಕ್ತಿ ಯಾವುದು? ಭಗವಂತನಲ್ಲಿರುವ ನಿಷ್ಕಲ್ಮಷ, ಸ್ವಾರ್ಥರಹಿತ, ಶುದ್ಧ ಅನುರಾಗವೇ ನಿಜಭಕ್ತಿ. ಕಷ್ಟ ಪರಿಹಾರಕ್ಕಾಗಿ ಅಥವಾ ಲಾಭಕ್ಕಾಗಿ ಮಾಡುವುದು ಉತ್ತಮ ಭಕ್ತಿಯಲ್ಲ. ಇದನ್ನು ಭಗವದ್ಗೀತೆಯೂ ಹೇಳಿದೆ–

ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ॥
ತೇಷಾಂ ಜ್ಞಾನೀ ನಿತ್ಯಯುಕ್ತಃ ಏಕಭಕ್ತಿ ರ್ವಿಶಿಷ್ಯತೇ।
ಪ್ರಿಯೋ ಹಿ ಜ್ಞಾನಿನೋತ್ಯರ್ಥಮಹಂ ಸ ಚ ಮಮ ಪ್ರಿಯಃ॥

ನನ್ನ ಕಡೆಗೆ ನಾಲ್ಕು ವಿಧದ ಜನರು ಬರುತ್ತಾರೆ. ಯಾರೆಂದರೆ (1) ಆರ್ತರು (ದುಃಖಪೀಡಿತರಾಗಿ ನೊಂದವರು. (2) ಕುತೂಹಲಿಗಳಾದ ಜಿಜ್ಞಾಸುಗಳು (3) ಹಣವನ್ನೋ ಇತರ ಪ್ರಯೋಜನವನ್ನೋ ಬಯಸುವವರು ಮತ್ತು ಜ್ಞಾನಿಗಳು. ಆ ನಾಲ್ವರಲ್ಲಿ ಜ್ಞಾನಿಯು ಶ್ರೇಷ್ಠ, ಏಕೆಂದರೆ ಅವನ ಭಕ್ತಿ ಸ್ಥಿರ, ಏಕಮುಖ.

ಆ ಜ್ಞಾನಿಗೆ ಭಗವಂತನು ಅತ್ಯಂತ ಪ್ರಿಯ, ಭಗವಂತನಿಗೂ ಆ ಜ್ಞಾನಿಯು ಇಷ್ಟವಾದವನು – ಎಂದು ಭಗವದ್ಗೀತೆಯ ತಾತ್ಪರ್ಯ.

ಅನೇಕರು ಮುದಿತನದಲ್ಲಿ, ಇನ್ನೇನೂ ಮಾಡಲಾಗದ ಸ್ಥಿತಿಯಲ್ಲಿ ದೈವಭಕ್ತಿ ಚಿಕ್ಕತನದಲ್ಲಿಲ್ಲ ಎಂದುಕೊಳ್ಳುತ್ತಾರೆ. ಶರೀರದಲ್ಲಿ ಶಕ್ತಿ ಇದ್ದಾಗ, ಆ ದೇವರಿಂದೇನು, ಭಕ್ತಿಯಿಂದೇನು? ಎಂದು ಕೇಳುತ್ತಾರೆ. ಕೊನೆಯ ಘಳಿಗೆಯಲ್ಲಿ ಭಗವಂತನನ್ನು ಸ್ಮರಿಸಿದರೆ ಸಾಲದೆ? ಎಂದು ಪ್ರಶ್ನಿಸುತ್ತಾರೆ.

ಭಗವದ್ಗೀತೆಯಲ್ಲೊಂದು ಮಾತಿದೆ–

ಯಂ ಯಂ ಪಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್।
ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ॥

ಅಂತ್ಯಕಾಲದಲ್ಲಿ ಯಾವ ಯಾವ ವಸ್ತುವನ್ನು ಸ್ಮರಿಸುತ್ತಾ ಶರೀರವನ್ನು ಬಿಟ್ಟು ಹೋಗುವನೋ, ಆ ರೂಪವನ್ನೇ ಮುಂದೆ (ಮುಂದಿನ ಜನ್ಮದಲ್ಲಿ) ಪಡೆಯುವವನು. ಸದಾ ಆ ಭಾವನೆಯಲ್ಲೇ ಇದ್ದವನಾದ್ದರಿಂದ ಅದೇ ರೂಪವನ್ನು ತಳೆಯುವವನು ಎಂದು ಗೀತಾ ತಾತ್ಪರ್ಯ. ಇದನ್ನು ಡಿವಿಜಿ ಸ್ಪಷ್ಟಪಡಿಸುತ್ತಾರೆ–

ಯುಕ್ತಿ ಸಾಮ್ರಾಜ್ಯದಲಿ ಭಕ್ತಿ ಬಡಪರದೇಶಿ
ಶಕ್ತಿ ಚತುರತೆಯುಡಿಗಿ ನೀನು ಸೋತಂದು ।
ಉತ್ಕ್ರಮಣದರೆಮನದಿ ದೈವವನು ಪಿಡಿದೇನು
ಭಕ್ತಿ ರಕ್ತದಿ ಹರಿಗೆ ಮಂಕುತಿಮ್ಮ ॥

ಯುಕ್ತಿಗಳು ಬಲವತ್ತಾಗಿ ಸಾಮ್ರಾಜವನ್ನು ಕಟ್ಟುವಾಗ ಭಕ್ತಿ ಪರದೇಶಿ, (ಅದನ್ನು ಕೇಳುವವರೇ ಇಲ್ಲ. ಆದರೆ ಆ ಯುಕ್ತಿ, ಅದರ ಶಕ್ತಿ ಶಾಶ್ವತವಲ್ಲ. ಅದೂ ಉಡುಗಿ ಹೋಗುತ್ತದೆ, ಅಡಗಿ ಎಲ್ಲೋ ಕುಳಿತಿರುತ್ತದೆ. ಆ ಮನುಷ್ಯ ಸೋಲುತ್ತಾನೆ. ಅವನ ಕೊನೆಯ ಕಾಲ, ಉತ್ಕ್ರಮಣ ಸನ್ನಿಹಿತವಾಗುತ್ತದೆ. ಆಗ ಶರೀರಕ್ಕೂ ಶಕ್ತಿಯಿಲ್ಲ, ಮನಸ್ಸೂ ಅರ್ಧ ದುರ್ಬಲ. ಅಂತಹ ಕಾಲದಲ್ಲಿ ದೇವರನ್ನು ಸ್ಮರಿಸಿದರೂ ಫಲವೇನು? ನಿಜವಾದ ಭಕ್ತಿ ರಕ್ತದಲ್ಲಿ ಹರಿಯುತ್ತಿರಬೇಕು. ಆಗ ಭಗವಂತನ ಅನುಗ್ರಹ. ಸೋಗಿನ ಭಕ್ತಿ ಫಲವನ್ನು ಕೊಡಲಾರದು. ನಿಷ್ಫಲಭಕ್ತಿಗೆ ಫಲವಿದ್ದೇ ಇದೆ. ಈ ನಿಷ್ಫಲಭಕ್ತಿಯನ್ನೇ ಯೋಗ ಸೂತ್ರಗಳಲ್ಲಿ ಈಶ್ವರಪ್ರಣಿಧಾನವೆಂದು ಕರೆಯಲಾಗಿದೆ. ಇದು ಕ್ರಿಯಾಯೋಗದ ಅವಿಭಾಜ್ಯ ಅಂಗ. ಇದು ಕ್ಲೇಶಗಳನ್ನು ಕ್ಷೀಣಗೊಳಿಸಲು ಅತ್ಯಂತ ಅವಶ್ಯಕ.

ಭಕ್ತಿ ಎಂಬುದು ಪರಮಾತ್ಮನ ಮಹಾತ್ಮ್ಯದ ಜ್ಞಾನಪೂರ್ವಕವಾಗಿ ಬಂದಾಗ, ಯಾವ ಕಾರಣದಿಂದಲೂ ಚಂಚಲವಾಗದಿದ್ದಾಗ, ಪತ್ನಿ–ಪುತ್ರ–ಧನಾಧಿಕಾರಿಗಳ ಮೇಲಿನ ಆಕರ್ಷಣೆಗಳಿಗಿಂತ ಅಧಿಕವಾಗಿದ್ದಾಗ ಮೋಕ್ಷಕ್ಕೆ ಕಾರಣವಾಗುವುದೆಂದು ಶ್ರೀ ಮಧ್ವಾಚಾರ್ಯರು ಹೇಳಿದ್ದಾರೆ–

ಮೊಹಾತ್ಮ್ಯ ಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ।
ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನ ಚಾನ್ಯಥಾ॥

ಎಂಬುದು. ಅಂತಹ ಜ್ಞಾನವಿಲ್ಲದ, ಚಂಚಲವಾದ ಬರಿ ಭಕ್ತಿ ಪರಮಾತ್ಮ ದರ್ಶನವನ್ನು ಕೊಡಲಾರದು.

ಬರಿ ಭಕ್ತಿ ಬರಿ ಕರ್ಮ ಬರಿತರ್ಕ ದೊರಕಿಸದು
ಪರಮಾತ್ಮ ದರ್ಶನವ; ಬೇಕದಕೆ ತಪಸು।
ಪರಿಪೂರ್ಣ ಜೀವನಾನುಭವತಾಪದಿ ಮತಿಯು
ಪರಿಪಕ್ವವಾಗಲಿದು ಮಂಕುತಿಮ್ಮ।

ಜ್ಞಾನವಿಲ್ಲದೆ ಮಾಡುವ ಬರಿ ಭಕ್ತಿ ಎಲ್ಲೆಲ್ಲೂ ವಿಜೃಂಭಿಸುತ್ತಿದೆ. ದೇವಸ್ಥಾನಗಳಲ್ಲಿ ಜನಜಂಗುಳಿ. ದೇವರನ್ನು ಒಂದು ಕ್ಷಣ ನೋಡುವಾಗಲೂ ಹಿಂದಿನವರಿಂದ ತಳ್ಳಿಸಿಕೊಳ್ಳುವ ಹೀನ ಸ್ಥಿತಿ. ಇದರಲ್ಲಿ ಮನಸ್ಸನ್ನು ಭಗವಂತನಲ್ಲಿ ನಿಲ್ಲಿಸುವುದು, ಧ್ಯಾನ ಮಾಡುವುದು ಹೇಗೆ ಸಾಧ್ಯ? ಹಾಗೆಯೇ ಹಣವಿದೆಯೆಂದು ಮಾಡಿಸುವ ಹೋಮಾದಿಕರ್ಮಗಳು ಮಾಡುವವರು ಯಾರೋ, ಮಾಡಿಸುವವರು ಯಾರೋ. ಮತ್ತೆ ತನ್ನ ಪಕ್ಷ ಗೆಲ್ಲಬೇಕು, ವಿರೋಧಿಗಳು ಸೋಲಬೇಕು ಎಂಬ ಆಸೆಯಿಂದ ಹೂಡುವ ತರ್ಕ. ಸತ್ಯ ಏನಾದರೂ ಇರಲಿ, ಅದು ಮುಖ್ಯವಲ್ಲ, ವಿವಾದದಲ್ಲಿ ನನ್ನ ಕೈ ಮೇಲಾದರೆ ಸರಿ, ಎಂದು ಮಾಡುವ ತರ್ಕ. ಇವು ಯಾವುವೂ ಪರಮಾತ್ಮನ ದರ್ಶನವನ್ನು ದೊರಕಿಸವು.

ಜ್ಞಾನ, ಕರ್ಮ, ಭಕ್ತಿ ಎಲ್ಲವೂ ತಪಸ್ಸಿನ ರೂಪವಾದಾಗ ಮಾತ್ರ ಪರಮಾತ್ಮ ದರ್ಶನ. ತಪಸ್ಸು ಪರಿಪೂರ್ಣ ಜೀವನಾನುಭವದಿಂದ ಮತಿ, ಎಂದರೆ ಬುದ್ಧಿ ಪರಿಪಕ್ವವಾಗುತ್ತದೆ. ಪರಿಪಕ್ವವಾಗುವುದು ಎಂದರೆ ಮಾಗುವುದು. ಬುದ್ಧಿ ಮಾಗಲು ಕಾಲ ಬೇಕು. ಒತ್ತಾಯ ಮಾಡಿ ಹಣ್ಣನ್ನು ಕೃತಕವಾಗಿ ಮಾಗಿಸಿದರೆ ಅದರಲ್ಲಿ ರುಚಿ, ರಸ ಇರುವುದಿಲ್ಲ. ಸೂರ್ಯನ ಶಾಖದಿಂದ ಯೋಗ್ಯ ಕಾಲದಲ್ಲಿ ಮಾಗಿದ ಹಣ್ಣಿನಂತೆ ಬುದ್ಧಿ ಪರಿಪಕ್ವವಾದರೆ, ಪರಮಾತ್ಮ ದರ್ಶನ, ಅವನ ಅನುಗ್ರಹದಿಂದ ಮುಕ್ತಿ. ಮೂಢತೆಯಿಂದ ಮಾಡಿದ ಭಕ್ತಿ, ಕರ್ಮ, ತರ್ಕಲೋಕದ ದೃಷ್ಟಿಯಿಂದ ಯಾವುದೋ ಪ್ರಯೋಜನವನ್ನು ತರಬಹುದಷ್ಟೆ. ಮೂಢ ಭಕ್ತಿಯ ಮುಂದೆ ನಿಶ್ಚಲ ಭಕ್ತಿಗೆ ಮೆಟ್ಟಿಲಾದರೆ ಅದೂ ಗ್ರಾಹ್ಯವೇ. ನಾವು ಹೇಳುವುದೊಂದು ಮಾಡುವುದು ಇನ್ನೊಂದು ಎಂಬಂತಾಗಿದೆ. ಭಗವಂತನೇ ಎಲ್ಲವನ್ನು ಮಾಡುತ್ತಾನೆ. **ತೇನ ವಿನಾತೃಣಮಪಿನ ಚಲತಿ** (ಅವನಿಲ್ಲದೆ ಹುಲ್ಲು ಕಡ್ಡಿಯೂ ಅಲುಗಾಡದು) ಎಂದು ಹೇಳುವ ನಾವು ಜಗತ್ತೇ ನಮ್ಮ ಅಧೀನದಲ್ಲಿದೆ ಎಂಬ ಅಹಂಕಾರದಿಂದ ಏನೇನನ್ನೋ ಮಾಡುತ್ತೇವೆ. ಇದನ್ನು ತಿಳಿಸುತ್ತಾ ಡಿವಿಜಿ ಇದು ಎಂತಹ ಭಕ್ತಿ? ಎಂದು ಪ್ರಶ್ನಿಸುತ್ತಾರೆ.

ದೇವರದಿದೆಲ್ಲ ದೇವರಿಗೆಲ್ಲವೆಂದೊರಲುತ
ಅವುದನುಮವನ ನಿರ್ಣಯಕೆ ಬಿಡದೆ ತಾಂ।
ಧಾವಂತ ಬಡುತ ತನ್ನಿಚ್ಛೆಯನೆ ಘೋಷಿಸುವ
ಭಾವವೆಂತಹ ಭಕುತಿ ಮಂಕುತಿಮ್ಮ?॥

ಇದೆಲ್ಲ ದೇವರದು, ಎಲ್ಲವೂ ದೇವರಿಗೆ ಅರ್ಪಿತ ಎಂದು ಮತ್ತೆ ಮತ್ತೆ ಒರಲುತ್ತೇವೆ, ಎಂದರೆ ಹೇಳುತ್ತಿರುತ್ತೇವೆ. ಆದರೆ ಯಾವುದನ್ನೂ ಅವನ ನಿರ್ಣಯಕ್ಕೆ ಬಿಡುವುದಿಲ್ಲ. ಇದು ನನ್ನ ಹಕ್ಕು, ಇದು ನನ್ನ ಸವಲತ್ತು, ಇದನ್ನು ನಾನೇಕೆ ಬಿಡಲಿ? ಎಂದು ನಾವೇ ನಿರ್ಣಾಯಕರೆಂಬ ಅಹಂಕಾರವನ್ನು ತೋರಿಸುತ್ತೇವೆ. ಒಂದು ಕ್ಷಣ ತಡವಾದರೆ ಏನಾಗಿ ಬಿಡುವುದೋ ಎಂಬ ಧಾವಂತದಿಂದ, ಆತಂಕದಿಂದ ನಮ್ಮ ಇಚ್ಛೆಯನ್ನೇ ಘೋಷಿಸುತ್ತೇವೆ. ಇದು ಎಂತಹ ಭಕ್ತಿ? ನಾಲಿಗೆಗೂ ಕೈಗೂ ಸಾಮರಸ್ಯವಿಲ್ಲ. ಇಂದು ನಮ್ಮ ಸ್ಥಿತಿ ಹೇಗಿದೆ? ಡಿವಿಜಿ ಹೇಳುತ್ತಾರೆ–

ಹಳೆಯ ಭಕ್ತಿಶ್ರದ್ಧೆಯಳಸಿ ಹೋಗಿದೆ ಮಾಸಿ
ಸುಳಿದಿಲ್ಲವಾದ ಹೊಸ ದರ್ಶನದ ಹೊಳಪುಂ।
ಪಳಗಿದ್ದ ಮನೆ ಬಿದ್ದ ಕುಂಟ ಕುರುಡನ ತೆರದಿ
ತಳಮಳಿಸುತಿದೆ ಲೋಕ ಮಂಕುತಿಮ್ಮ ॥

ಹಿಂದೆ ಶ್ರದ್ಧೆಯಿತ್ತು, ಭಕ್ತಿಯಿತ್ತು. ಅವು ಇಂದು ಇಲ್ಲ. ಹಳೆಯದು ಹೋಗಲಿ, ಹೊಸ ದರ್ಶನ, ಹೊಸ ನೋಟ ಬಂದಿದೆಯೇ ಎಂದರೆ ಅದೂ ಇಲ್ಲ. ಕುಂಟನೂ ಕುರುಡನೂ ಆಗಿದ್ದ ದುರ್ದೈವಿ ಹಳೆಯ ಮನೆಗೆ ಹೇಗೋ ಹೊಂದಿಕೊಂಡು ಬದುಕುತ್ತಿದ್ದ. ದುರದೃಷ್ಟದಿಂದ ಆ ಮನೆಯೂ ಬಿದ್ದು ಹೋಯಿತು. ತಳಮಳ ಗೊಂಡು ಏನನ್ನೂ ಮಾಡಲಾಗದೆ ಅವನು ಕಳವಳಪಡುವ ಹಾಗೆ ಇಂದು ನಮ್ಮ ಸ್ಥಿತಿಯಾಗಿದೆ. ಇದು ಹೋಗಿ ಹೊಸ ಕಾಣ್ಕೆ ಬರಬೇಕು. ಭಕ್ತಿ ಶ್ರದ್ಧೆಗಳು ದೃಢವಾಗಬೇಕು. ಆ ದಿಕ್ಕಿನಲ್ಲಿ ಪರಮಾತ್ಮನು ಪ್ರೇರಣೆ ನೀಡಲಿ.

ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ನವೀಕರಣ, ನಿರ್ವಹಣೆಗೆ ಡಿ.20 ಟೆಂಡರ್ ಸಲ್ಲಿಸಲು ಕೊನೆ ದಿನ

ಮೈಸೂರು, ಡಿ.2(ಬಿಎಲ್‌ಯು)– ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನವೀಕರಿಸಿ, ನಿರ್ವಹಣೆ ಮಾಡಲು ಟೆಂಡರ್ ಅರ್ಜಿ ಸಲ್ಲಿಸಲು ಡಿ.20 ಕೊನೆಯ ದಿನವಾಗಿದೆ. 2026, ಮಾರ್ಚ್ ವೇಳೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಆಗಸ್ಟ್ ತಿಂಗಳಲ್ಲಿ ನವೀಕರಣ ಕಾರ್ಯ ಆರಂಭಗೊಳ್ಳುವ ಸಾಧ್ಯತೆ ಇದೆ.

ಶತಮಾನೋತ್ಸವ ಪೂರೈಸಿರುವ ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಕಟ್ಟಡವನ್ನು ಸೂಕ್ತ ನಿರ್ವಹಣೆ ಮಾಡದ ಕಾರಣ ಕೆಲವು ಭಾಗ ಶಿಥಿಲಗೊಂಡಿದ್ದು, ಕೆಲವು ಭಾಗದ ಗಾರೆ ಉದುರಿ ಬೀಳುತ್ತಿದೆ. ಅಲ್ಲದೆ ಮಳೆಗಾಲದಲ್ಲಿ ತಾರಸಿ ವಸ್ತಿ ಹಿಡಿದು ನೀರು ಜಿನುಗುತ್ತಿದೆ. ನವೀಕರಣ ಮಾಡದೆ ಹಾಗೆ ಬಿಟ್ಟರೆ ಮತ್ತಷ್ಟು ಶಿಥಿಲಗೊಳ್ಳುವ ಸಾಧ್ಯತೆ ಇತ್ತು.

ಇದನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನವೀಕರಣ ಮಾಡಲು ನಿರ್ಧರಿಸಿದೆ. ಇದಕ್ಕೆ ಎಷ್ಟು ಹಣ ಖರ್ಚಾಗುತ್ತದೆ. ಕಾಮಗಾರಿ ಸಾಧಕ–ಬಾಧಕಗಳೇನು ಎಂಬ ಬಗ್ಗೆ ತಜ್ಞರಿಂದ ವರದಿ ಪಡೆದಿದೆ.

ಈಗ ಶಿಥಿಲಾವಸ್ಥೆಯಲ್ಲಿರುವ ಲಲಿತ ಮಹಲ್ ಪ್ಯಾಲೇಸ್ ಕಟ್ಟಡ ನವೀಕರಣಕ್ಕೆ ಸುಮಾರು 50 ಕೋಟಿ ಅಗತ್ಯವಿದೆ ಎಂದು ತಜ್ಞರು ವರದಿ ನೀಡಿದ್ದರು. ಆದರೆ, ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ನವೀಕರಿ ಸಲು ರಾಜ್ಯ ಸರ್ಕಾರ ಹಿಂದೇಟು ಹಾಕಿತು. ಈ ಹಿನ್ನೆಲೆಯಲ್ಲಿ ಲಲಿತ ಮಹಲ್ ಪ್ಯಾಲೇಸ್ ನವೀಕರಣ ಹಾಗೂ ನಿರ್ವಹಣೆ ಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲು ತೀರ್ಮಾನ ಮಾಡಿದೆ. ಇದಕ್ಕೆ ರಾಜ್ಯ ಸಚಿವ ಸಂಪುಟ ಕೂಡ ಸಮ್ಮತಿ ನೀಡಿತು.

ರಾಜ್ಯ ಸರ್ಕಾರದ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಅಧೀನಕ್ಕೊಳಪಟ್ಟ ಲಲಿತ ಮಹಲ್ ಪ್ಯಾಲೇಸ್ ಕಟ್ಟಡ ನವೀಕರಿಸಿ, ನಿರ್ವಹಣೆ ಮಾಡಿ ರಾಜ್ಯ ಸರ್ಕಾರಕ್ಕೆ ಇಂತಿಷ್ಟು ಹಣ ನೀಡಲು ಜಾಗತಿಕ ಟೆಂಡರ್ ಕರೆದಿದೆ. ಕಳೆದ ಎಂಟು ತಿಂಗಳ ಹಿಂದೆಯೇ ಟೆಂಡರ್ ಕರೆಯಲಾಗಿದೆ.

ಪಾರಂಪರಿಕ ಶೈಲಿಯ ಲಲಿತ ಮಹಲ್ ಪ್ಯಾಲೇಸ್ ಸೌಂದರ್ಯಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆ ಆಗದಂತೆ ನವೀಕರಣ ಮಾಡಲು ಟೆಂಡರ್‌ನಲ್ಲಿ ಆಗಾಗ್ಗೆ ಕೆಲವು ಮಾರ್ಪಾಡುಗಳನ್ನು ಮಾಡಲಾಗಿದೆ. ಇದರಿಂದ ಟೆಂಡರ್ ಪ್ರಕ್ರಿಯೆ ವಿಳಂಬವಾಯಿತು. ಅಂತಿಮವಾಗಿ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಡಿಸೆಂಬರ್ 20 ಕೊನೆಯ ದಿನವಾಗಿದೆ. ಜಾಗತಿಕ ಟೆಂಡರ್‌ನಲ್ಲಿ ಎಷ್ಟು ಕಂಪನಿಗಳು ಮುಂದೆ ಬಂದಿವೆ ಎಂಬ ಬಗ್ಗೆ ಈಗಲೇ ಮಾಹಿತಿ ದೊರೆಯುವುದಿಲ್ಲ. ಆನ್‌ಲೈನ್‌ನಲ್ಲಿ ಟೆಂಡರ್ ಅರ್ಜಿ ಸಲ್ಲಿಸಬೇಕಿರುವ ಕಾರಣ ನಿಗದಿತ ದಿನಾಂಕದಂದು ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್‌ನವರು ಟೆಂಡರ್ ಓಪನ್ ಮಾಡಿರುತ್ತಾರೆ. ಇದರಲ್ಲಿ ರಾಜ್ಯ ಸರ್ಕಾರಕ್ಕೆ ಅತೀ ಹೆಚ್ಚು ಹಣ ನೀಡುವುದಾಗಿ ನಿಗದಿ ಮಾಡಿರುವ ಕಂಪನಿಯನ್ನು ಆಯ್ಕೆ ಮಾಡಲಾಗುತ್ತದೆ.

ತರುವಾಯ ಅತೀ ಹೆಚ್ಚು ಹಣ ನೀಡುವುದಾಗಿ ನಿಗದಿಗೊಳಿಸಿರುವ ಕಂಪನಿಯ ಫೈನಾನ್ಷಿಯಲ್ ಬಿಡ್‌ನಲ್ಲಿ ಅರ್ಹತೆ ಪಡೆದಿದೆಯೇ ಎಂದು ಸರ್ಕಾರದ ನಿಯಮದಂತೆ ಅಧ್ಯಯನ ಮಾಡಲಾಗುತ್ತದೆ. ಅಂದರೆ ಆ ಕಂಪನಿಯ ಹಣಕಾಸು ವಹಿವಾಟು ಪರಿಶೀಲಿಸಲಾಗುತ್ತದೆ. ತರುವಾಯ ಫೈನಾನ್ಷಿಯಲ್ ಬಿಡ್‌ನಲ್ಲಿ ಅರ್ಹತೆ ಪಡೆದಿದೆ ಎಂದು ಖಚಿತವಾದ ನಂತರ ಅಂತಿಮವಾಗಿ ಅರ್ಹ ಕಂಪನಿಗೆ ಗುತ್ತಿಗೆ ನೀಡಲಾಗುತ್ತದೆ.





ಲಲಿತ ಮಹಲ್ ಪ್ಯಾಲೇಸ್‌ನ ಗುಮ್ಮಟದ ಬಳಿ ಗಾರೆ ಉದುರುತ್ತಿರುವುದು (ಎಡಚಿತ್ರ). ಪ್ಯಾಲೇಸ್ ಪ್ರವೇಶ ದ್ವಾರದ ಮಳೆ ನೀರಿನಿಂದ ವಸ್ತಿ ಹಿಡಿದಿರುವುದು (ಬಲಚಿತ್ರ).

- ಶಿಥಿಲಾವಸ್ಥೆಯಲ್ಲಿರುವ ಪ್ಯಾಲೇಸ್ ಕಟ್ಟಡ
- ನವೀಕರಣಕ್ಕೆ 50 ಕೋಟಿಗೂ ಹೆಚ್ಚು ವೆಚ್ಚ
- ಪಾರಂಪರಿಕ ಶೈಲಿಗೆ ಧಕ್ಕೆ ಆಗದಂತೆ ನವೀಕರಣ
- ವಾರ್ಷಿಕ ಹೆಚ್ಚು ಹಣ ನೀಡುವ ಕಂಪನಿಗೆ ಗುತ್ತಿಗೆ

ನವೀಕರಣದ ವೇಳೆ ಸಲಹೆ, ಮಾರ್ಗದರ್ಶನ, ಸೂಚನೆ ನೀಡಲು ತಜ್ಞರ ಸಮಿತಿ ರಚನೆ

ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನವೀಕರಣ ಸಂಬಂಧ ಅಗತ್ಯ ಸಲಹೆ, ಮಾರ್ಗದರ್ಶನ ಹಾಗೂ ಸೂಚನೆ ನೀಡಲು ತಜ್ಞರ ಸಮಿತಿ ರಚನೆ ಮಾಡಲಾಗಿದೆ. ನವೀಕರಣದ ವೇಳೆ ತಜ್ಞರ ಸಮಿತಿ ಅಣತಿ ಮೀರದಂತೆ ಟೆಂಡರ್ ಪಡೆಯುವ ಕಂಪನಿಗೆ ಷರತ್ತು ವಿಧಿಸಲಾಗಿದೆ. ನವೀಕರಣ ಮಾಡುವ ಸಂಬಂಧ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ರಾಜ್ಯ ಸರ್ಕಾರಕ್ಕೆ ವರದಿ ನೀಡಿದೆ. ಯಾವ ರೀತಿ ನವೀಕರಣ ಮಾಡಬೇಕೆಂದು ವರದಿಯಲ್ಲಿ ವಿವರವಾಗಿ ತಿಳಿಸಿದೆ.

ನವೀಕರಣ ಮಾಡಲು ಸಲಹೆ, ಮಾರ್ಗದರ್ಶನ, ಸೂಚನೆ ನೀಡಲು ಪಾರಂಪರಿಕ ತಜ್ಞರ ಸಮಿತಿ ರಚನೆ ಮಾಡಲಾಗಿದೆ. ಕಾಲ ಕಾಲಕ್ಕೆ ಈ ಸಮಿತಿಯ ತಜ್ಞರು ಹೋಟೆಲ್‌ಗೆ ಭೇಟಿ ನೀಡಿ ನವೀಕರಣ ಸಂಬಂಧ ಅಗತ್ಯ ಸಲಹೆ, ಮಾರ್ಗದರ್ಶನ, ಸೂಚನೆ ನೀಡಲಿದ್ದಾರೆ. ಯಾವುದೇ ಕಾರಣಕ್ಕೂ ತಜ್ಞರ ಸೂಚನೆಯನ್ನು ಟೆಂಡರ್ ಪಡೆದ ಕಂಪನಿ ಮೀರುವಂತಿಲ್ಲ. ತಜ್ಞರ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸಬೇಕು. ಅಲ್ಲದೆ ಗುತ್ತಿಗೆ ಅವಧಿಯ 30 ವರ್ಷದವರೆಗೆ ಇಡೀ ಕಟ್ಟಡ ಹಾಗೂ ಸೌಂದರ್ಯಕ್ಕೆ ಧಕ್ಕೆ ಆಗದಂತೆ ನಿರ್ವಹಣೆ ಕೂಡ ಮಾಡಬೇಕಿದೆ.

30 ವರ್ಷದ ಅವಧಿಗೆ ಪ್ಯಾಲೇಸ್ ಗುತ್ತಿಗೆ

ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಅನ್ನು 30 ವರ್ಷದ ಅವಧಿಗೆ ಗುತ್ತಿಗೆ ನೀಡಲಾಗುತ್ತಿದೆ. ಟೆಂಡರ್ ಪಡೆದ ಕಂಪನಿ ಮೊದಲು ಇಡೀ ಕಟ್ಟಡವನ್ನು ನವೀಕರಿಸಬೇಕು. ಟೆಂಡರ್‌ನಲ್ಲಿ ನಮೂದಿಸಿರುವ ನಿಯಮದಂತೆಯೇ ನವೀಕರಣ ಕಾರ್ಯ ಕೈಗೊಳ್ಳಬೇಕು. ನವೀಕರಣ ಪೂರ್ಣಗೊಂಡ ನಂತರ ಸರ್ಕಾರ ಇಡೀ ಕಟ್ಟಡವನ್ನು ಗುತ್ತಿಗೆ ಪಡೆದ ಕಂಪನಿಯ ಸ್ವಾಧೀನಕ್ಕೆ ಒಪ್ಪಿಸಲಿದೆ. ಗುತ್ತಿಗೆ ಪಡೆದ ಕಂಪನಿ ಇಷ್ಟು ಕೋಟಿ ಹಣವನ್ನು ಠೇವಣಿಯಾಗಿ ಇಡಬೇಕೆಂದು ಸರ್ಕಾರ ಷರತ್ತು ವಿಧಿಸಿದೆ. ಆ ಠೇವಣಿ ಹಣ ಸರ್ಕಾರದ ಖಜಾನೆಯಲ್ಲಿ ಇರುತ್ತದೆ. ಗುತ್ತಿಗೆ ಪಡೆದ ಕಂಪನಿ 30 ವರ್ಷದ ಅವಧಿಯಲ್ಲಿ ಪ್ಯಾಲೇಸ್ ಕಟ್ಟಡ ಹಾಗೂ ಅದರ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆ ತಂದರೆ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಟೆಂಡರ್‌ನಲ್ಲಿ ಷರತ್ತು ವಿಧಿಸಲಾಗಿದೆ.

ವರ್ಷಕ್ಕೆ ರಾಜ್ಯ ಸರ್ಕಾರಕ್ಕೆ 4 ಕೋಟಿಗೂ ಹೆಚ್ಚು ನೀಡಬೇಕು

" ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ಗುತ್ತಿಗೆ ಪಡೆದ ಕಂಪನಿ ವರ್ಷಕ್ಕೆ ರಾಜ್ಯ ಸರ್ಕಾರಕ್ಕೆ ಗ್ಯಾರಂಟಿಯಾಗಿ 4 ಕೋಟಿ ರೂಪಾಯಿ ಹಾಗೂ ಮೇಲ್ಪಟ್ಟು ಶೇಕಡ 10ರಷ್ಟು ಹೆಚ್ಚುವರಿ ಹಣ ನೀಡಬೇಕು. ಟೆಂಡರ್‌ನಲ್ಲಿ ಅರ್ಜಿ ಸಲ್ಲಿಸುವ ಕಂಪನಿಗಳಲ್ಲಿ ಯಾವುದು ರಾಜ್ಯ ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚಾಗಿ ಹಣ ಕೋಟ್ ಮಾಡಿರುತ್ತದೆಯೇ ಆ ಕಂಪನಿಗೆ ಟೆಂಡರ್ ನೀಡಲಾಗುವುದು. ಪಾರಂಪರಿಕ ಶೈಲಿಯ ಕಟ್ಟಡವಾದ ಕಾರಣ ಟೆಂಡರ್‌ನಲ್ಲಿ ನವೀಕರಣ ಮಾಡುವ ಸಂಬಂಧ ಹಲವು ಮಾರ್ಪಾಡು ಮಾಡಲಾಯಿತು. ಈ ಹಿನ್ನೆಲೆಯಲ್ಲಿ ಎಂಟು ತಿಂಗಳ ಹಿಂದೆ ಟೆಂಡರ್ ಕರೆದರೂ ಪ್ರಕ್ರಿಯೆ ಪೂರ್ಣಗೊಂಡಿಲ್ಲ. ಈಗ ಟೆಂಡರ್ ಅರ್ಜಿ ಸಲ್ಲಿಸಲು ಡಿಸೆಂಬರ್ 20 ಕೊನೆಯ ದಿನವಾಗಿದೆ. ಟೆಂಡರ್ ಬಿಡ್ ತೆರೆದ ನಂತರ ಸರ್ಕಾರದ ನಿಯಮದಂತೆ ಹಲವು ಪ್ರಕ್ರಿಯೆ ಪೂರ್ಣಗೊಳಿಸಬೇಕು. ತರುವಾಯ ಅರ್ಹ ಕಂಪನಿಗೆ ಟೆಂಡರ್ ನೀಡಲಾಗುವುದು. ಹಾಗಾಗಿ ಇಂತಹ ದಿನಾಂಕದಿಂದಲೇ ನವೀಕರಣ ಕಾರ್ಯ ಆರಂಭಗೊಳ್ಳುತ್ತದೆ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಪ್ಯಾಲೆಸ್ ಸೌಂಧರ್ಯಕ್ಕೆ ಧಕ್ಕೆಯಾದಂತೆ ನವೀಕರಣ ಮಾಡಲಾಗುವುದು. ಇದರ ಉಸ್ತುವಾರಿಯನ್ನು ನಮ್ಮ ಸಂಸ್ಥೆಯೇ ವಹಿಸಿಕೊಂಡಿದೆ.

–ಪ್ರಶಾಂತ್, ವ್ಯವಸ್ಥಾಪಕ ನಿರ್ದೇಶಕರು,
ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್, ಬೆಂಗಳೂರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ಭಕ್ತಿ ಭಾವದ ಹನುಮ ಜಯಂತಿ ಆಚರಣೆ

ಮೈಸೂರು ಅರಮನೆ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನವೂ ಸೇರಿದಂತೆ ಹಲವೆಡೆ ವಿಶೇಷ ಪೂಜೆ



ಮೈಸೂರಿನ ಇರ್ವಿನ್ ರಸ್ತೆಯ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ಹನುಮ ಜಯಂತಿ ಅಂಗವಾಗಿ ಹೋಮ ಹವನ ನೆರವೇರಿಸಲಾಯಿತು.



ಮೈಸೂರಿನ ದೇವರಾಜ ಅರಸ್ ರಸ್ತೆಯಲ್ಲಿರುವ ವೀರಾಂಜನೇಯ ದೇವಸ್ಥಾನದಲ್ಲಿ ಮೈಸೂರು ಯುವ ಬಳಗದ ವತಿಯಿಂದ ಆಯೋಜಿಸಿದ್ದ ಹನುಮ ಜಯಂತಿ ಪೂಜಾ ಕಾರ್ಯಕ್ರಮದಲ್ಲಿ ಶಾಸಕ ಹರೀಶ್‌ಗೌಡ ಭಾಗವಹಿಸಿದ್ದರು. ಈ ವೇಳೆ ರಾಮರಾಜ್, ನವಕಾರ್ ಪ್ರವೀಣ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ಸಂದೀಪ್, ಶ್ರೀ ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕರಾದ ರವಿಚಂದ್ರ, ಗುರುರಾಜ್, ಪ್ರಮೋದ್, ಪ್ರಶಾಂತ್, ನವೀನ್, ನಂಜುಂಡಿ, ಹರೀಶ್‌ಗೌಡ, ಎಸ್.ಎನ್. ರಾಜೇಶ್ ಮತ್ತಿತರರು ಉಪಸ್ಥಿತರಿದ್ದರು.



ಹನುಮ ಜಯಂತಿ ಅಂಗವಾಗಿ ಮೈಸೂರಿನ ಶಿವರಾಂಪೇಟೆಯ ಶ್ರೀ ತ್ರಿಪುರ ಭೈರವಿ ಮಠದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪ್ರಸಾದ ವಿತರಣೆ ಮಾಡಲಾಯಿತು.



ಮೈಸೂರಿನ ಜೆಎಸ್‌ಎಸ್ ವಿದ್ಯಾಪೀಠದ ಎದುರಿನ ಶ್ರೀ ಆಂಜನೇಯಸ್ವಾಮಿ ದೇವಾಲಯದಲ್ಲಿ ಹನುಮ ಜಯಂತಿ ಅಂಗವಾಗಿ ಮಂಗಳವಾರ ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸ್ ಅವರು ವಿಶೇಷಾ ಪೂಜಾ ಕೈಂಕರ್ಯ ನೆರವೇರಿಸಿದರು.



ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಮಹೋತ್ಸವದ ಅಂಗವಾಗಿ ಹೂವು ಹಣ್ಣುಗಳಿಂದ ಅಲಂಕರಿಸಿ ಆಂಜನೇಯ ಸ್ವಾಮಿಗೆ ದ್ರವ್ಯಗಳಿಂದ ಮತ್ತು ಪಂಚಾಮೃತ ಅಭಿಷೇಕವನ್ನು ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ಎಸ್.ಕೃಷ್ಣಮೂರ್ತಿ ನೇತೃತ್ವದಲ್ಲಿ ಸಲ್ಲಿಸಿ ವಿಶೇಷ ಪೂಜೆ ಸಲ್ಲಿಸಿದರು. ಮಹಾಮಂಗಳಾರತಿ, ತೀರ್ಥ-ಪ್ರಸಾದ ವಿತರಿಸಲಾಯಿತು.

ಮೈಸೂರು, ಡಿ.2(ಬಿಎಲ್‌ಯು)– ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆಯ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನ ಸೇರಿದಂತೆ ನಗರದ ಹಲವು ಆಂಜನೇಯಸ್ವಾಮಿ ದೇವಸ್ಥಾನಗಳಲ್ಲಿ ಹನುಮ ಜಯಂತಿಯನ್ನು ಭಕ್ತಿ ಭಾವದ ವಿಶೇಷ ಪೂಜೆ, ಹೋಮ-ಹವನದ ಮೂಲಕ ಆಚರಿಸಲಾಯಿತು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಹಿನ್ನೆಲೆ ಇಂದು ಪ್ರಾತಃ ಕಾಲದಲ್ಲಿ ನಿತ್ಯ ಧಾರ್ಮಿಕ ವಿಧಿಗಳನ್ನು ನೆರವೇರಿಸಲಾಯಿತು. ತರುವಾಯ ನವ ಕಳಸ ಸ್ಥಾಪನೆ, ಭಾಗವಾನ್ ದೇವ ಪುಣ್ಯಾಃ ವಿಧಿಯೊಂದಿಗೆ ಆಂಜನೇಯಸ್ವಾಮಿ ಮೂಲ ಮೂರ್ತಿಗೆ ವೇದೋಕ್ತವಾಗಿ ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು.

ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕೈಂಕರ್ಯವನ್ನು ನೂರಾರು ಭಕ್ತರು ವೀಕ್ಷಿಸಿದರು. ತರುವಾಯ ಭಗವಾನ್ ಆಂಜನೇಯಸ್ವಾಮಿ ಮೂಲ ಮೂರ್ತಿಗೆ ಮಾಡಿದ್ದ ಅಭಿಷೇಕದ ಪ್ರಸಾದವನ್ನು ಭಕ್ತರಿಗೆ ವಿತರಣೆ ಮಾಡಲಾಯಿತು.

ಮುಂಜಾನೆಯಿಂದ ರಾತ್ರಿಯವರೆಗೆ ನಿರಂತರ ಪೂಜಾ ಕೈಂಕರ್ಯಗಳು ನಡೆಯಿತು. ಈ ವೇಳೆ ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಧನ್ಯತಾ ಭಾವ ಹೊಂದಿದರು. ಇಂದಿನಿಂದ ನವೆಂಬರ್ 16ರವರೆಗೆ ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ವಿಶೇಷ ಪೂಜೆಗಳು ನಡೆಯಲಿವೆ. ಅಲ್ಲದೆ ದೇವಸ್ಥಾನದ ಮುಂದೆ ಹೆಸರಾಂತ ಕಲಾವಿದರಿಂದ ನಾದಸ್ವರ, ಸ್ಯಾಕ್ಸೋಫೋನ್, ದೇವರನಾಮ, ಹರಿಕಥೆ, ನಾದ ನೃತ್ಯ ನಮನ, ಭಕ್ತಿ ಸಂಗೀತ, ಭಕ್ತಿ ಗೀತೆ, ಭರತ ನಾಟ್ಯ, ನೃತ್ಯ ರೂಪಕ, ಗಾಯನ, ಭಜನೆ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರತಿದಿನ ಪ್ರದರ್ಶನಗೊಳ್ಳಲಿವೆ. ಮೈಸೂರಿನ ಜೆಎಸ್‌ಎಸ್ ವಿದ್ಯಾಪೀಠದ ಎದುರಿನ ಶ್ರೀ ಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು. ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸ್ ಅವರು ಪೂಜಾ ಕೈಂಕರ್ಯ ನೆರವೇರಿಸಿದರು.

ಮೈಸೂರಿನ ಇರ್ವಿನ್ ರಸ್ತೆಯ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ದೇವರಾಜ ಅರಸ್ ರಸ್ತೆ ಹಾಗೂ ಶಿವರಾಂ ಪೇಟೆಯ ಶ್ರೀ ತ್ರಿಪುರ ಭೈರವಿ ಮಠದ ಆಂಜನೇಯಸ್ವಾಮಿ ದೇವಸ್ಥಾನ ಸೇರಿದಂತೆ ನಗರದ ಹಲವು ಆಂಜನೇಯಸ್ವಾಮಿ ದೇವಸ್ಥಾನಗಳಲ್ಲಿ ಹೋಮ-ಹವನ ಸೇರಿದಂತೆ ಹಲವು ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಈ ವೇಳೆ ನೂರಾರು ಭಕ್ತರಿಗೆ ಪ್ರಸಾದ ವಿನಿಯೋಗ ನೆರವೇರಿಸಲಾಯಿತು.

ಇಂದು ಶ್ರೀರಂಗಪಟ್ಟಣದಲ್ಲಿ ಹನುಮ ಮಾಲಾ ಸಂಕೀರ್ತನ ಯಾತ್ರೆ; ಮಾಲಾ ವಿಸರ್ಜನೆ

ಮೈಸೂರು,ಡಿ.2(ಎಂಟಿವೈ)– ಶ್ರೀರಂಗಪಟ್ಟಣದಲ್ಲಿ ಬುಧವಾರ(ಡಿ.3) ಬೆಳಗ್ಗೆ 11ಕ್ಕೆ ಹನುಮ ಮಾಲಾ ಸಂಕೀರ್ತನ ಯಾತ್ರೆ ಹಾಗೂ ಮಾಲಾ ವಿಸರ್ಜನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮೂಡಲ ಬಾಗಿಲು ಹನುಮ ಮಾಲಾ ಸಮಿತಿಯ ಪ್ರಾಂತ ಪ್ರಮುಖ ಲೋಹಿತ್ ವಿ.ಅರಸ್ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂಡಲ ಬಾಗಿಲು ಹನುಮ ಮಾಲಾ ಸಮಿತಿ ಹಾಗೂ ಹಿಂದೂ ಜಾಗರಣ ವೇದಿಕೆಗಳ ಸಂಯುಕ್ತಾಶ್ರಯದಲ್ಲಿ ಹನುಮ ಮಾಲಾ ಸಂಕೀರ್ತನ ಯಾತ್ರೆ ಮತ್ತು ಮಾಲಾ ವಿಸರ್ಜನಾ ಕಾರ್ಯಕ್ರಮ ಆಯೋಜಿಸಲಾಗಿದೆ. ಬೆಳಗ್ಗೆ 10 ಗಂಟೆಗೆ ನಿಮಿಷಾಂಬ ದೇವಾಲಯದ ಆವರಣದಲ್ಲಿ ಸಾರ್ವಜನಿಕ ಸಭೆ ನಡೆಯಲಿದೆ. ಬಳಿಕ ದೇವಾಲಯದ ಆವರಣದಿಂದ ಬೆಳಗ್ಗೆ 11ಕ್ಕೆ ಬೃಹತ್ ಸಂಕೀರ್ತನ ಯಾತ್ರೆ ಆರಂಭವಾಗಿ ಶ್ರೀರಂಗಪಟ್ಟಣದ ಕೋಟೆ ತಲುಪಿ ನಂತರ ಮೂಡಲ ಬಾಗಿಲು ಆಂಜನೇಯಸ್ವಾಮಿ ದರ್ಶನ ಪಡೆದು, ಶ್ರೀರಂಗನಾಥ ಸ್ವಾಮಿ ದೇವಾಲಯದ ಬಳಿ ಸಮಾರೋಪಗೊಳ್ಳಲಿದೆ. ಬಳಿಕ ಅದೇ ಮೈದಾನದಲ್ಲಿ ಮಾಲಾ ವಿಸರ್ಜನೆ, ಪ್ರಸಾದ ವಿನಿಯೋಗ ನಡೆಯಲಿದೆ. ಈ ಯಾತ್ರೆಯಲ್ಲಿ ಸಾವಿರಾರು ಮಂದಿ ಪಾಲ್ಗೊಳ್ಳಲಿದ್ದಾರೆ ಎಂದರು.

1786ರಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಭವ್ಯವಾದ ಮೂಡಲ ಬಾಗಿಲು ಆಂಜ ನೇಯಸ್ವಾಮಿ ದೇವಾಲಯವಿತ್ತು. ಅದನ್ನು ಟಿಪ್ಪು ಕೆಡವಿ, ಅಲ್ಲಿನ ಅರ್ಚಕರನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ಅಲ್ಲಿದ್ದ ದಿವ್ಯ ಹನುಮ ಮೂರ್ತಿಯನ್ನು ಕಾವೇರಿ ನದಿಯಲ್ಲಿ ಎಸೆದಿದ್ದ. ಅಂದಿನಿಂದಲೂ ಅಲ್ಲಿನ ಹನುಮ ಭಕ್ತರು ತೀವ್ರ ಅಪಮಾನ ಹಾಗೂ ನೋವನ್ನು ಸಹಿಸಿಕೊಂಡಿದ್ದಾರೆ. ಹೀಗಾಗಿ ಹನುಮ ಮೂರ್ತಿ ಮೂಲ ಸ್ಥಾನ ಸೇರಬೇಕು. ಮೂಲ ಸ್ಥಳದಲ್ಲಿ ಮತ್ತೆ ಭವ್ಯವಾದ ಹನುಮ ಮಂದಿರ ನಿರ್ಮಿಸಬೇಕೆಂಬ ಸಂಕಲ್ಪದೊಡನೆ ಪ್ರತಿ ವರ್ಷ ಹನುಮ ಮಾಲಾ ಸಂಕೀರ್ತನ ಯಾತ್ರೆ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೂಡಲ ಬಾಗಿಲು ಹನುಮ ಮಾಲಾ ಸಮಿತಿಯ ಬಾಲರಾಜ್, ರಂಗಸ್ವಾಮಿ, ಸುಜನ್ ಗೌಡ, ಲಕ್ಷ್ಮೀನಾರಾಯಣ ಇದ್ದರು.

ಹನುಮ ಜಯಂತಿ ಪ್ರಯುಕ್ತ ಡಿ.5ಕ್ಕೆ ಡಾ.ಸುಮಾ ಹರಿನಾಥ್ ಭಕ್ತಿ ಸಂಗೀತ



ವಿದುಷಿ ಡಾ.ಸುಮಾ ಹರಿನಾಥ್ ವಿದ್ವಾನ್ ವಿ.ಶ್ಯಾಮ್ ವಿದ್ವಾನ್ ಸಿ.ಚೇತನ್

ಮೈಸೂರು, ಡಿ.2–ನಗರದ ಅರಮನೆ ಉತ್ತರ ದ್ವಾರ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಹನುಮ ಜಯಂತಿ ಪ್ರಯುಕ್ತ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಸಮೂಹ ದೇವಾಲಯಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ವತಿಯಿಂದ ಡಿ.5ರಂದು ಸಂಜೆ 7 ಗಂಟೆಗೆ ಮೈಸೂರಿನ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವಿದುಷಿ ಡಾ.ಸುಮಾ ಹರಿನಾಥ್ ಹಾಗೂ ತಂಡದವರಿಂದ ಭಕ್ತಿ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಮೃದಂಗದಲ್ಲಿ ವಿದ್ವಾನ್ ವಿ.ಶ್ಯಾಮ್, ವಯೋಲಿನ್‌ನಲ್ಲಿ ವಿದ್ವಾನ್ ಸಿ.ಚೇತನ್ ಸಹಕಾರ ನೀಡಲಿದ್ದಾರೆ.

ಕನ್ನಡ ರಾಜ್ಯೋತ್ಸವ....



ಮೈಸೂರಿನ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಮಹಿಳಾ ರಕ್ಷಣೆ ಪಡೆಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಸಾಧಕರಿಗೆ ಕನ್ನಡ ಕಣ್ಮಣಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ರವಿ ಶಾಸ್ತ್ರಿ, ಪ್ರಸಾದ್ ಎಚ್.ಡಿ.ಕೋಟೆ, ಸಮಾಜ ಸೇವಕ ಶ್ರೀಕಾಂತ್, ಚಂದ್ರು, ಡಾ.ಅಬ್ದುಲ್, ರಾಜೇಶ್, ಮಹಿಳಾ ಪಡೆ ಅಧ್ಯಕ್ಷೆ ಶ್ರೀಮತಿ ಲತಾಗೌಡ, ಗೌರವಾಧ್ಯಕ್ಷೆ ಕಮಲಾ ನಟರಾಜು, ಮಹೇಶ್‌ಕುಮಾರ್, ಮೇಘನಾ, ಎಚ್.ವಿ.ಪುಟ್ಟಸ್ವಾಮಿ, ಲಿಂಗರಾಜು ಮತ್ತಿತರರು ಉಪಸ್ಥಿತರಿದ್ದರು.

ಪೂರ್ಣ ಪ್ರಮಾಣದ ಒಳ ಮೀಸಲಾತಿ ಜಾರಿಗಾಗಿ ಡಿ.6ಕ್ಕೆ ಸಿದ್ದರಾಮನಹುಂಡಿಯಿಂದ ಜಾಥಾ

ಡಿ.11ರಂದು ಮೈಸೂರಲ್ಲಿ ರಾಜ್ಯ ಮಟ್ಟದ ಪ್ರತಿಭಟನಾ ಸಮಾವೇಶ

ಮೈಸೂರು,ಡಿ.2(ಎಂಟಿವೈ)– ಪೂರ್ಣ ಪ್ರಮಾಣದ ಒಳ ಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ ಡಿ.6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವಗ್ರಾಮ ಸಿದ್ದರಾಮನಹುಂಡಿಯಿಂದ ಬೃಹತ್ ಕಾಲ್ನಡಿಗೆ ಜಾಥಾ ಆರಂಭಿಸಿ, ಡಿ.11ರಂದು ಮೈಸೂರಿನ ಪುರಭವನದ ಆವರಣದಲ್ಲಿ ರಾಜ್ಯ ಮಟ್ಟದ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ಮುಖಂಡ ಬಸವರಾಜ ಕೌತಾಳ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಜಾಥಾಕ್ಕೆ ಚಾಲನೆ ದೊರೆಯಲಿದೆ. ಅಂದು ಸಿದ್ದರಾಮನಹುಂಡಿಯಲ್ಲೇ ವಾಸ್ತವ್ಯ ಹೂಡಿ, ಡಿ.7ರಂದು ಬೆಳಗ್ಗೆ ಟಿ.ನರಸೀಪುರ, ಬನ್ನೂರು, ವ್ಯಾಸರಾಜಪುರ ಮೂಲಕ ಮೈಸೂರಿನತ್ತ ಈ ಜಾಥಾ ಸಾಗಲಿದೆ. ಡಿ.11ರಂದು ಮೈಸೂರು ತಲುಪಿ ಅಂದು ಮಧ್ಯಾಹ್ನ 12ಕ್ಕೆ ಪುರಭವನದ ಬಳಿ ಬೃಹತ್ ಸಮಾವೇಶ ನಡೆಯಲಿದೆ. ಈ ವೇಳೆ ಪೂರ್ಣ ಒಳ ಮೀಸಲಾತಿ ಜಾರಿಗೆ ಯಾವುದೇ ಕ್ರಮ ಕೈಗೊಳ್ಳದಿದ್ದರೆ, ಎರಡನೇ ಹಂತದ ಹೋರಾಟವಾಗಿ ಬೆಂಗಳೂರಿನಲ್ಲಿನ ಸಿಎಂ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು ಎಂದರು.

ಇದೇ ವೇಳೆ ವಕೀಲ ಎಸ್.ಮಾರೆಪ್ಪ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪೂರ್ಣ ಪ್ರಮಾಣದ ಒಳ ಮೀಸಲಾತಿ ಜಾರಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ಹೀಗಾಗಿ ಸಚಿವ ಮಹದೇವಪ್ಪ ಅವರ ಖಾತೆ ಬದಲಿಸಬೇಕು. ಅಲ್ಲದೆ ಒಳ ಮೀಸಲಾತಿ ಜಾರಿಗೆ ಅಡ್ಡಿಪಡಿಸುತ್ತಿರುವ ಅಧಿಕಾರಿಗಳನ್ನು ಬೇರೆಡೆಗೆ ವರ್ಗಾಯಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕನಕನಹಳ್ಳಿ ಕೃಷ್ಣಪ್ಪ, ಮೂಗೂರು ಸಿದ್ದರಾಜು, ಬಸಪ್ಪ ಲಿಕ್ಕರ್, ರಾಜಣ್ಣ ದಂಡೋರ್, ಸ್ವಾಮಿ ಮೈಸೂರು, ವೆಂಕಟರಾಮ, ಆನಂದ ಕುಮಾರ್, ಹನುಮೇಶ್ ಗುಂಡೂರು, ಹುಣಸೂರು ಪುಟ್ಟಯ್ಯ ಇದ್ದರು.

ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣ: ಸೂರಜ್ ರೇವಣ್ಣಗೆ ಶಾಕ್ ಕೊಟ್ಟ ಕೋರ್ಟ್

ಹಾಸನ, ಡಿ. 2: ಯುವಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಜೀವ ಬೆದರಿಕೆ ಹಾಕಿದ ಪ್ರಕರಣದ ಆರೋಪಿ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ವಿರುದ್ಧದ ಬಿ ರಿಪೋರ್ಟ್ ಅನ್ನು ಕೋರ್ಟ್ ತಿರಸ್ಕರಿಸಿದೆ. ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿದ್ದ ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದ್ದಂತೆ ಎಸ್‌ಐಟಿ ಸಲ್ಲಿಸಿದ್ದ ಬಿ ರಿಪೋರ್ಟ್ ತಿರಸ್ಕರಿಸಿ ಬೆಂಗಳೂರಿನ 42ನೇ ಎಸಿಜೆಎಂ ಕೋರ್ಟ್ ಆದೇಶ ಹೊರಡಿಸಿದೆ. ಅಲ್ಲದೇ ತನಿಖೆ ಮುಂದುವರಿಸಿ ಡಿಸೆಂಬರ್ 29ರೊಳಗೆ ತನಿಖಾ ವರದಿ ಸಲ್ಲಿಸಲು ಎಸ್‌ಐಟಿ ಪೊಲೀಸರಿಗೆ ಸೂಚಿಸಿದೆ.



ಸೂರಜ್ ರೇವಣ್ಣ

ಇದೇ ಕೇಸಿನಲ್ಲಿ ಜೈಲಿಗೆ ಹೋಗಿದ್ದ ಸೂರಜ್: ಇನ್ನು ಜೆಡಿಎಸ್ ಕಾರ್ಯಕರ್ತನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದಲ್ಲಿ ಡಾ.ಸೂರಜ್ ರೇವಣ್ಣ ಅವರನ್ನು ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿತ್ತು. ಬಳಿಕ ಸೂರಜ್ ಅವರಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿತ್ತು. ಈ ಹಿನ್ನೆಲೆ ಸೂರಜ್ ಒಂದು ತಿಂಗಳ ಬಳಿಕ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಿದ್ದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿವದೀಪೋತ್ಸವ

ಮೈಸೂರು,ಡಿ.2–ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಡಿ.3ರಂದು ಬುಧವಾರ ಸಂಜೆ ಶಿವದೀಪೋತ್ಸವ-ಕೃತ್ತಿಕೋತ್ಸವವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ. ಸಂಜೆ 5.30ಕ್ಕೆ ಶ್ರೀ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವದ ಪ್ರಸಾರ ರಥಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಲಾಗುವುದು. 6.00ಕ್ಕೆ ಜೆಎಸ್‌ಎಸ್ ವಸತಿ ಶಾಲಾ ಸಂಗೀತ ಶಿಕ್ಷಕರು ಹಾಗೂ ಮಕ್ಕಳಿಂದ ಸಾಮೂಹಿಕ ಪ್ರಾರ್ಥನೆ. ರಾತ್ರಿ 7.00ಕ್ಕೆ ಇಲ್ಯುಮಿನ್ ನಾಲೆಡ್ಜ್ ರಿಸೋರ್ಸಸ್ ಲಿಮಿಟೆಡ್‌ನ ಸಂಶೋಧಕರಾದ ಡಾ.ನಾಗಮಣಿ ಎಸ್.ಖಂಡ್ರೆ ಅವರಿಂದ ಉಪನ್ಯಾಸ ಏರ್ಪಡಿಸಲಾಗಿದೆ. 8.00ಕ್ಕೆ ಮಹಾಮಂಗಳಾರತಿ, ಪ್ರಾಕಾರೋತ್ಸವ, ದೀಪೋತ್ಸವಗಳು ನೆರವೇರುತ್ತವೆ. ಶ್ರೀಕ್ಷೇತ್ರದ ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ ಏರ್ಪಡಿಸಲಾಗಿದೆ.



ಹಣ್ಣು ಹಂಪಲು ವಿತರಣೆ...



ಜೈ ಭುವನೇಶ್ವರಿ ಕನ್ನಡ ಕಲಾ ಸಮಿತಿ ಆಶ್ರಯದಲ್ಲಿ 70ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕೆ.ಆರ್.ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಉಪಾಧ್ಯಕ್ಷ ವಿ.ಗಿರಿಧರ್, ಕೆ.ಆರ್.ಆಸ್ಪತ್ರೆಯ ಅಧೀಕ್ಷಕಿ ಡಾ.ಶೋಭಾ, ಡಾ.ರಾಜ್‌ಕುಮಾರ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಯುವ ಮುಖಂಡ ಸಂತೋಷ್‌ಗೌಡ, ರಂಗಪ್ಪಗೌಡ ಇದ್ದರು.

ಡಿ.5, ಜಿಲ್ಲಾ ಮಟ್ಟದ ಜನಪದ ಗೀತೆ ಸ್ಪರ್ಧೆ

ಮೈಸೂರು,ಡಿ.2–ಹುಣಸೂರು ತಾಲೂಕು ಬಿಳಿಕೆರೆ ವಿದ್ಯಾವಾರಿಧಿ ಶಿಕ್ಷಣ ಟ್ರಸ್ಟ್ ವತಿಯಿಂದ ಡಿ.5ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಆವರಣ (ವಿದ್ಯಾವಾರಿಧಿ ಪ್ರೌಢಶಾಲೆ ದಾಸ್ತಿಕೊಳ ಬಿಳಿಕೆರೆ) ದಲ್ಲಿ ಜಿಲ್ಲಾ ಮಟ್ಟದ ಜನಪದ ಗೀತೆ ಸ್ಪರ್ಧೆ ಏರ್ಪಡಿಸಲಾಗಿದೆ.

ಸ್ಪರ್ಧೆಯು ಮುಕ್ತ ವಿಭಾಗ ಮತ್ತು ಪ್ರೌಢಶಾಲಾ ವಿಭಾಗದಲ್ಲಿ ನಡೆಯುತ್ತದೆ. ಪ್ರತಿ ಶಾಲೆಯಿಂದ ಇಬ್ಬರು ವಿದ್ಯಾರ್ಥಿ ಗಳು ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ದೂ. 08222-240150, ಮೊ. 9632792829 ಸಂಪರ್ಕಿಸಲು ಕೋರಲಾಗಿದೆ

ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷ

ಮೈಸೂರು, ಡಿ.2– ಭಾರತೀಯ ಜನತಾ ಪಕ್ಷದ ಮೈಸೂರು ಮಹಾನಗರದ ಉಪಾಧ್ಯಕ್ಷರನ್ನಾಗಿ ಈ. ರಮೇಶ್ ಅವರನ್ನು ಪಕ್ಷದ ನಗರಾಧ್ಯಕ್ಷ ಎಲ್. ನಾಗೇಂದ್ರ ನೇಮಕ ಮಾಡಿದ್ದಾರೆ. ಇವರು ಹಲವು ವರ್ಷಗಳಿಂದ ಬಿಜೆಪಿಯ ಸಕ್ರೀಯ ಕಾರ್ಯಕರ್ತರಾಗಿದ್ದಾರೆ.



ಐಟಿ ರಫ್ತು ವಲಯದಲ್ಲಿ ರಾಜ್ಯದಲ್ಲೇ ಮೈಸೂರಿಗೆ 2ನೇ ಸ್ಥಾನ; ರಾಜ್ಯಕ್ಕೆ ದೇಶದಲ್ಲಿ 5ನೇ ಸ್ಥಾನ

ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ಪ್ರಕಟ

ಮೈಸೂರು, ಡಿ.2(ಎಂಕೆ)– ಎಂಎಸ್‌ಎಂಇ(ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು) ಘಟಕಗಳು ದೇಶದ ಆರ್ಥಿಕ ಅಭಿವೃದ್ಧಿಯ ಬೆನ್ನೆಲುಬಾಗಿದ್ದು, ಐಟಿ ರಫ್ತು ವಲಯದಲ್ಲಿ ಕರ್ನಾಟಕ ದೇಶದಲ್ಲಿ ಐದನೇ ಸ್ಥಾನ ಹಾಗೂ ಮೈಸೂರು ರಾಜ್ಯದಲ್ಲಿ ಎರಡನೇ ಸ್ಥಾನ ಪಡೆದಿರುವ ಜಿಲ್ಲೆಯಾಗಿದೆ ಎಂದು ಜಿಲ್ಲಾ ಕೈಗಾರಿಕೆ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಮೈಸೂರು ಹಾಗೂ ಭಾರತೀಯ ರಫ್ತು ಸಂಸ್ಥೆಗಳ ಒಕ್ಕೂಟದ ವತಿಯಿಂದ ಆರ್‌ಎಎಂಪಿ(Raising and Accelerating MSME Performance) ಯೋಜನೆಯಡಿ ಆಯೋಜಿಸಿದ್ದ ರಫ್ತು ಉತ್ತೇಜನ ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ನಂತರ ಎಂಎಸ್‌ಎಂಇ ಘಟಕಗಳು ದೇಶದ ಆರ್ಥಿಕತೆಗೆ ಬೆಂಬಲವಾಗಿ ನಿಂತಿವೆ ಎಂದರು.

ಇತ್ತೀಚಿನ ದಿನಗಳಲ್ಲಿ ಹಲವಾರು ಉದ್ಯಮಗಳು ಆರಂಭವಾದ ಕೆಲವೇ ವರ್ಷಗಳಲ್ಲಿ ಕಣ್ಮರೆಯಾಗುತ್ತಿವೆ. ಇದಕ್ಕೆ ಕಾರಣ ಆ ಉದ್ಯಮ ಸಂಸ್ಥೆ ಮಾರುಕಟ್ಟೆ ವ್ಯಾಪ್ತಿ ಕಡಿಮೆಯಾಗಿರುತ್ತದೆ. ಆದ್ದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಉದ್ಯಮಗಳು ಪ್ರವೇಶ ಮಾಡಬೇಕು. ಬರೀ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆ ರಫ್ತು ಮಾಡುವುದಲ್ಲ. ವಿಶ್ವಕ್ಕೆ ರಫ್ತು ಮಾಡುವಷ್ಟು ಜ್ಞಾನವನ್ನು ಉದ್ಯಮಿಗಳು ಪಡೆದುಕೊಂಡಿದ್ದರಷ್ಟೇ ಉದ್ಯಮ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಸಾಧ್ಯ ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ನಡೆದ ರಫ್ತು ಉತ್ತೇಜನ ಕುರಿತ ಒಂದು ದಿನದ ಕಾರ್ಯಾಗಾರದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ಮಾತನಾಡಿದರು.

ರಫ್ತು ಎಂದರೆ ದೊಡ್ಡ ದೊಡ್ಡ ಕಂಟೈನರ್‌ಗಳಲ್ಲಿ ಸಾಗಿಸುವುದಲ್ಲ. ಸಣ್ಣ ಪದಾರ್ಥವನ್ನು ಕೂಡ ರಫ್ತು ಮಾಡಲು ಅವಕಾಶ ಇದೆ. ಉತ್ಪಾದಿಸುವ ಉತ್ಪನ್ನಗಳ ಮೌಲ್ಯ ಹೆಚ್ಚಿಸಿ, ಮಾರುಕಟ್ಟೆಗೆ ತರಬೇಕು. ಇದಕ್ಕಾಗಿ ಆಧುನಿಕ ತಂತ್ರಜ್ಞಾನ, ಡಿಜಿಟಲ್ ಮಾರ್ಕೆಟಿಂಗ್, ಉತ್ತಮ ಆಡಳಿತ ವ್ಯವಸ್ಥೆ ಅಳವಡಿಕೆ ಅವಶ್ಯವಾಗಿದೆ. ಅಲ್ಲದೆ ಉದ್ಯಮಿಗಳಿಗೆ ಪ್ರಚಲಿತ ವಿದ್ಯಮಾನಗಳ ಅರಿವು ಮುಖ್ಯವಾಗಿರಬೇಕು. ಮಾಹಿತಿ ಇಲ್ಲದಿದ್ದರೆ ಮಾರುಕಟ್ಟೆಯ ವಿಸ್ತರಣೆ ಸಾಧ್ಯವಿಲ್ಲ ಎಂದು ತಿಳಿಸಿದರು.

ನಂದಿನಿ ಹಾಲಿನ ಉತ್ಪನ್ನಗಳು ವಿಶ್ವ ಮಾರುಕಟ್ಟೆಯಲ್ಲಿ ಹೆಸರು ಪಡೆಯಲು ಸಾಧ್ಯವಾಗಿದೆ. ಅದೇ ದೇಶ ಯಾವುದೇ ಪದಾರ್ಥವನ್ನು ಮಾರುಕಟ್ಟೆಗೆ ಪರಿಚಯಿಸಿ, ಗ್ರಾಹಕರ ಗಮನ ಸೆಳೆಯುವುದು ಮುಖ್ಯ. ಈ ನಿಟ್ಟಿನಲ್ಲಿ ಇಂತಹ ರಫ್ತು ತರಬೇತಿ ಕಾರ್ಯಾಗಾರಗಳ ಆಯೋಜನೆ ಅವಶ್ಯವಾಗಿದ್ದು, ಉದ್ಯಮಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಮಾತನಾಡಿ, ಕೈಗಾರಿಕಾ ಕ್ಷೇತ್ರದಲ್ಲಿ ಸಾಧಿಸಬೇಕಾದರೆ ಮೊದಲು ಕಲಿಯಲು ಸಿದ್ದರಾಗಿರಬೇಕು. ಮನಸ್ಸಿಟ್ಟು ಕಲಿತರೆ ಉದ್ಯಮ ಸ್ಥಾಪಿಸಿ, ವಿಸ್ತರಣೆ ಮಾಡುವುದು ಸಾಧ್ಯವಾಗುತ್ತದೆ. ಆದ್ದರಿಂದ ಉದ್ಯಮಿಗಳು ಕಲಿಕೆಗೂ ಆದ್ಯತೆ ನೀಡುವಂತೆ ಕಿವಿಮಾತು ಹೇಳಿದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ್ ಅಂಗಡಿ, ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ್, ಕೃಷಿ ಇಲಾಖೆ ಉಪ ನಿರ್ದೇಶಕ ರಾಜು, ಎನ್ ರಂಗರಾವ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್‌ನ ಸೆಲ್ವಕುಮಾರ್, ಎಫ್‌ಐಇಒ ಜಂಟಿ ನಿರ್ದೇಶಕ ಸೋಮ ಚೌಧರಿ ಮತ್ತಿತರರಿದ್ದರು.

ಮೈಸೂರು ಮಿತ್ರ ಬುಧವಾರ 3 ಡಿಸೆಂಬರ್ 2025

ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ಪ್ರತಿಭಟನೆ



ರೈತ ವಿರೋಧಿ ನೀತಿ ಖಂಡಿಸಿ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮಂಡ್ಯ, ಡಿ.2– ರಾಜ್ಯ ಕಾಂಗ್ರೆಸ್ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಜಿಲ್ಲಾ ಬಿಜೆಪಿ ಮೋರ್ಚಾದಿಂದ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದ ಬಳಿ ಜಮಾಯಿಸಿದ ನೂರಾರು ಬಿಜೆಪಿ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ತುಮಕೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಶಾಸಕ ಸುರೇಶ್‌ಗೌಡ ಮಾತನಾಡಿ, ರಾಜ್ಯದಲ್ಲಿ ಶೇ.58 ರಷ್ಟು ರೈತರಿದ್ದು, ಅದರಲ್ಲಿ ಶೇ.85ರಷ್ಟು ಸಣ್ಣ ಹಿಡುವಳಿದಾರರಿದ್ದಾರೆ. ರಾಜ್ಯದ ಆರ್ಥಿಕತೆಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ಎರಡೂವರೆ ವರ್ಷಗಳಿಂದ ರಾಜ್ಯ ಕಾಂಗ್ರೆಸ್ ಸರ್ಕಾರ ಬಿಜೆಪಿ ತಂದಿದ್ದ ರೈತಪರ ಯೋಜನೆಗಳನ್ನು ನಿಲ್ಲಿಸುವ ಮೂಲಕ ರಾಜಕೀಯ ಹಗೆತನವನ್ನು ರೈತರ ಮೇಲೆ ಸಾಧಿಸುತ್ತಿದೆ ಎಂದು ಕಿಡಿಕಾರಿದರು.

ಸರ್ಕಾರದ ಮಾಹಿತಿ ಪ್ರಕಾರ 14.58 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚಿನ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, 10,748 ಕೋಟಿ ರೂ. ನಷ್ಟವಾಗಿದೆ. 9 ಜಿಲ್ಲೆಗಳಲ್ಲಿ ಬೆಳೆಹಾನಿ ಪ್ರಮಾಣ ಹೆಚ್ಚಾಗಿದೆ. ಎಸ್‌ಡಿಆರ್‌ಎಫ್ ಮಾನದಂಡಗಳ ಅನ್ವಯ 14.24 ಲಕ್ಷ ರೈತರಿಗೆ ಇನ್‌ಪುಟ್ ಸಬ್ಸಿಡಿ ರೂಪದಲ್ಲಿ ಈಗಾಗಲೇ 1218 ಕೋಟಿ ರೂ. ವಿತರಿಸಲಾಗಿದೆ. ಈಗ ರಾಜ್ಯ ನಿಧಿಯಿಂದ 103360 ಕೋಟಿ ರೂ. ಗಳನ್ನು ಟಾಪ್‌ಅಪ್ ರೂಪದಲ್ಲಿ ಹೆಚ್ಚುವರಿಯಾಗಿ ನೀಡಲಾಗುತ್ತಿದೆ. ಒಟ್ಟಾರೆ ಪರಿಹಾರ ಪಾವತಿ ಪ್ರಕ್ರಿಯೆಯಲ್ಲಿನ ಪಾವತಿಗಳನ್ನು ಒಳಗೊಂಡಂತೆ 2251.63 ಕೋಟಿ ರೂ. ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಆಗಲಿದೆ ಎಂದು ಸರ್ಕಾರ ಹೇಳುತ್ತಿದೆ. ಇದರ ಸತ್ಯಾಸತ್ಯತೆ ಪರಿಶೀಲಿಸಬೇಕು ಎಂದು ಒತ್ತಾಯಿಸಿದರು.

ಬೆಳೆ ಹಾನಿ ಬಗ್ಗೆ ರಾಜ್ಯ ಸರ್ಕಾರ ಮರು ಸಮೀಕ್ಷೆ ನಡೆಸಬೇಕು. ಪರಿಹಾರ ಮೊತ್ತ ಹೆಚ್ಚಿಸಬೇಕು. ಜೊತೆಗೆ ರೈತರ ಸಾಲ ಮನ್ನಾ ಮಾಡಬೇಕು. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬೆಳೆಗಳು ಕೊಯ್ಲಿನ ಹಂತಕ್ಕೆ ಬಂದ ಸಂದರ್ಭ ಭಾರೀ ಮಳೆಯಾದ ಹಿನ್ನೆಲೆಯಲ್ಲಿ ಹೆಚ್ಚು ಬೆಳೆ ನಷ್ಟ ಸಂಭವಿಸಿದೆ. ಹಾಗೆಯೇ ಕೃಷ್ಣ ಮತ್ತು ಭೀಮಾ ಜಲಾನಯನ ಪ್ರದೇಶಗಳಲ್ಲಿ ನಿರಂತರ ಒಳ ಹರಿವು ಹೆಚ್ಚಳದಿಂದ ಕಲ್ಬುರ್ಗಿ, ಯಾದಗಿರಿ, ಬೀದರ್ ಜಿಲ್ಲೆಗಳಲ್ಲಿ ತೊಗರಿಬೇಳೆ, ಹೆಸರು ಕಾಳು, ಹತ್ತಿ, ಮೆಕ್ಕೆಜೋಳ ಬೆಳೆಗಳಿಗೆ ಹೆಚ್ಚು ಹಾನಿಯಾಗಿದೆ. ಇದೇ ರೀತಿ ಪಶ್ಚಿಮ ಘಟ್ಟಗಳು ಮತ್ತು ಕರಾವಳಿ ವ್ಯಾಪ್ತಿ ಬರುವ ಜಿಲ್ಲೆಗಳಲ್ಲಿ ಪ್ರಾಣಿ ಮಾನವ ಸಂಘರ್ಷ, ಕಾಫಿ ಮತ್ತು ಅಡಕೆಗೆ ಕೊಳೆ, ಎಲೆ ಚುಕ್ಕೆ ರೋಗ ತಡೆಯುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ.ಇಂದ್ರೇಶ್, ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅಶೋಕ್ ಜಯರಾಂ, ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಅಶೋಕ್ ಕುಮಾರ್, ಮುಖಂಡರಾದ ಇಂಡುವಾಳು ಸಚ್ಚಿದಾನಂದ, ನರಸಿಂಹಮೂರ್ತಿ ಗೌಡ, ಡಾ.ಸಿದ್ದರಾಮಯ್ಯ, ಭೀಮೇಶ್, ಯಮದೂರು ಸಿದ್ದರಾಜು, ಹೆಚ್.ಆರ್.ಅರವಿಂದ್, ಕೆಂಪಭೂರಯ್ಯ, ಸಿ.ಟಿ.ಮಂಜುನಾಥ್, ಶಿವಕುಮಾರ ಆರಾಧ್ಯ, ನಾಗಾನಂದ್, ಸಿದ್ದರಾಜುಗೌಡ, ಮಹಿಳಾ ಅಧ್ಯಕ್ಷೆ ಮಂಗಳ ನವೀನ್ ಕುಮಾರ್, ವಿಜಯಕುಮಾರಿ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಇಂದು ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಹಿನ್ನೆಲೆ

ಶ್ರೀರಂಗಪಟ್ಟಣದಲ್ಲಿ ಪೊಲೀಸರ ಪಥ ಸಂಚಲನ



ಸಂಕೀರ್ತನಾ ಯಾತ್ರೆ ಹಿನ್ನೆಲೆಯಲ್ಲಿ ಎಸ್ಪಿ ನೇತೃತ್ವದಲ್ಲಿ ಪೊಲೀಸರು ಪಥ ಸಂಚಲನ ನಡೆಸಿದರು.

ಶ್ರೀರಂಗಪಟ್ಟಣ, ಡಿ.2– ಪಟ್ಟಣದಲ್ಲಿ ಬುಧವಾರ ನಡೆಯುವ ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದಾದ್ಯಂತ ಪೊಲೀಸರು ಕಟ್ಟೆಚ್ಚರ ವಹಿಸಿದ್ದು, ಜಿಲ್ಲೆ, ಅಕ್ಕಪಕ್ಕದ ಜಿಲ್ಲೆ ಪೊಲೀಸರು ಹಾಗೂ ಪ್ಯಾರಾ ಮಿಲಿಟರಿ ದಳದ ಸಿಬ್ಬಂದಿ ಸೇರಿದಂತೆ ಸಾವಿರಾರು ಪೊಲೀಸರು ಸಂಕೀರ್ತನಾ ಯಾತ್ರೆ ನಡೆಯುವ ರಸ್ತೆಯಲ್ಲಿ ಮಂಗಳವಾರ ಸಂಜೆ ಪಥ ಸಂಚಲನ ನಡೆಸಿದರು.

ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರ ನೇತೃತ್ವದಲ್ಲಿ ಗಂಜಾಂನಿಂದ ಆರಂಭಗೊಂಡ ಪಥ ಸಂಚಲನ ಸಂಕೀರ್ತನಾ ಯಾತ್ರೆ ಸಾಗಲಿರುವ ಗಂಜಾಂನ ಶಂಕರ ಮಠ, ಕರಿಘಟ್ಟ ರಸ್ತೆ, ಟಿಪ್ಪು ಬೇಸಿಗೆ ಅರಮನೆ, ಕುವೆಂಪು ವೃತ್ತ, ಪುರಸಭೆ ಕಚೇರಿ ವೃತ್ತ ಮಾರ್ಗದಲ್ಲಿ ನಡೆಯಿತು.

ಇದಕ್ಕೂ ಮುನ್ನಾ ಗಂಜಾಂನ ನಿಮಿಷಾಂಬ ದೇವಾಲಯದ ಬಳಿಯ ಶಂಕರ ಮಠದ ಆವರಣದಲ್ಲಿ ಪೊಲೀಸ್ ಅಧಿಕಾರಿಗಳು ಸಭೆ ನಡೆಸಿದರು. ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಸಾಗುವ ಮಾರ್ಗದಲ್ಲಿ ಪೊಲೀಸರು ಕಟ್ಟೆಚ್ಚರ ವಹಿಸಬೇಕು. ಆಯಕಟ್ಟಿನ ಸ್ಥಳಗಳಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಬೇಕು. ಕಾರ್ಯಕ್ರಮ ಆಯೋಜಕರು ಮತ್ತು ಮುಖಂಡರ ಚಲನವಲನಗಳ ಬಗ್ಗೆ ನಿಗಾ ವಹಿಸಬೇಕು ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ವೇಳೆ ಹೆಚ್ಚುವರಿ ಎಸ್ಪಿಗಳಾದ ತಿಮ್ಮಯ್ಯ, ಗಂಗಾಧರಸ್ವಾಮಿ, ಡಿವೈಎಸ್ಪಿ ಶಾಂತಮಲ್ಲಪ್ಪ, ಸಿಪಿಐ ಬಿ.ಜಿ.ಕುಮಾರ್ ಇದ್ದರು.

ವ್ಯಾಪಕ ಭದ್ರತೆ: ಸುದ್ದಿಗಾರರೊಂದಿಗೆ ಮಾತನಾಡಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಪಟ್ಟಣದಲ್ಲಿ ಬುಧವಾರ ನಡೆಯುವ ಮೂಡಲ ಬಾಗಿಲು ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಹಿನ್ನೆಲೆಯಲ್ಲಿ ಪಟ್ಟಣದ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಪಟ್ಟಣದ ಟಿಪ್ಪು ಮಸೀದಿ (ಜಾಮಿಯಾ ಮಸೀದಿ) ಸುತ್ತ ಹೆಜ್ಜೆ ಹೆಜ್ಜೆಗೂ ಪೊಲೀಸರನ್ನು ನಿಯೋಜಿಸಲಾಗಿದೆ. ಮಸೀದಿಯತ್ತ ಯಾರೂ ತೆರಳದಂತೆ ಸುತ್ತಲೂ 3 ಸುತ್ತು ಬ್ಯಾರಿಕೇಡ್ ಅಳವಡಿಸಿದ್ದು, ನಾಕಾಬಂದಿ ನಿರ್ಮಿಸಲಾಗಿದೆ. ಪುರಸಭೆ ಕಚೇರಿ ವೃತ್ತ, ಮಸೀದಿ ಮತ್ತು ಮುಖ್ಯ ಬೀದಿಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಸಿವಿಲ್ ಪೊಲೀಸರ ಜೊತೆಗೆ ಡಿಎಆರ್ ತುಕಡಿಯನ್ನೂ ನಿಯೋಜಿಸಲಾಗಿದೆ.

ಮದ್ದೂರು ಅಭಿವೃದ್ಧಿ ಸಂಬಂಧ ಸಿಎಂ ನೇತೃತ್ವದಲ್ಲಿ ಸಭೆ

ಮಂಡ್ಯ, ಡಿ.2– ಮದ್ದೂರಿನ ಟಿ.ಬಿ.ವೃತ್ತದಿಂದ ಕೊಲ್ಲಿ ವೃತ್ತದವರೆಗೆ ರಸ್ತೆ ಅಗಲೀಕರಣ ಕಾಮಗಾರಿ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಮುಖ್ಯಮಂತ್ರಿಗಳ ಕೊಠಡಿಯಲ್ಲಿ ಸಭೆ ನಡೆಯಿತು.

2025–26ನೇ ಸಾಲಿನ ವಾರ್ಷಿಕ ಬಜೆಟ್‌ನಲ್ಲಿ ಮದ್ದೂರು ನಗರದಲ್ಲಿ ರಸ್ತೆ ಅಗಲೀಕರಣಕ್ಕಾಗಿ ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಲು ಘೋಷಿಸಲಾಗಿತ್ತು. ಅದರಂತೆ ಲೋಕೋಪಯೋಗಿ ಇಲಾಖೆಯಿಂದ ಯೋಜನಾ ವರದಿ ತಯಾರಿಸಲಾಗಿದೆ. ಮದ್ದೂರಿನ ಟಿ.ಬಿ.ವೃತ್ತದಿಂದ ಕೊಲ್ಲಿ ವೃತ್ತದವರೆಗಿನ ರಸ್ತೆ ಜನನಿಬಿಡ ಹಾಗೂ ವಾಣಿಜ್ಯ ಚಟುವಟಿಕೆಯುಳ್ಳ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಅಧಿಕ ವಾಹನ ಸಂಚಾರವಿದ್ದು ಪುರಸಭೆ ಸುಪರ್ದಿಯಲ್ಲಿರುತ್ತದೆ. ಬಿಎಂಐಸಿಎಪಿಎ ಅವರು ತಯಾರಿಸಿರುವ ಯೋಜನಾ ನಕ್ಷೆಯಲ್ಲಿ ಇದನ್ನು 100 ಅಡಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಗುರುತಿಸಲಾಗಿದೆ. ರಸ್ತೆ ಅಗಲೀಕರಣ ಕಾಮಗಾರಿ ಯೋಜನಾ ವರದಿ ಪರಿಶೀಲಿಸಿದ ಮುಖ್ಯಮಂತ್ರಿಗಳು ಈ ರಸ್ತೆಯನ್ನು 80 ಅಡಿ ವಿಸ್ತರಿಸಲು ಸಚಿವ ಸಂಪುಟ ಸಭೆಗೆ ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸಭೆಯಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಶಾಸಕ ಕೆ.ಎಂ.ಉದಯ್, ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಹಾಗೂ ಆರ್ಥಿಕ ಇಲಾಖೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಗೀತಾಮಾಮಿ ನಿಧನ



ಮೇಲುಕೋಟೆ, ಡಿ.2– ಇಲ್ಲಿನ ಶ್ರೀಚೆಲುವನಾರಾಯಣಸ್ವಾಮಿ ದೇವಾಲಯದ ಸ್ಥಾನೀಕ ಕೋವಿಲ್‌ನಂಬಿ ಲಕ್ಷ್ಮೀನರಸಿಂಹನ್‌ರ ಪತ್ನಿ ಸಂಗೀತಾಮಾಮಿ (50) ಸೋಮವಾರ ರಾತ್ರಿ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮೇಲುಕೋಟೆಯಲ್ಲಿ ಚೆಲುವನಾರಾಯಣಸ್ವಾಮಿ ದೇವಾಲಯದ ಸಾಂಪ್ರದಾಯಿಕ ಮಾಲೆ ಮರ್ಯಾದೆ ಆಚಾರ್ಯರ ವಸ್ತ್ರದೊಂದಿಗೆ ಅಂತಿಮ ಗೌರವ ಸಲ್ಲಿಸಿ ನೆರವೇರಿಸಲಾಯಿತು.

ಈ ಬಾರಿ 3 ದಿನ ವೈಶಿಷ್ಟ್ಯಪೂರ್ಣ ಕೃಷಿ ಮೇಳ

ಮಂಡ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಡಾ.ಹರಿಣಿಕುಮಾರ್



ಸುದ್ದಿಗೋಷ್ಠಿಯಲ್ಲಿ ಹರಿಣಿಕುಮಾರ್ ಮಾತನಾಡಿದರು.

ಮಂಡ್ಯ, ಡಿ.2– ಈ ಬಾರಿ ಕೃಷಿ ಮೇಳವನ್ನು ವೈಶಿಷ್ಟ್ಯಪೂರ್ಣ ಹಾಗೂ ವಿಭಿನ್ನವಾಗಿ ಆಯೋಜಿಸಲಾಗುತ್ತಿದ್ದು, ರೈತರಿಗೆ ವ್ಯವಸಾಯ, ಬೆಳೆಗಳ ಸಮಗ್ರ ಮಾಹಿತಿ ದೊರೆಯಲಿದೆ ಎಂದು ಮಂಡ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಡಾ.ಹರಿಣಿಕುಮಾರ್ ತಿಳಿಸಿದರು.

ತಾಲೂಕಿನ ವಿ.ಸಿ.ಫಾರಂ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ವಿಶ್ವವಿದ್ಯಾನಿಲಯದ 5 ಜಿಲ್ಲೆಗಳ ಹಾಗೂ ರಾಜ್ಯದ 3 ವಲಯಗಳಿಗೆ ಅನುಗುಣವಾಗಿ ಕೃಷಿ ವಿವಿ ಆವರಣದಲ್ಲಿ ಮೊದಲ ಬಾರಿಗೆ ಡಿ.5ರಿಂದ 7ರವರೆಗೆ 3 ದಿನಗಳ ಕೃಷಿ ಮೇಳ ಆಯೋಜಿಸಲಾಗಿದೆ ಎಂದರು.

ಡಿ.5ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವ ಸಂಪುಟದ ಹಲವು ಸಚಿವರು ಭಾಗವಹಿಸಲಿದ್ದಾರೆ. 2ನೇ ದಿನ ಮೇಳದಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಮತ್ತು ಶೋಭಾ ಕರಂದ್ಲಾಜೆ ಭಾಗವಹಿಸಲಿದ್ದು, ಡಿ.7ರಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸಮಾರೋಪ ಭಾಷಣ ಮಾಡಲಿದ್ದು, 3 ದನದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಉಪಸ್ಥಿತರಿರಲಿದ್ದು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧ್ಯಕ್ಷತೆ ವಹಿಸುವರು. ಡಿ.6 ಮತ್ತು 7ರಂದು ರೈತರು ಮತ್ತು ವಿಜ್ಞಾನಿಗಳೊಂದಿಗೆ ಸಂವಾದ ಇರಲಿದೆ ಎಂದು ವಿವರಿಸಿದರು.

ಮೇಳದಲ್ಲಿ 350 ಮಳಿಗೆಗಳನ್ನು ತೆರೆಯಲಾಗುವುದು. ರೈತರಿಗೆ ಒಂದೇ ಕಡೆ ತಾಂತ್ರಿಕ, ಹೊಸತಳಿ ಸೇರಿದಂತೆ ಎಲ್ಲಾ ರೀತಿಯ ಮಾಹಿತಿ ನೀಡಲಾಗುವುದು. ಉತ್ತಮ ಪೋಷಕಾಂಶಭರಿತ, ಕಡಿಮೆ ನೀರಿನಲ್ಲಿ ಬೆಳೆಯುವ, ರೋಗ ಮತ್ತು ಕೀಟಬಾಧೆ ನಿರೋಧಕ ಹಾಗೂ ಅಧಿಕ ಇಳುವರಿ ಭತ್ತದ ತಳಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಫಿಲಿಫೈನ್ಸ್‌ನ ಅಂತರಾಷ್ಟ್ರೀಯ ಭತ್ತದ ಸಂಶೋಧನಾ ಕೇಂದ್ರ ಜೊತೆ ಒಪ್ಪಂದ ಮಾಡಿಕೊಂಡು ಅಲ್ಲಿ ಅಭಿವೃದ್ಧಿಪಡಿಸಿದ ತಳಿಗಳನ್ನು ತಂದು ಪ್ರಾತ್ಯಕ್ಷಿಕೆ ನೀಡುವ ಉದ್ದೇಶ ಹೊಂದಲಾಗಿದೆ ಎಂದರು.

ಮೇಳದಲ್ಲಿ ನವೀನ ಕೃಷಿ ಯಂತ್ರಗಳ ಪ್ರದರ್ಶನ, ವಸ್ತು ಪ್ರದರ್ಶನ, ಮೀನು ಕೃಷಿ, ಪಶು ಸಂಗೋಪನೆ, ಸಸ್ಯ ಕೃಷಿ, ದೇಸಿ ಮತ್ತು ವಿದೇಶಿ ತಳಿಗಳ ಮಾಹಿತಿ, ರೇಷ್ಮೆ ಕೃಷಿ, ಸಾವ ಯವ ಕೃಷಿ ಮತ್ತು ನೈಸರ್ಗಿಕ ಕೃಷಿ ಪ್ರಾತ್ಯಕ್ಷಿಕೆ, ಬಹುಬೆಳೆ ಪದ್ಧತಿ, ಸಮುದಾಯ ಕೃಷಿ, ಗುತ್ತಿಗೆ ಆಧಾರದ ಕೃಷಿ, ಜೈವಿಕ ಕೃಷಿ, ನೀರಾವರಿ ಪದ್ಧತಿ, ಕಾಫಿ ಮತ್ತು ಸಾಂಬಾರ ಬೆಳೆಗಳ ತಂತ್ರಜ್ಞಾನಗಳು, ಕಬ್ಬು ಬೆಳೆಯಲ್ಲಿ ತರಗು ಮುಚ್ಚಿ ಪ್ರಾತ್ಯಕ್ಷಿಕೆ ಮತ್ತು ಮಾಹಿತಿ ನೀಡಲಾಗುವುದು. ವಿ.ಸಿ.ಫಾರಂನ 50 ಎಕರೆ ಪ್ರದೇಶದಲ್ಲಿ ಬೆಳೆಗಳ ನೇರ ಪ್ರಾತ್ಯಕ್ಷಿಕೆ ನೀಡಲಾಗುವುದು ಎಂದರು.

ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ, ಕೃಷಿ ಪ್ರವಾಸೋದ್ಯಮ, ರೈತ–ವಿಜ್ಞಾನಿಗಳ ಸಂವಾದ, ಚರ್ಚಾಗೋಷ್ಠಿಗಳು, ತಜ್ಞರಿಂದ ಸಲಹಾ ಸೇವೆಗಳು ನೀಡಲಾಗುವುದು. ಇದೇ ವೇಳೆ ಐದೂ ಜಿಲ್ಲೆಗಳ 10 ಪ್ರಗತಿಪರ ರೈತ/ರೈತ ಮಹಿಳೆಯರಿಗೆ ಪ್ರಶಸ್ತಿ ಮತ್ತು 55 ಜನ ಯುವ ರೈತ/ ರೈತ ಮಹಿಳೆಯರಿಗೆ ತಾಲೂಕು ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಕೃಷಿ ಮೇಳಕ್ಕೆ ಆಗಮಿಸುವ ರೈತರು, ಸಾರ್ವಜನಿಕರಿಗೆ ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಿಂದಲೂ ವಾಹನ ವ್ಯವಸ್ಥೆ, ಮೇಳದಲ್ಲಿ ಅಚ್ಚುಕಟ್ಟಿನ ಕುಡಿಯುವ ನೀರಿನ ವ್ಯವಸ್ಥೆ, ರಿಯಾಯಿತಿ ದರದಲ್ಲಿ ಸಾಂಪ್ರದಾಯಕ ಪದ್ಧತಿಯ ಆಹಾರ ವ್ಯವಸ್ಥೆ, ರೈತ ಮತ್ತು ಸಾರ್ವಜನಿಕರಿಗೆ ವೈಜ್ಞಾನಿಕ ಮಾಹಿತಿ ನೀಡಲು ಸ್ವಯಂ ಸೇವಕರ ನಿಯೋಜನೆ ಮಾಡಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೈತರು, ವಿದ್ಯಾರ್ಥಿಗಳು, ಕೃಷಿ ಕಾರ್ಮಿಕರು, ಸಾರ್ವಜನಿಕರು, ಉದ್ದಿಮೆದಾರರು ಹಾಗೂ ಇತರರರು ಭಾಗವಹಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ವಿವಿಧ ತಳಿಗಳ ಬೆಳೆಗಳ ಪ್ರಾತ್ಯಕ್ಷಿಕೆ: ಭತ್ತದಲ್ಲಿ 45, ಹೈಬ್ರೀಡ್ 3 ತಳಿಗಳು, 50 ತಾಂತ್ರಿಕತೆ, 37 ರಾಗಿ ತಳಿಗಳು, 17 ಕಬ್ಬಿನ ತಳಿಗಳು, 20 ತಂತ್ರಜ್ಞಾನ, 4 ಮುಸುಕಿನ ಜೋಳ, 4 ಮೇವು ಬೆಳೆಗಳು, ಸೂರ್ಯ ಕಾಂತಿ ಸಂಕರಣ ತಳಿ, ಚಾಮರಾಜನಗರದ ಕಪ್ಪು ಅರಿಶಿನ ಸೇರಿದಂತೆ ವಿವಿಧ ತಳಿಗಳ ಬೆಳೆಗಳು ವಿ.ಸಿ.ಫಾರಂ ಆವರಣದಲ್ಲಿ ಬೆಳೆದು ನಿಂತಿದ್ದು, ಬರುವ ರೈತರಿಗೆ ಪ್ರಾತ್ಯಕ್ಷಿಕೆ ಮೂಲಕ ಸಮಗ್ರ ಮಾಹಿತಿ ಸಿಗಲಿದೆ ಎಂದರು.

ಗೋಷ್ಠಿಯಲ್ಲಿ ಕೃಷಿ ವಿವಿ ಶಿಕ್ಷಣ ನಿರ್ದೇಶಕ ಎನ್. ಶಿವಕುಮಾರ್, ಸಂಶೋಧನಾ ನಿರ್ದೇಶಕ ದೇವಗಿರಿ, ರಿಜಿಸ್ಟ್ರಾರ್ ಫಾತಿಮಾ, ಹಾಸನ ಕೃಷಿ ಕಾಲೇಜಿ ಡೀನ್ ಮುನಿಸ್ವಾಮಿಗೌಡ, ಮೇಳದ ಪ್ರಚಾರ ಸಮಿತಿ ಅಧ್ಯಕ್ಷ ಬಸವರಾಜು, ಉಪಾಧ್ಯಕ್ಷ ರಂಗನಾಥ್, ವಿಸ್ತರಣಾ ನಿರ್ದೇಶಕ ರಾಮಚಂದ್ರ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಡಿಕೆಶಿ ಸಿಎಂ ಆಗ್ತಾರೆ...!

ರಾಜಕೀಯ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಬುಧವಾರ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಂಗಳೂರಿಗೆ ಬರುತ್ತಿದ್ದಾರೆ. ಆ ಸಂದರ್ಭದಲ್ಲಿ ನಾನು ಭೇಟಿ ಮಾಡುವುದಾಗಿ ತಿಳಿಸಿದರು.

ನವದೆಹಲಿಯಲ್ಲಿ ಸಭೆ: ಮೇಕೆದಾಟು ಸೇರಿದಂತೆ ರಾಜ್ಯದ ಹಲವು ಯೋಜನೆಗಳಿಗೆ ಕೇಂದ್ರದ ಅನುಮತಿ ದೊರಕಿಸಿಕೊಳ್ಳಬೇಕಿದ್ದು, ಈ ಸಲುವಾಗಿ ರಾಜ್ಯ ಪ್ರತಿನಿಧಿಸುವ ಕೇಂದ್ರದ ಸಚಿವರೂ ಮತ್ತು ಸಂಸದರ ಸಭೆಯನ್ನು ಡಿಸೆಂಬರ್ 8ರಂದು ದೆಹಲಿಯಲ್ಲಿ ನಡೆಸಲು ತೀರ್ಮಾನಿಸಿದ್ದೇವೆ. ಈ ಸಂದರ್ಭದಲ್ಲಿ ವರಿಷ್ಠರು ಸಮಯ ನೀಡಿದರೆ ಭೇಟಿ ಮಾಡಿ ಅಂದೇ ರಾಜ್ಯಕ್ಕೆ ಹಿಂತಿರುಗಲು ಇಂದಿನ ಮಾತುಕತೆ ವೇಳೆ ನಿರ್ಧರಿಸಿದ್ದೇವೆ ಎಂದರು.

ಶಿವಕುಮಾರ್ ಆಹ್ವಾನದ ಮೇರೆಗೆ ಬೆಳಗಿನ ಉಪಹಾರಕ್ಕಾಗಿ ಅವರ ನಿವಾಸಕ್ಕೆ ಭೇಟಿ ನೀಡಿದ್ದು, ಕಾಂಗ್ರೆಸ್ ಪಕ್ಷದ ವಿಚಾರಗಳನ್ನು ಈ ಭೇಟಿಯಲ್ಲಿ ಚರ್ಚಿಸಲಾಗಿದೆ.

ಬೆಳಗಾವಿ ಅಧಿವೇಶನ: ಡಿಸೆಂಬರ್ 8 ರಂದು ಬೆಳಗಾವಿ ಅಧಿವೇಶನ ಪ್ರಾರಂಭವಾಗಲಿದ್ದು, ವಿರೋಧ ಪಕ್ಷಗಳನ್ನು ಎದುರಿಸಲು ಸರ್ಕಾರದ ರಣನೀತಿ ಬಗ್ಗೆ ಇಂದು ಚರ್ಚಿಸಲಾಗಿದೆ. ಅವರು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಿದ್ದಾರೆ ಎಂಬ ಮಾಹಿತಿ ಪತ್ರಿಕೆಗಳಿಂದ ತಿಳಿದು ಬಂದಿದೆ. ಅಲ್ಲದೇ ಅವರು ಎತ್ತಬಹುದಾದ ವಿಚಾರಗಳನ್ನು ಸಮರ್ಥವಾಗಿ ಸರ್ಕಾರ ಎದುರಿಸಲಿದೆ.

ಕಬ್ಬು, ಮೆಕ್ಕೆಜೋಳ ಸೇರಿದಂತೆ ರಾಜ್ಯದ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಕಂಡುಕೊಳ್ಳಲು ಈ ಅಧಿವೇಶನದಲ್ಲಿ ಪ್ರಯತ್ನಿಸಲಾಗುವುದು ಎಂದರು.

ನಮ್ಮ ಸರ್ಕಾರ ರೈತ ಪರ ನಿಲುವು ಹೊಂದಿದೆ, ಕಬ್ಬು ಬೆಲೆ ನಿಗದಿಗೆ ಸಂಬಂಧಿಸಿದಂತೆ ರೈತರು, ರೈತ ಮುಖಂಡರು, ಕಾರ್ಖಾನೆ ಮಾಲೀಕರ ಜೊತೆ ಚರ್ಚಿಸಿ, ಸಮಸ್ಯೆ ಪರಿಹಾರಕ್ಕೆ ಅಂತಿಮ ರೂಪ ನೀಡಲಾಗಿದೆ.

ಒಂದು ಟನ್ ಕಬ್ಬಿಗೆ ಸರ್ಕಾರದಿಂದ ಹೆಚ್ಚುವರಿಯಾಗಿ 50 ರೂ. ನಿಗದಿಪಡಿಸಲಾಗಿದೆ. ಮೆಕ್ಕೆಜೋಳ ಖರೀದಿ ಬಗ್ಗೆ ರೈತರು, ಡಿಸ್ಟಲರಿ ಕಾರ್ಖಾನೆ ಮಾಲೀಕರ ಜೊತೆ ಚರ್ಚಿಸಲಾಗಿದೆ. ಕೇಂದ್ರ ಸರ್ಕಾರ ಮೆಕ್ಕೆಜೋಳಕ್ಕೆ 2,400 ರೂ. ಬೆಂಬಲ ಬೆಲೆ ನಿಗದಿಪಡಿಸಿದೆ. ಆದರೆ, ಮಾರುಕಟ್ಟೆ ದರ 1,900 ರಿಂದ 2,100 ರೂ.ವರೆಗೆ ಇರುವುದರಿಂದ ಡಿಸ್ಟಲರಿಗಳು, ಎಂಎಸ್‌ಪಿ ದರದಲ್ಲಿಯೇ ಮೆಕ್ಕೆಜೋಳ ಖರೀದಿಸಬೇಕೆಂದು ಮನವೊಲಿಸಲಾಗುತ್ತಿದೆ. ಪೌಲ್ಟ್ರಿ ಫಾರಂಗಳು, ಪಶು ಆಹಾರಗಳಿಗೂ ಮೆಕ್ಕೆ ಜೋಳ ಖರೀದಿಸಲು ಸೂಚಿಸಲಾಗಿದೆ ಎಂದರು.

ಮಹತ್ವದ ರಾಜಕೀಯ ಚರ್ಚೆ: ಡಿಕೆಶಿ

ನಾವಿಬ್ಬರೂ ಬಹಳ ಸಂತೋಷದಿಂದ ಉಪಹಾರ ಸೇವಿಸಿದ್ದೇವೆ ಎಂದರು.

ಈ ವೇಳೆ ರಾಜಕೀಯ ಚರ್ಚೆಯನ್ನೂ ಮಾಡಿದ್ದೇವೆ, ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳಿಂದ ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ಪಕ್ಷದ ಅಭ್ಯರ್ಥಿಗಳನ್ನು ಅಂತಿಮಗೊಳಿಸಬೇಕಿದ್ದು, ಈ ವಿಚಾರವಾಗಿ ನಾವಿಬ್ಬರೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಜೊತೆ ಚರ್ಚಿಸಿದ್ದೇವೆ.

ಅಧಿವೇಶನದಲ್ಲಿ ಯಾವ ರೀತಿ ಹೋರಾಟ ಮಾಡಬೇಕು, ಶಾಸಕರಿಗೆ ನೀಡಬೇಕಾದ ಸಂದೇಶಗಳು, ವಿರೋಧ ಪಕ್ಷಗಳು ಯಾವೆಲ್ಲಾ ವಿಚಾರ ಪ್ರಸ್ತಾಪಿಸಬಹುದು ಎಂಬ ಚರ್ಚೆ ಮಾಡಿದ್ದೇವೆ. ವಿರೋಧ ಪಕ್ಷಗಳು ಯಾವುದೇ ವಿಚಾರ ಪ್ರಸ್ತಾಪಿಸಿದರೂ ನಾವು ಒಂದೇ ಧ್ವನಿಯಲ್ಲಿ ಎದುರಿಸಲು ಸಿದ್ಧರಿದ್ದೇವೆ.

ದೆಹಲಿಯಲ್ಲಿ ಡಿಸೆಂಬರ್ 8ರಂದು ಸರ್ವಪಕ್ಷ ಸಂಸದರ ಸಭೆ ನಡೆಸುವ ಬಗ್ಗೆಯೂ ಚರ್ಚೆ ಮಾಡಿದ್ದು, ಅಂದೇ ರಾಜ್ಯಕ್ಕೆ ವಾಪಸ್ಸಾಗಲು ತೀರ್ಮಾನಿಸಿದ್ದೇವೆ.

ಮೇಕೆದಾಟು ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪು ಬಂದಿದ್ದು, ಮೆಕ್ಕೆಜೋಳ ದರ ನಿಗದಿ, ಕೇಂದ್ರದಿಂದ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ನೀರಾವರಿ ಯೋಜನೆಗಳಿಗೆ ಅನುದಾನ ಬಾರದಿರುವ ವಿಚಾರ ಕುರಿತು ರಾಜ್ಯದ ಸಂಸದರ ಜೊತೆ ಚರ್ಚಿಸಿ ಕೇಂದ್ರದೊಂದಿಗೆ ಸಂವಹನ ನಡೆಸುವ ಜವಾಬ್ದಾರಿ ನೀಡಬೇಕಿದೆ. ಈ ಸಭೆಗೆ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕರು ಹಾಗೂ ಜೆಡಿಎಸ್ ನಾಯಕರನ್ನು ಕರೆದುಕೊಂಡು ಹೋಗಲು ತೀರ್ಮಾನಿಸಿದ್ದೇವೆ ಎಂದರು.

ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಸದನದಲ್ಲಿ ಪ್ರತಿಭಟನೆ ಮಾಡಲಿ, ಯಾವ ವಿಚಾರಕ್ಕೆ ಮಾಡುತ್ತಾರೆ, ಅವರದ್ದು ಖಾಲಿ ಟ್ರಂಕ್ ಎಂದರು.

ನಮ್ಮ ಪಕ್ಷದಲ್ಲಿ ಯಾರೂ ಬೇರೆಯಾಗಿಲ್ಲ. ಮಾಧ್ಯಮಗಳು ಬೇರೆ ಮಾಡುತ್ತಿವೆ. ದೆಹಲಿ ಪ್ರವಾಸ ವೇಳೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಕರೆದರೆ ಭೇಟಿ ಮಾಡುತ್ತೇವೆ ಎಂದರು.

ಪ್ರಕರಣಕ್ಕೆ ಸುಪ್ರೀಂಕೋರ್ಟ್ ತಡೆ

ಕರ್ನಾಟಕ ರಾಜ್ಯ ಸರ್ಕಾರಕ್ಕೂ ನೋಟಿಸ್ ನೀಡಿದೆ. ಹೈಕೋರ್ಟ್ ಪೀಠವು ಹಿಂದಿನ ತೀರ್ಪನ್ನು ತಪ್ಪಾಗಿ ಅರ್ಥೈಸಿಕೊಂಡಿದೆ ಮತ್ತು ಅರ್ಜಿಯನ್ನು ಅದರ ಅರ್ಹತೆಯ ಮೇಲೆ ವಿಚಾರಣೆ ಮಾಡಲು ಸಾಧ್ಯವಿಲ್ಲ ಎಂದು ತಪ್ಪಾಗಿ ಅಭಿಪ್ರಾಯಪಟ್ಟಿದೆ. ಆದ್ದರಿಂದ, ಫೆಬ್ರವರಿ 7ರ ಹಿಂದಿನ ಆದೇಶದಲ್ಲಿ ಅನುಮತಿಸಿದಂತೆ ಅರ್ಜಿದಾರರ ವಿಚಾರಣೆಯ ಹಕ್ಕನ್ನು ಪರಿಗಣಿಸುವ ಸೀಮಿತ ಉದ್ದೇಶಕ್ಕಾಗಿ ಮಾತ್ರ ಪ್ರಕರಣವನ್ನು ಮತ್ತೊಮ್ಮೆ ವಿಚಾರಣೆ ನಡೆಸಲು ನೋಟಿಸ್ ಕಳುಹಿಸುತ್ತಿದೆ ಎಂದು ನ್ಯಾಯಾಲಯ ಹೇಳಿದೆ.

ಯಡಿಯೂರಪ್ಪ ಪರವಾಗಿ ಹಿರಿಯ ವಕೀಲರಾದ ಸಿದ್ಧಾರ್ಥ್ ಲೂತ್ರಾ ಮತ್ತು ಸಿದ್ಧಾರ್ಥ್ ದವೆ ವಾದ ಮಂಡಿಸಿದರು. ಈ ವಿಷಯದಲ್ಲಿ ಕೇವಲ ಹಿಂದಿನ ತೀರ್ಪುಗಳನ್ನು ಪರಿಗಣಿಸುವ ಬದಲು ಹೈಕೋರ್ಟ್ ನಮ್ಮ ವಾದಗಳನ್ನು ಪರಿಗಣಿಸಬೇಕಿತ್ತು ಎಂದು ಅವರು ವಾದಿಸಿ ದರು. ಪ್ರಕರಣದ ಮೊದಲ ಕಾಗ್ನಿಜೆನ್ಸ್ ಆದೇಶವನ್ನು ರದ್ದುಗೊಳಿಸಿ ಮತ್ತು ವಿಚಾರಣಾ ನ್ಯಾಯಾಲಯವು ಈ ವಿಷಯವನ್ನು ಮತ್ತೊಮ್ಮೆ ಪರಿಗಣಿಸುವಂತೆ ಕೋರಿದ ಹಿಂದಿನ ತೀರ್ಪು, ಅರ್ಜಿದಾರರಿಗೆ ಯಾವುದೇ ಆಕ್ಷೇಪಣೆಗಳನ್ನು ಎತ್ತುವ ಹಕ್ಕನ್ನು ಸಹ ನೀಡಿದೆ ಎಂದರು. ಅವರು 88 ವರ್ಷದ ವ್ಯಕ್ತಿ, 4 ಬಾರಿ ಮುಖ್ಯಮಂತ್ರಿ ರಾಜಕೀಯ ದ್ವೇಷ ಬಲಿಯಾಗುತ್ತಿದ್ದಾರೆ ಎಂದು ಲೂತ್ರಾ ವಾದಿಸಿದರು. ಸಂತ್ರಸ್ತೆಯ ತಾಯಿ ನೀಡಿದ ದೂರಿನ ಪ್ರಕಾರ, 2024ರ ಫೆಬ್ರವರಿಯಲ್ಲಿ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಡೆದ ಸಭೆಯ ಸಂದರ್ಭದಲ್ಲಿ ಯಡಿಯೂರಪ್ಪ ಅವರು ತಮ್ಮ 17 ವರ್ಷದ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ. ಸದಾಶಿವನಗರ ಪೊಲೀಸರು ಮಾರ್ಚ್ 14, 2024 ರಂದು ಪ್ರಕರಣ ದಾಖಲಿಸಿ ಕೊಂಡಿದ್ದು, ನಂತರ ಹೆಚ್ಚಿನ ತನಿಖೆಗಾಗಿ ಸಿಐಡಿಗೆ ವರ್ಗಾಯಿಸಲಾಯಿತು. ಸಂಸ್ಥೆಯು ಎಫ್‌ಐಆರ್ ಮರು ದಾಖಲಿಸಿ, ಮಾಜಿ ಸಿಎಂ ವಿರುದ್ಧ ಆರೋಪಪಟ್ಟಿ ಸಲ್ಲಿಸಿತು.

ದೂರು ರದ್ದುಪಡಿಸಿದ ಹೈಕೋರ್ಟ್

ಎಂದು ಬಿಜೆಪಿ ಆರೋಪಿಸಿತ್ತು. ಬೇರೆ ರಾಜ್ಯಗಳಲ್ಲಿ 900 ರೂಪಾಯಿಗಳಿಗೆ ಸಿಗುವ ಸ್ಮಾರ್ಟ್ ಮೀಟರ್ ಅನ್ನು 5 ಸಾವಿರದಿಂದ 10 ಸಾವಿರ ರೂಪಾಯಿಗಳಿಗೆ ಗ್ರಾಹಕರಿಗೆ ನೀಡಲಾಗುತ್ತಿದೆ. ಹೀಗಾಗಿ ಇದೊಂದು ದೊಡ್ಡ ಹಗರಣ ಎಂದು ಆರೋಪಿಸಲಾಗಿತ್ತು.

ಸ್ಮಾರ್ಟ್ ಮೀಟರ್ ಟೆಂಡರ್ ಸುಮಾರು 10 ಸಾವಿರ ಕೋಟಿ ರೂಪಾಯಿ ಮೊತ್ತದ್ದಾಗಿರುವ ಕಾರಣ ಜಾಗತಿಕ ಟೆಂಡರ್ ಕರೆಯಬೇಕಿತ್ತು. ಆದರೆ ಕೇವಲ 354 ಕೋಟಿ ರೂ. ವ್ಯವಹಾರ ನಡೆಸುವ ರಾಜಶ್ರೀ ಎಲೆಕ್ಟ್ರಿಕಲ್ಸ್‌ಗೆ ಟೆಂಡರ್ ನೀಡಲಾಗಿದೆ. 10 ವರ್ಷಕ್ಕೆ 5296 ಕೋಟಿ ರೂಪಾಯಿಗೆ ನೀಡಲಾಗಿರುವ ಟೆಂಡರ್ ಅನ್ನು ಬೇಕೆಂದೇ 997 ಕೋಟಿ ರೂ. ಟೆಂಡರ್ ಎಂಬಂತೆ ಬಿಂಬಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಗೆ ಮಾತ್ರ ಈ ಟೆಂಡರ್ ಅನ್ವಯವಾದರೂ ಇತರೆ ಎಸ್ಕಾಂಗಳಿಗೂ ಇದೇ ಸ್ಮಾರ್ಟ್ ಮೀಟರ್ ಖರೀದಿಸುವಂತೆ ಸೂಚಿಸಲಾಗಿದೆ. ಇದು ಸಂಪೂರ್ಣ ಕಾನೂನು ಬಾಹಿರ. ಕೇಂದ್ರದ ಆರ್‌ಡಿಎಸ್‌ಎಸ್ ಯೋಜನೆಯಡಿ 900 ರೂ.ಗೆ ಸಿಗುವ ಮೀಟರ್ ಅನ್ನು 5 ಸಾವಿರದಿಂದ 8,800 ರೂಪಾಯಿಗಳಿಗೆ ಗ್ರಾಹಕರು ಖರೀದಿಸಬೇಕಾಗಿದೆ. ಇದಕ್ಕೆ ಇದಕ್ಕೆಲ್ಲಾ ಬೆಸ್ಕಾಂ ಅಧ್ಯಕ್ಷ ಹಾಗೂ ಇಂಧನ ಸಚಿವ ಕೆ.ಜೆ.ಜಾರ್ಜ್ ಹಾಗೂ ಇತರೆ ಅಧಿಕಾರಿಗಳೇ ಹೊಣೆ ಎಂದು ಬಿಜೆಪಿ ಆರೋಪ ಮಾಡಿತ್ತು. ಆದರೆ, ಬಿಜೆಪಿ ನಾಯಕರು ದಾಖಲಿಸಿದ್ದ ಪ್ರಕರಣ ರದ್ದುಪಡಿಸಿ ಹೈಕೋರ್ಟ್ ಆದೇಶಿಸಿದೆ.

ಎರಡು ಹಂತದಲ್ಲಿ ಜನಗಣತಿ

ದಿನಾಂಕ 00:00 ಗಂಟೆಗೆ ಜನಗಣತಿ ನಡೆಯಲಿದೆ, ಅಲ್ಲಿ ಇದನ್ನು ಸೆಪ್ಟೆಂಬರ್ 2026 ರಲ್ಲಿ ಉಲ್ಲೇಖ ದಿನಾಂಕ 00:00 ಗಂಟೆಗೆ ಮಾಡಲಾಗುತ್ತದೆ ಎಂದು ಅವರು ಹೇಳಿದರು. ಜನಗಣತಿ ಪ್ರಶ್ನಾವಳಿಯನ್ನು ಪ್ರತಿ ಕಾರ್ಯಕ್ಕೂ ಮೊದಲು ವಿವಿಧ ಸಚಿವಾಲಯಗಳು, ಇಲಾಖೆಗಳು, ಸಂಸ್ಥೆಗಳು ಮತ್ತು ಜನಗಣತಿ ದತ್ತಾಂಶ ಬಳಕೆದಾರರಿಂದ ಬರುವ ಒಳಹರಿವು ಮತ್ತು ಸಲಹೆಗಳ ಆಧಾರದ ಮೇಲೆ ಅಂತಿಮಗೊಳಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಜನಗಣತಿಯು 150 ವರ್ಷಗಳಿಗೂ ಹೆಚ್ಚಿನ ಇತಿಹಾಸವನ್ನು ಹೊಂದಿದೆ ಮತ್ತು ಹಿಂದಿನ ಕಾರ್ಯಗಳಿಂದ ಕಲಿತದ್ದನ್ನು ಮುಂದಿನ ಜನಗಣತಿಯನ್ನು ನಡೆಸಲು ಪರಿಗಣಿಸಲಾಗಿದೆ ಎಂದು ಸಚಿವರು ಹೇಳಿದರು. ಪ್ರತ್ಯೇಕ ಪ್ರಶ್ನೆಯಲ್ಲಿ, ಈ ವರ್ಷ ಏಪ್ರಿಲ್ 30 ರಂದು ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿಯು ನಿರ್ಧರಿಸಿದಂತೆ ಜನಗಣತಿಯಲ್ಲಿ ಜಾತಿ ಎಣಿಕೆಯನ್ನು ಸಹ ಮಾಡಲಾಗುತ್ತದೆ ಎಂದು ಸಚಿವರು ಹೇಳಿದರು. ಮತ್ತೊಂದು ಪ್ರತಿಕ್ರಿಯೆಯಲ್ಲಿ, 2027ರ ಜನಗಣತಿಯನ್ನು ಡಿಜಿಟಲ್ ವಿಧಾನಗಳ ಮೂಲಕ ನಡೆಸಲಾಗುವುದು, ಇದರಲ್ಲಿ ಸ್ವಯಂ ಎಣಿಕೆಗಾಗಿ ಆನ್‌ಲೈನ್ ನಿಬಂಧನೆಯೊಂದಿಗೆ ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕ ಡೇಟಾವನ್ನು ಸಂಗ್ರಹಿಸಲಾಗುವುದು ಎಂದು ಸಚಿವರು ಹೇಳಿದರು.

ಸಂಚಾರ್ ಸಾಥಿ ಆ್ಯಪ್ ಅಳವಡಿಕೆ ಕಡ್ಡಾಯವೇನಲ್ಲ

ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸ್ಪಷ್ಟನೆ



ನವದೆಹಲಿ, ಡಿ.2– ಭಾರತದಲ್ಲಿ ಮಾರಾಟವಾಗುವ ಎಲ್ಲಾ ಹೊಸ ಮೊಬೈಲ್ ಫೋನ್‌ಗಳಲ್ಲಿ ಸಂಚಾರ್ ಸಾಥಿ ಅಪ್ಲಿಕೇಶನ್‌ಗಳನ್ನು ಕಡ್ಡಾಯವಾಗಿ ಇನ್‌ಸ್ಟಾಲ್ ಮಾಡಲು ದೂರ ಸಂಪರ್ಕ ಇಲಾಖೆ ಹ್ಯಾಂಡ್‌ಸೆಟ್ ತಯಾರಕರಿಗೆ ಸೂಚಿಸಿದೆ. ಆದರೆ ಈ ವಿಷಯ ವಿವಾದವಾಗಿ ಬದಲಾದ ಹಿನ್ನೆಲೆಯಲ್ಲಿ ಕೇಂದ್ರ ದೂರ ಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಮಂಗಳವಾರ ಮಹತ್ವದ ಮಾಹಿತಿ ನೀಡಿದ್ದಾರೆ.

ಬಳಕೆದಾರರು ಸಂಚಾರ್ ಸಾಥಿ ಆಪ್ ನಿಮ್ಮ ಫೋನ್‌ನಲ್ಲಿ ಇಟ್ಟುಕೊಳ್ಳಲು ಬಯಸದಿದ್ದರೆ, ನೀವು ಅದನ್ನು ಡಿಲೀಟ್ ಮಾಡಬಹುದು, ಇದು ಆಪ್ಷನಲ್ ಎಂದು ಹೇಳಿದ್ದಾರೆ. ಈ ಅಪ್ಲಿಕೇಶನ್ ಅನ್ನು ಎಲ್ಲರಿಗೂ ಪರಿಚಯಿಸುವುದು ನಮ್ಮ ಕರ್ತವ್ಯ, ಅದನ್ನು ಅವರ ಮೊಬೈಲ್ ಗಳಲ್ಲಿ ಇಟ್ಟುಕೊಳ್ಳುವುದು ಅಥವಾ ಡಿಲೀಟ್ ಮಾಡುವುದು ಬಳಕೆದಾರರಿಗೆ ಸಂಬಂಧಿಸಿದ್ದು ಎಂದು ಸಿಂಧಿಯಾ ತಿಳಿಸಿದ್ದಾರೆ, ಸರ್ಕಾರವು ಸೈಬರ್ ವಂಚನೆಯನ್ನು ನಿಗ್ರಹಿಸಲು ವಿನ್ಯಾಸಗೊಳಿಸಲಾದ ಸಾಧನಕ್ಕೆ ವ್ಯಾಪಕ ಪ್ರವೇಶವನ್ನು ಖಚಿತಪಡಿಸುತ್ತಿದೆ ಎಂದು ಒತ್ತಿ ಹೇಳಿದರು.

ಈ ಆಪ್ ಅನ್ನು ಇನ್‌ಸ್ಟಾಲ್ ಮಾಡಿದ ಬಳಿಕ ಮೊಬೈಲ್ ಕಳ್ಳತನವಾದರೆ ಅಥವಾ ಕಳೆದುಹೋದರೆ ಬ್ಲಾಕ್ ಮಾಡಬಹುದು. ಅಲ್ಲದೇ ಈ ಫೋನ್ ದೇಶದ ಬೇರೆ ಕಡೆ ಬಳಕೆಯಾಗುತ್ತಿದ್ದರೂ ಕಾನೂನು ಸಂಸ್ಥೆಗಳಿಗೆ ಎಲ್ಲಿ ಈ ಫೋನ್ ಸಕ್ರಿಯವಾಗಿದೆ ಎಂಬ ಮಾಹಿತಿ ಸುಲಭವಾಗಿ ಲಭ್ಯವಾಗುತ್ತದೆ ಸೈಬರ್ ಅಪರಾಧ ನಕಲಿ ಐಎಂಇಐ ಸಂಖ್ಯೆ ಬಳಸಿ ನಡೆಸುವ ಕೃತ್ಯವನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಈ ಆಪ್ ಇನ್‌ಸ್ಟಾಲ್ ಮಾಡಲು ಕಡ್ಡಾಯ ಮಾಡಿದೆ.

ನವೆಂಬರ್ 28 ರಿಂದ ಜಾರಿಗೆ ಬರುವಂತೆ ದೂರಸಂಪರ್ಕ ಇಲಾಖೆ ಹೊಸ ನಿರ್ದೇಶನಗಳನ್ನು ನೀಡಿತ್ತು. ಎಲ್ಲಾ ಮೊಬೈಲ್ ಹ್ಯಾಂಡ್‌ಸೆಟ್ ತಯಾರಕರು ಮತ್ತು ಆಮದುದಾರರು ಭಾರತದಲ್ಲಿ ಬಳಸಲು ಉದ್ದೇಶಿಸಲಾದ ಸಾಧನಗಳಲ್ಲಿ ಸರ್ಕಾರಿ ಸ್ವಾಮ್ಯದ ಸೈಬರ್ ಭದ್ರತಾ ಅಪ್ಲಿಕೇಶನ್ ಅನ್ನು ಸ್ಥಾಪಿಸಲು ಸೂಚಿಸಲಾಗಿತ್ತು. ಆದೇಶವನ್ನು ಕಾರ್ಯಗತಗೊಳಿಸಲು ಕಂಪನಿಗಳಿಗೆ 90 ದಿನಗಳು ಮತ್ತು ವರದಿಗಳನ್ನು ಸಲ್ಲಿಸಲು 120 ದಿನ ಸಮಯ ನೀಡಲಾಗಿದೆ.

ವಿರೋಧ ಪಕ್ಷಕ್ಕೆ ಯಾವುದೇ ಸಮಸ್ಯೆಗಳಿಲ್ಲದಿದ್ದಾಗ ಮತ್ತು ಕೆಲವನ್ನು ಹುಡುಕಲು ಪ್ರಯತ್ನಿಸಿದಾಗ, ನಾವು ಅವರಿಗೆ ಸಹಾಯ ಮಾಡಲು ಸಾಧ್ಯವಿಲ್ಲ. ಗ್ರಾಹಕರಿಗೆ ಸಹಾಯ ಮಾಡು ವುದು ಮತ್ತು ಅವರ ಸುರಕ್ಷತೆಯನ್ನು ಖಚಿತಪಡಿಸುವುದು ನಮ್ಮ ಕರ್ತವ್ಯ ಎಂದು ಸಿಂಧಿಯಾ ಹೇಳಿದರು, ಅಪ್ಲಿಕೇಶನ್ ಗೌಪ್ಯತೆ ಉಲ್ಲಂಘಿಸುತ್ತದೆ ಎಂಬ ಆರೋಪಗಳನ್ನು ತಿರಸ್ಕರಿಸಿದರು. ನೀವು ಬಯಸಿದಂತೆ ನೀವು ಅದನ್ನು ಸಕ್ರಿಯಗೊಳಿಸಬಹುದು ಅಥವಾ ನಿಷ್ಕ್ರಿಯಗೊಳಿಸಬಹುದು ಎಂದು ಸ್ಪಷ್ಟಪಡಿಸಿದ್ದಾರೆ.

ಸರ್ವಾಧಿಕಾರ ರಾಷ್ಟ್ರವನ್ನಾಗಿಸುವ ಹುನ್ನಾರ



ನವದೆಹಲಿ, ಡಿ.2– ದೇಶದಲ್ಲಿ ತಯಾರಾದ ಅಥವಾ ಆಮದು ಮಾಡಿಕೊಳ್ಳುವ ಎಲ್ಲಾ ಮೊಬೈಲ್‌ಗಳಲ್ಲಿ ಸಂಚಾರ ಸಾಥಿ ಆಪ್ ಅಳವಡಿಕೆ (ಇನ್‌ಸ್ಟಾಲ್) ಮಾಡುವುದನ್ನು ಕೇಂದ್ರ ಸರ್ಕಾರ ಕಡ್ಡಾಯ ಮಾಡಿರುವುದರ ವಿರುದ್ಧ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಸೈಬರ್ ವಂಚನೆ ವರದಿ ಮಾಡುವ ಕಾರ್ಯವಿಧಾನದ ಅಗತ್ಯತೆ ಇದೆ. ಆದರೆ, ಮೊಬೈಲ್‌ಗಳಲ್ಲಿ 'ಸಂಚಾರ ಸಾಥಿ' ಆಪ್ ಅಳವಡಿಕೆ ಕಡ್ಡಾಯಗೊಳಿಸುವಿಕೆಯಿಂದ ಬಳಕೆದಾರರ ಗೌಪ್ಯತೆ ಉಲ್ಲಂಘಿಸುವ ಸಾಧ್ಯತೆ ಹೆಚ್ಚಿದೆ ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ. ಇದು ಕೇವಲ ಒಂದು ವಿಷಯ ಮಾತ್ರವಲ್ಲ, ಬದಲಾಗಿ ಬಿಜೆಪಿ ನಾಯಕರು ದೇಶವನ್ನು ಸರ್ವಾಧಿಕಾರ ರಾಷ್ಟ್ರವನ್ನಾಗಿ ಪರಿವರ್ತಿಸುತ್ತಿದ್ದಾರೆ. ಸಂಸತ್ತು ಏಕೆ ಕಾರ್ಯನಿರ್ವಹಿಸುತ್ತಿಲ್ಲ ಎಂದು ನೀವು ಪ್ರತಿದಿನ ನನ್ನನ್ನು ಕೇಳುತ್ತೀರಿ.

ಏಕೆಂದರೆ ಆಡಳಿತ ಪಕ್ಷದ ನಾಯಕರು ಯಾವುದರ ಬಗ್ಗೆಯೂ ಮಾತನಾಡಲು ನಿರಾಕರಿಸುತ್ತಿದ್ದಾರೆ. ವಿಪಕ್ಷದವರನ್ನು ದೂಷಿಸುವುದು ತುಂಬಾ ಸುಲಭ. ಆದರೆ, ವಾಸ್ತವವೆಂದರೆ ಅವರು ಯಾವುದರ ಬಗ್ಗೆಯೂ ಚರ್ಚೆ ನಡೆಸಲು ಅವಕಾಶ ನೀಡುತ್ತಿಲ್ಲ ಎಂದು ಪ್ರಿಯಾಂಕಾ ಆರೋಪಿಸಿದ್ದಾರೆ. ಸೈಬರ್ ಭದ್ರತೆಯ ಕುರಿತು ಈಗಾಗಲೇ ವ್ಯಾಪಕ ಚರ್ಚೆ ನಡೆದಿದೆ ವಂಚನೆ ಕುರಿತು ವರದಿ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಅವಶ್ಯಕತೆಯಿದೆ. ಸಂಚಾರ ಸಾಥಿ ಆಪ್ ಅಳವಡಿಕೆ ಕಡ್ಡಾಯಗೊಳಿಸಿರುವ ಕೇಂದ್ರದ ನಿಯಮವು ಮೊಬೈಲ್ ಬಳಕೆದಾರರ ಗೌಪ್ಯತೆ ಉಲ್ಲಂಘಿಸಿದಂತಾಗುತ್ತದೆ ಎಂದೂ ಅವರು ಕಿಡಿಕಾರಿದ್ದಾರೆ.

ವಿವಾದ ನಿವಾರಣೆ

ವೃತ್ತಿಯನ್ನಾಗಿ ಮಾಡಿಕೊಂಡಿರುವಾಗ ಮಠಾಧೀಶರು ಸಮಾಜದ ಒಳಿತಿಗಾಗಿ ರಾಜಕೀಯವಾಗಿ ಏಕೆ ಸಲಹೆ–ಸೂಚನೆಗಳನ್ನು ನೀಡಬಾರದು. ಮೊದಲು ಜಾತಿಯತೆಯಿಂದ ದೂರವಿರಬೇಕು. ಜಾತಿ ಪದ್ಧತಿಯು ನಾಗರಿಕ ಸಮಾಜಕ್ಕೆ ಅಂಟಿರುವ ಶಾಪವಾಗಿದ್ದು ಮಠಾಧೀಶರು ಮೊದಲು ಜಾತಿಯ ಸಂಕೋಲೆಗಳಿಂದ ಹೊರಬಂದು ಜಾತ್ಯಾತೀತ ಸಮಾಜದ ನಿರ್ಮಾಣಕ್ಕಾಗಿ ಗಟ್ಟಿಯಾಗಿ ನಿಂತಾಗ ಮಾತ್ರ ನಾಗರಿಕ ಸಮಾಜದಲ್ಲಿ ಬದಲಾವಣೆ ಕಾಣಲು ಸಾಧ್ಯವಿದೆ ಎಂದು ಹೇಳಿದರು.

ಪ್ರಸ್ತುತ ರಾಜಕಾರಣ ದಿಕ್ಕು ತಪ್ಪಿದೆ. ತತ್ವ–ಆದರ್ಶ ಹಾಗೂ ಮೌಲ್ಯಗಳು ಮಾಯವಾಗಿವೆ. ಹಣವಿದ್ದವರು ರಿಯಲ್ ಎಸ್ಟೇಟ್ ಕುಳಗಳು ರಾಜಕಾರಣದಲ್ಲಿ ವಿಜೃಂಭಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ಭವಿಷ್ಯದ ದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ವಿಷಾದ ವ್ಯಕ್ತಪಡಿಸಿದ ಶ್ರೀಗಳು, ಮಕರ ಸಂಕ್ರಾಂತಿಯ ನಂತರ ಮತ್ತೆ ನಾನು ಪತ್ರಕರ್ತರ ಮುಂದೆ ಬಂದು ಹಲವು ಹೊಸ ವಿಚಾರಗಳ ಬಗ್ಗೆ ಮಾತನಾಡುತ್ತೇನೆ ಎಂದರು.

ಕೆಂಪುಕೋಟೆ ಸಮೀಪ ಕಾರು ಸ್ಫೋಟ ಪ್ರಕರಣ

ರಷೀದ್ ಅಲಿ NIA ಕಸ್ಟಡಿ 7 ದಿನ ವಿಸ್ತರಣೆ

ನವದೆಹಲಿ, ಡಿ.2– ಕೆಂಪುಕೋಟೆ ಸಮೀಪ ಸಂಭವಿಸಿದ ಕಾರು ಸ್ಫೋಟದ ಆರೋಪಿಗಳಲ್ಲಿ ಒಬ್ಬನಾದ ರಷೀದ್ ಅಲಿಯನ್ನು ದೆಹಲಿಯ ಪಟಿಯಾಲ ನ್ಯಾಯಾಲಯದ ಮುಂದೆ ಮಂಗಳವಾರ ಹಾಜರುಪಡಿಸಲಾಯಿತು. ನವೆಂಬರ್ 26ರಂದು ಅಲಿಯನ್ನು ನ್ಯಾಯಾಲಯವು ಒಂದು ವಾರ ಎನ್‌ಐಎ ವಶಕ್ಕೆ ಒಪ್ಪಿಸಿತ್ತು. ಮಂಗಳವಾರಕ್ಕೆ ಈ ಅವಧಿ ಮುಕ್ತಾಯಗೊಂಡಿತ್ತು. ಹೆಚ್ಚಿನ ವಿಚಾರಣೆಗೆ ಮತ್ತೆ ವಶಕ್ಕೆ ನೀಡುವಂತೆ ಅಧಿಕಾರಿಗಳು ಮಾಡಿದ ಮನವಿಯನ್ನು ಪರಿಗಣಿಸಿದ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಅಂಜು ಬಜಾಜ್ ಚಂದ್ನಾ, ಮತ್ತೆ ಒಂದು ವಾರ ಅವಧಿ ವಿಸ್ತರಿಸಿದರು. ಕೆಂಪುಕೋಟೆ ಸಮೀಪ ಸ್ಫೋಟಗೊಂಡ ಕಾರು ರಷೀದ್ ಅಲಿಯ ಹೆಸರಿನಲ್ಲಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ ಎನ್‌ಐಎ 7 ಮಂದಿಯನ್ನು ಬಂಧಿಸಿದೆ.

ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಗೆ ಪ್ರಶಸ್ತಿ



ಸುತ್ತೂರು,ಡಿ.2–ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣೆ ಅಂಗವಾಗಿ ನಡೆದ ಜೆಎಸ್‌ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟದಲ್ಲಿ ಅತೀ ಹೆಚ್ಚು ಬಹುಮಾನಗಳನ್ನು ಗಳಿಸುವ ಮೂಲಕ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲಾ ಬಾಲಕಿಯರ ತಂಡವು ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ.

ಬಾಲಕರ ವಿಭಾಗದಲ್ಲಿ ಶರತ್ ಕುಮಾರ್ 100 ಮೀ ಓಟದಲ್ಲಿ ತೃತೀಯ, 200 ಮೀ ಓಟದಲ್ಲಿ ತೃತೀಯ, ನಿಖಿಲ್ 400 ಮೀ. ಓಟ ತೃತೀಯ, ಲಿಖಿತ್ 1500 ಮೀ. ತೃತೀಯ, ಮೋಹಿತ್ ಕುಮಾರ್ ಚಕ್ರ ಎಸೆತ ತೃತೀಯ, ಲಿಖಿತ್ ಉದ್ದ ಜಿಗಿತದಲ್ಲಿ ದ್ವಿತೀಯ, ಯಶವಂತ್ ಎತ್ತರ ಜಿಗಿತದಲ್ಲಿ ದ್ವಿತೀಯ, ಲಿಖಿತ್ ತೃತೀಯ ಸ್ಥಾನ, ಜಾವಲಿನ್ ಎಸೆತದಲ್ಲಿ ಲಿಖಿತ್ ಪ್ರಥಮ, ಯಶವಂತ್ ದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ. ಶರಣಬಸವ ಮತ್ತು ತಂಡ 4x100ಮೀ ರಿಲೇಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.

ಗುಂಪು ಆಟಗಳಲ್ಲಿ ಶಾಲೆಯ ಕ್ರೀಡಾಪಟುಗಳು ಖೋ–ಖೋ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ. ಲಿಖಿತ್ ಉತ್ತಮ ಆಟಗಾರ ಪ್ರಶಸ್ತಿ ಮತ್ತು ನಗದು ಬಹುಮಾನಗಳನ್ನು ಪಡೆದಿದ್ದಾನೆ.

ಬಾಲಕಿಯರ ವಿಭಾಗದಲ್ಲಿ ಯೋಗಿನಿ 100 ಮೀ. ಓಟದಲ್ಲಿ ಪ್ರಥಮ, ಪ್ರೀತಿ ದ್ವಿತೀಯ, ಸ್ಥಾನ ಗಳಿಸಿದ್ದಾರೆ. ರಕ್ಷಿತ ಉದ್ದ ಜಿಗಿತದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾಳೆ. ಯೋಗಿನಿ ಎತ್ತರ ಜಿಗಿತದಲ್ಲಿ ದ್ವಿತೀಯ, ಜಿನಾಲಕ್ಷ್ಮಿ ತೃತೀಯ ಸ್ಥಾನಗಳಿಸಿದ್ದಾರೆ. ಜಿನಾಲಕ್ಷ್ಮಿ ಜಾವಲಿನ್ ಥ್ರೋ ಪ್ರಥಮ, ಬೋರಮ್ಮ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಬೋರಮ್ಮ ಮತ್ತು ತಂಡ 4x100 ಮೀ ರಿಲೇಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ.

ಗುಂಪು ಆಟಗಳಲ್ಲಿ ಶಾಲೆಯ ಕ್ರೀಡಾಪಟುಗಳು ಖೋ–ಖೋ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿರುತ್ತಾರೆ ರಂಜಿತಾ ಉತ್ತಮ ಆಟಗಾರ್ತಿ ಪ್ರಶಸ್ತಿ ಮತ್ತು ನಗದು ಬಹುಮಾನಗಳನ್ನು ಪಡೆದಿದ್ದಾರೆ. ಶಾಲೆಯ ಕ್ರೀಡಾಪಟುಗಳು ಥ್ರೋ ಬಾಲ್ ಪಂದ್ಯದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿರುತ್ತಾರೆ. ಕೃತಿಕಾ ಉತ್ತಮ ಆಟಗಾರ್ತಿ ಪ್ರಶಸ್ತಿ ಮತ್ತು ನಗದು ಬಹುಮಾನಗಳನ್ನು ಪಡೆದಿದ್ದಾಳೆ.

ಪ್ರಶಸ್ತಿ ವಿಜೇತ ಕ್ರೀಡಾಪಟುಗಳನ್ನು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳು, ಮುಖ್ಯಸ್ಥರು ಮುಖ್ಯೋಪಾಧ್ಯಾಯರು ಹಾಗೂ ನೌಕರ ವರ್ಗದವರು ಆತ್ಮೀಯವಾಗಿ ಅಭಿನಂದಿಸಿದ್ದಾರೆ.

ಹುಟ್ಟುಹಬ್ಬದ ಶುಭಾಶಯ...



ದಿ ಸಿಟಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ, ಚಾಮರಾಜ ಕ್ಷೇತ್ರದ ಬಿಜೆಪಿ ಯುವ ಮುಖಂಡ ಎಸ್.ಬಿ.ಶಿವ ಅವರನ್ನು ಮಾಜಿ ಕಾರ್ಪೊರೇಟರ್ ಮಹದೇಶ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ರವಿ ಕುಂಬಾರಕೊಪ್ಪಲು, ವಿಕ್ರಾಂತ್ ಬಾಬು, ಕಾಂಗ್ರೆಸ್ ಮುಖಂಡರಾದ ಡೆಲ್ಲಿರವಿ, ಹೊಸಳ್ಳಿ ಕೃಷ್ಣ ಅಭಿನಂದಿಸಿ, ಶುಭಾಶಯ ಕೋರಿದರು.

ಬಿಜೆಪಿಗೆ ಪುನೀತ್ ನೇಮಕ



ಮೈಸೂರು,ಡಿ.2–ಮೈಸೂರು ನಗರ ಬಿಜೆಪಿ ಕಾರ್ಯದರ್ಶಿಯನ್ನಾಗಿ ಮಂಚೇಗೌಡನ ಕೊಪ್ಪಲಿನ ನಿವಾಸಿ ಎಂ.ಎಸ್.ಪುನೀತ್ ಅವರನ್ನು ನೇಮಕ ಮಾಡಿ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಆದೇಶ ಹೊರಡಿಸಿದ್ದಾರೆ. ಪುನೀತ್, ಬಹಳ ವರ್ಷಗಳಿಂದ ಬಿಜೆಪಿ ನಿಷ್ಠಾವಂತ ಕಾರ್ಯಕರ್ತ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರರ ಕಟ್ಟಾ ಬೆಂಬಲಿಗ

ಬಹುಮಾನ ವಿಜೇತರು...



ತಿ.ನರಸೀಪುರ ತಾಲೂಕಿನ ಮಾವಿನಹಳ್ಳಿಯಲ್ಲಿ ನಡೆದ ಸಿ.ಬಿ.ಹುಂಡಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಚುಂದಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಭಾಗವಹಿಸಿ 11 ಬಹುಮಾನ ಪಡೆದುಕೊಂಡಿದ್ದಾರೆ. ವಿಜೇತರಾದ ಮಕ್ಕಳನ್ನು ಶಾಲೆಯ ಮುಖ್ಯ ಶಿಕ್ಷಕ ಬಸವರಾಜು, ಶಿಕ್ಷಕ ಜಯರಾಮ್, ಜಿಪಿಟಿ ಶಿಕ್ಷಕಿ ಜ್ಯೋತಿ.ಎಸ್, ಅತಿಥಿ ಶಿಕ್ಷಕಿ ಗೀತಾ ಅಭಿನಂದಿಸಿದರು.

ತೆವಳುತ್ತಾ ಸಾಗಿದೆ ಕೆಆರ್‌ಎಸ್ ರಸ್ತೆಯ ಮಳೆ ನೀರು ಚರಂಡಿ ಕಾಮಗಾರಿ

ದಾಸಪ್ಪ ಸರ್ಕಲ್‌ನಲ್ಲಿ ಕೆಆರ್‌ಎಸ್ ರಸ್ತೆಯತ್ತ ವಾಹನ ಸಂಚಾರಕ್ಕೆ ನಿರ್ಬಂಧ; ಬದಲಿ ಸಂಚಾರ ಮಾರ್ಗ ವ್ಯವಸ್ಥೆ





ಮೈಸೂರು ರೈಲ್ವೆ ನಿಲ್ದಾಣದ ಬಳಿಯ ದಾಸಪ್ಪ ವೃತ್ತದಲ್ಲಿ ಸಂಚಾರ ನಿರ್ಬಂಧಿಸಿ, ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆ. ಬಲಚಿತ್ರದಲ್ಲಿ ವಾಣಿವಿಲಾಸ ವಾಟರ್‌ವರ್ಕ್ಸ್ ಬಳಿ ಒಂದು ಬದಿಯ ಮಳೆ ನೀರು ಚರಂಡಿ ಕಾಮಗಾರಿ ಪೂರ್ಣಗೊಂಡಿರುವುದನ್ನು ಕಾಣಬಹುದು.

ಮೈಸೂರು, ಡಿ.2(ಆರ್‌ಕೆ)– ಮೈಸೂರಿನ ಕೆಆರ್‌ಎಸ್ ರಸ್ತೆಯ ವಾಣಿವಿಲಾಸ ವಾಟರ್‌ವರ್ಕ್ಸ್ ಬಳಿ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಗಾಗಿ ವಾಹನ ಸಂಚಾರ ಬಂದ್ ಮಾಡಿರುವ ಕಾರಣ, ಕಳೆದ ಎರಡು ತಿಂಗಳಿಂದ ವಾಹನ ಚಾಲಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಮೈಸೂರು ಮಹಾನಗರ ಪಾಲಿಕೆಯಿಂದ 90 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಈ ಕಾಮಗಾರಿಯನ್ನು ಅಕ್ಟೋಬರ್ ತಿಂಗಳಲ್ಲಿ ಆರಂಭಿಸಲಾಗಿತ್ತು. ಇದಕ್ಕಾಗಿ ಜೆಎಲ್‌ಬಿ ರಸ್ತೆಯ ದಾಸಪ್ಪ ಸರ್ಕಲ್‌ನಲ್ಲಿ ಕೆಆರ್‌ಎಸ್ ರಸ್ತೆ ಕಡೆಗೆ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

ಪರಿಣಾಮ ದಾಸಪ್ಪ ಸರ್ಕಲ್ ಮತ್ತು ವಾಣಿ ವಿಲಾಸ ವಾಟರ್ ವರ್ಕ್ಸ್ ನಡುವೆ ಕೆಆರ್‌ಎಸ್ ರಸ್ತೆಯಲ್ಲಿ ಒನ್ ವೇ ಸಂಚಾರ ಮಾಡಿರುವುದರಿಂದ ವಾಹನ ಸವಾರರು ಪರದಾಡುವಂತಾಗಿದೆ. ಒಂಟಿಕೊಪ್ಪಲ್ ಕಡೆಯಿಂದ ಬರುವ ವಾಹನಗಳು ಮಾತ್ರವೇ ದಾಸಪ್ಪ ಸರ್ಕಲ್ ಕಡೆಗೆ ಬಂದು ರೈಲ್ವೆ ನಿಲ್ದಾಣ, ಧನ್ವಂತರಿ ರಸ್ತೆ, ಜೆಎಲ್‌ಬಿ ರಸ್ತೆಯ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಸರ್ಕಲ್ ಕಡೆಗೆ ಸಂಚರಿಸಬಹುದಾಗಿದೆ.

ಬದಲಿ ಮಾರ್ಗ: ಜೆಎಲ್‌ಬಿ ರಸ್ತೆ, ಧನ್ವಂತರಿ ರಸ್ತೆ ಕಡೆಯಿಂದ ಬರುವ ವಾಹನಗಳು ಹುಣಸೂರು ರಸ್ತೆ ಇಲ್ಲವೇ ಶೇಷಾದ್ರಿ ಐಯ್ಯರ್ ರಸ್ತೆ ಮೂಲಕ ಸಯ್ಯಾಜಿರಾವ್ ರಸ್ತೆಯಲ್ಲಿ ಸಾಗಿ, ಮಧು ಟೈರ್ಸ್ ಬಳಿ ಎಡಕ್ಕೆ ತಿರುಗಿ ಯಾದವಗಿರಿ ರೈಲ್ವೆ ಕೆಳಸೇತುವೆ ಹಾದು ದೋಬಿಘಾಟ್ ಮೂಲಕ ತರಾಸು ಸರ್ಕಲ್‌ನಲ್ಲಿ ಕೆಆರ್‌ಎಸ್ ರಸ್ತೆಗೆ ಸಂಪರ್ಕಿಸಬೇಕಿದೆ. ಹಾಗೆಯೇ ಕೆಆರ್‌ಎಸ್ ರಸ್ತೆ ಕಡೆಯಿಂದ ಬರುವ ವಾಹನಗಳು ದಾಸಪ್ಪ ಸರ್ಕಲ್‌ನಲ್ಲಿ ಬಂದು ಸಂಪರ್ಕವಿರುವ ಮೂರು ರಸ್ತೆಗಳ ಮೂಲಕ ಮುಂದೆ ಸಾಗಬಹುದು.

ಈಗಾಗಲೇ ರಸ್ತೆಯ ಅರ್ಧ ಭಾಗದ ಕಾಮಗಾರಿ ಮುಕ್ತಾಯವಾಗಿದ್ದು, ಕ್ಯೂರಿಂಗ್ ಆದಮೇಲೆ ಒಂದು ವಾರದ ನಂತರ ಉಳಿದ ಅರ್ಧಭಾಗದ ಕೆಲಸ ಆರಂಭವಾಗಲಿದೆ. ಆಗ ವಾಣಿ ವಿಲಾಸ ವಾಟರ್ ವರ್ಕ್ಸ್ ಬಳಿ ರಸ್ತೆಗೆ ಅಡ್ಡಲಾಗಿ ಬ್ಯಾರಿಕೇಡ್ ಅಳವಡಿಸಿ ದಾಸಪ್ಪ ಸರ್ಕಲ್ ಕಡೆಗೆ ಬರುವ ವಾಹನಗಳ ಸಂಚಾರ ಬಂದ್ ಮಾಡಲಾಗುವುದು. ಹಾಗೆಯೇ ಈಗ ಬಂದ್ ಆಗಿರುವ ದಾಸಪ್ಪ ಸರ್ಕಲ್ ಬಳಿ ಬ್ಯಾರಿಕೇಡ್ ತೆಗೆದು ಕೆಆರ್‌ಎಸ್ ರಸ್ತೆಯಲ್ಲಿ ಒಂಟಿಕೊಪ್ಪಲ್ ಕಡೆಗೆ ಸಂಚಾರವನ್ನು ಮುಕ್ತಗೊಳಿಸಲಾಗುತ್ತದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀನಿವಾಸ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕಾಮಗಾರಿಗಳಲ್ಲಿ ನಾವು ಪ್ರೀಕ್ಯಾಸ್ಟಿಂಗ್ ಕಾಂಕ್ರೀಟ್ ಬಳಸಿ ವೇಗವಾಗಿ ಕೆಲಸ ಮುಗಿಸಬಹುದು. ಆದರೆ, ಇದು ಒಂದೇ ಕಾಮಗಾರಿಯಾಗಿರುವುದರಿಂದ ಕಾರ್ಮಿಕರ ಮೂಲಕವೇ ಕೆಲಸ ಮಾಡಬೇಕಾಗಿರುವ ಕಾರಣ ಹಾಗೂ ಕನಿಷ್ಟ 15 ದಿನ ಕ್ಯೂರಿಂಗ್ ಮಾಡಬೇಕಾಗಿರುವುದರಿಂದ ವಿಳಂಬವಾಗಿದೆ. ಇನ್ನು ಒಂದೂವರೆ ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ಕೆಆರ್‌ಎಸ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುವುದೆಂದು ತಿಳಿಸಿದರು.

ಬಸ್ ಸಂಚರಿಸುವ ಅತೀ ದಟ್ಟಣೆಯ ಕೆಆರ್‌ಎಸ್ ರಸ್ತೆಯಲ್ಲಿ ಕಾಮಗಾರಿಗಾಗಿ ತಿಂಗಳುಗಟ್ಟಲೇ ರಸ್ತೆ ಬಂದ್ ಮಾಡಿದಲ್ಲಿ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಲಿದ್ದು ವಾಹನ ಸವಾರರು ಪರದಾಡುವಂತಾಗುತ್ತದೆ. ಕಳೆದ ನಾಲ್ಕು ವರ್ಷಗಳ ಹಿಂದೆ ಕೆಆರ್‌ಎಸ್ ರಸ್ತೆಯ ದಾಸಪ್ಪ ವೃತ್ತದ ಸಮೀಪ ರೈಲ್ವೆ ಅಂಡರ್ ಬ್ರಿಡ್ಜ್ ಪೈಪ್‌ಲೈನ್ ಕಾಮಗಾರಿಯೊಂದನ್ನು ಕೈಗೊಂಡಿದ್ದು, ವರ್ಷಗಟ್ಟಲೇ ಅದು ಪೂರ್ಣಗೊಳ್ಳದ ಕಾರಣ ವಾಹನ ಸವಾರರು ಪರದಾಡುವಂತಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್



ಇತ್ತೀಚೆಗೆ ಹಂಸಿ ಶಿವದಾಸ್ ಎನ್.ಜಿ–ಡಬ್ಲ್ಯುಕೆಎಫ್ ಜಡ್ಜ್ ಇಂಡಿಯನ್ ರೆಪ್ರೆಸೆಂಟೇಟಿವ್ ಐಎಂಎಸ್‌ಕೆಎ ಮತ್ತು ಆರ್‌ಸಿ ಛೇರ್ಮನ್ ಎಕೆಎಸ್‌ಕೆಎ, ಕರ್ನಾಟಕ ವತಿಯಿಂದ ಮೈಸೂರಿನ ಟೆರೆಷಿಯನ್ ಕಾಲೇಜಿನಲ್ಲಿ ನಡೆದ 32ನೇ ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಎಸ್‌ಎಂಕೆ ಮಾರ್ಷಿಯಲ್ ಆರ್ಟ್ಸ್ ಅಕಾಡೆಮಿ 13 ಪ್ರಥಮ ಬಹುಮಾನ, 15 ದ್ವಿತೀಯ ಬಹುಮಾನ ಮತ್ತು 22 ತೃತೀಯ ಬಹುಮಾನ ಮತ್ತು ಟೀಂ ಚಾಂಪಿಯನ್‌ಶಿಪ್ ಪಡೆದುಕೊಂಡಿತು. ಈ ವೇಳೆ ವಿಜೇತರೊಂದಿಗೆ ಹೆಡ್ ಕೋಚ್ ಮೊಹಮ್ಮದ್ (ಎಸ್‌ಎಂಕೆ ಅಕಾಡೆಮಿ ಅಂಡ್ ಫಿಟ್‌ನೆಸ್ ಸ್ಟುಡಿಯೋ ಸಂಸ್ಥಾಪಕ), ಶಂಕರ್ ಪ್ರಸಾದ್, ಆರ್.ಪಿ.ಕುಶಾಲ್, ಸೈಯದ್ ಅಫಾನ್ ಆಲಿ, ನಿಖಿಲ್ ಬ್ರಿಟ್ಟೋ ಅವರನ್ನು ಚಿತ್ರದಲ್ಲಿ ಕಾಣಬಹುದು.

ವೆಂಕಟೇಶ್ವರ ಧ್ಯಾನ ಕೇಂದ್ರದಿಂದ ಇಂದು ಬೃಹತ್ ಪಾದಯಾತ್ರೆ

ಮೈಸೂರು: ಶ್ರೀಮನ್ ಮಧ್ವಾಚಾರ್ಯ ಮೂಲಮಹಾ ಸಂಸ್ಥಾನ ಶ್ರೀ ಉತ್ತರಾದಿ ಮಠದ ಶ್ರೀರಾಮಪುರ ಶಾಖೆಯಾದ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರವು ಹನುಮದ್ ವ್ರತದ ಅಂಗವಾಗಿ ಡಿ.3ರಂದು ಹನುಮ ಭಕ್ತರಿಂದ ಬೃಹತ್ ಪಾದಯಾತ್ರೆ ಹಮ್ಮಿಕೊಂಡಿದೆ.

ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದಿಂದ ಬೆಳಗ್ಗೆ 7ಕ್ಕೆ ಆರಂಭವಾಗುವ ಪಾದಯಾತ್ರೆ 9 ಗಂಟೆಗೆ ಅರಮನೆ ಆವರಣದ ಕೋಟೆ ಆಂಜನೇಯ ದೇವಾಲಯದಲ್ಲಿ ಸಮಾಪ್ತಿಗೊಳ್ಳಲಿದೆ. ಅಲ್ಲಿ ಬೆಳಗ್ಗೆ 9ಕ್ಕೆ ಆಂಜನೇಯ ಸ್ವಾಮಿಗೆ ಕ್ಷೀರಾಭಿಷೇಕ ಮತ್ತು ಮಧು ಅಭಿಷೇಕ ನೆರವೇರಿಸಲಾಗುತ್ತದೆ.

ಸಾಗುವ ಮಾರ್ಗ: ಶ್ರೀರಾಮಪುರದ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದಿಂದ ಬೆಳಗ್ಗೆ 7ಕ್ಕೆ ಹೊರಡುವ ಪಾದಯಾತ್ರೆ ಎಚ್.ಡಿ. ಕೋಟೆ ಮುಖ್ಯರಸ್ತೆ, ಎನ್‌ಐಇ ಕಾಲೇಜು ರಸ್ತೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, ನಂಜುಮಳಿಗೆ ವೃತ್ತ, ಅಗ್ರಹಾರದ 101 ಗಣಪತಿ ದೇಗುಲ ಮಾರ್ಗವಾಗಿ ಕೋಟೆ ಆಂಜನೇಯ ದೇಗುಲ ತಲುಪಲಿದೆ.

ಈ ಸಂದರ್ಭ ವಿವಿಧ ವಾದ್ಯಮೇಳ, ಹರಿನಾಮ ಸಂಕೀರ್ತನೆ, ಭಜನೆ, ನೃತ್ಯ ಮತ್ತು ಗಾಯನಗಳನ್ನು ಹಲವು ಕಲಾವಿದರಿಂದ ಆಯೋಜಿಸಲಾಗಿದೆ. ಭಕ್ತರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಧ್ಯಾನ ಕೇಂದ್ರದ ಪ್ರಧಾನ ವ್ಯವಸ್ಥಾಪಕ ಪಂಡಿತ ಹೇಮಂತ ಆಚಾರ್ಯ ಗುಡಿ ತಿಳಿಸಿದ್ದಾರೆ. ವಿವರಗಳಿಗೆ ಎ.ಎನ್. ರಮೇಶ್ 94490 01428 ಅವರನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಇನ್ಮುಂದೆ ಆಯಾ ವರ್ಷವೇ 'ಏಕಲವ್ಯ ಪ್ರಶಸ್ತಿ' ಪ್ರದಾನ: ಸಿಎಂ ಘೋಷಣೆ



ಏಕಲವ್ಯ, ಜೀವಮಾನ ಸಾಧನೆ, ಕರ್ನಾಟಕ ಕ್ರೀಡಾ ರತ್ನ ಹಾಗೂ 2023ರ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗಳನ್ನು 48 ಮಂದಿ ಕ್ರೀಡಾಪಟುಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಪ್ರದಾನ ಮಾಡಿದರು.

ಬೆಂಗಳೂರು: 2022 ಮತ್ತು 2023ನೇ ಸಾಲಿನ ಏಕಲವ್ಯ, ಜೀವಮಾನ ಸಾಧನೆ, ಕರ್ನಾಟಕ ಕ್ರೀಡಾ ರತ್ನ ಹಾಗೂ 2023ರ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗಳನ್ನು 48 ಮಂದಿ ಕ್ರೀಡಾಪಟುಗಳಿಗೆ ಪ್ರದಾನ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ರೀಡಾಪಟುಗಳನ್ನು ಸನ್ಮಾನಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸಿದ್ದ 2022 ಮತ್ತು 2023ನೇ ಸಾಲಿನ ಏಕಲವ್ಯ, ಜೀವಮಾನ ಸಾಧನೆ, ಕರ್ನಾಟಕ ಕ್ರೀಡಾರತ್ನ ಹಾಗೂ 2023ರ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಮಾತನಾಡಿದ್ದು, ಈ ವೇಳೆ ಇನ್ನು ಮುಂದೆ ಆಯಾ ವರ್ಷವೇ ಏಕಲವ್ಯ ಪ್ರಶಸ್ತಿಗಳನ್ನು ನೀಡುವುದಾಗಿ ಘೋಷಣೆ ಮಾಡಿದರು.

ಎರಡು ಸಾಲಿನ ಏಕಲವ್ಯ ಪ್ರಶಸ್ತಿಗಳನ್ನು ಒಟ್ಟು 30 ಜನರಿಗೆ ನೀಡಲಾಗಿದ್ದು, 4 ಲಕ್ಷಗಳ ನಗದು ಬಹುಮಾನವನ್ನು ಪ್ರಶಸ್ತಿ ಒಳಗೊಂಡಿದೆ. ನಗದು ಬಹುಮಾನದ ಮೊತ್ತವನ್ನು ನನ್ನ ಅವಧಿಯಲ್ಲಿಯೇ ಹೆಚ್ಚಿಸಲಾಗಿದೆ. ಮುಂದಿನ ವರ್ಷದಿಂದ ಆಯಾ ವರ್ಷದ ಪ್ರಶಸ್ತಿಗಳನ್ನು ಆಯಾ ವರ್ಷವೇ ನೀಡಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆಂದು ಹೇಳಿದರು.

ಉತ್ತಮ ಕ್ರೀಡಾಪಟುಗಳನ್ನು ರಾಜ್ಯಕ್ಕೆ ನೀಡುವ ತರಬೇತುದಾರರಿಗೆ ಒಟ್ಟು 9 ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುತ್ತಿದ್ದು, 3 ಲಕ್ಷ ರೂ.ಗಳ ನಗದು ಬಹುಮಾನವನ್ನು ಒಳಗೊಂಡಿದೆ. ಗ್ರಾಮೀಣ ಮತ್ತು ಪಾರಂಪರಿಕ ಕ್ರೀಡೆಗಳ ಸಾಧಕರನ್ನು ಗುರುತಿಸಿ ಒಟ್ಟು 15 ಕ್ರೀಡಾರತ್ನ ಪ್ರಶಸ್ತಿಗಳನ್ನು ನೀಡಲಾಗಿದ್ದು, 2 ಲಕ್ಷ ರೂ.ಗಳ ನಗದು ಬಹುಮಾನವನ್ನು ಒಳಗೊಂಡಿದೆ. ರಾಜ್ಯದ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ಖಾಸಗಿ ಕ್ಷೇತ್ರದ ಸಂಸ್ಥೆಗಳನ್ನು ಗೌರವಿಸಲು ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯನ್ನು ನೀಡಲಾಗಿದೆ ಎಂದರು.

ಗ್ರಾಮೀಣ ಮತ್ತು ಪಾರಂಪರಿಕ ಕ್ರೀಡೆಗಳ ಸಾಧಕರನ್ನು ಗುರುತಿಸಿ ಒಟ್ಟು 15 ಕ್ರೀಡಾರತ್ನ ಪ್ರಶಸ್ತಿಗಳನ್ನು ನೀಡಲಾಗಿದ್ದು, ರೂ.2 ಲಕ್ಷಗಳ ನಗದು ಬಹುಮಾನ ಒಳಗೊಂಡಿದೆ. ರಾಜ್ಯದ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ಖಾಸಗಿ ಕ್ಷೇತ್ರದ ಸಂಸ್ಥೆಗಳನ್ನು ಗೌರವಿಸಲು ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ನೀಡಲಾಗಿದೆ. ಕರ್ನಾಟಕದ ಕ್ರೀಡಾ ಪಟುಗಳಿಗೆ ಗೆಲ್ಲುವ ಸಾಧ್ಯತೆಗಳಿವೆ, ಪ್ರಯತ್ನ ಮಾಡಬೇಕಷ್ಟೆ, 2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಒಲಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲಿರುವ 60 ಜನರನ್ನು ಗುರುತಿಸಲಾಗಿದ್ದು, ಪ್ರತಿ ವರ್ಷ 10 ಲಕ್ಷ ರೂ. ಗಳನ್ನು ತರಬೇತಿಯ ಅವಧಿಯಲ್ಲಿಯೇ ನೀಡಲಾಗುತ್ತದೆ. ಕ್ರೀಡಾಪಟುಗಳು ಯಾವುದಾದರೂ ಒಂದು ಕ್ರೀಡೆಯನ್ನು ಆಯ್ಕೆ ಮಾಡಿಕೊಂಡು ಅದರಲ್ಲಿಯೇ ಸಂಪೂರ್ಣ ಏಕಾಗ್ರತೆ, ಗುರಿಯಿಟ್ಟುಕೊಂಡು ಸಾಧನೆ ಮಾಡಬೇಕು. ಉತ್ತಮ ಸಾಧನೆ ಮಾಡುವ ಕ್ರೀಡಾಪಟುಗಳಿಗೆ ನಮ್ಮ ಸರ್ಕಾರ ಎಲ್ಲಾ ರೀತಿಯ ಪ್ರೋತ್ಸಾಹ ನೀಡಲಿದೆ. ಒಲಂಪಿಕ್ಸ್ ಹಾಗೂ ಕಾಮನ್ ವೆಲ್ತ್ ಕ್ರೀಡೆಗಳಲ್ಲಿ ಗೆದ್ದವರಿಗೆ ನಗದು ಬಹುಮಾನ ನೀಡಲಾಗುತ್ತಿದೆ. ಕರ್ನಾಟಕ ಉತ್ತಮ ಕ್ರೀಡಾಪಟುಗಳನ್ನು ಈವರೆಗೆ ರೂಪಿಸಿದೆ. ಹಾಕಿಯಂತಹ ಕ್ರೀಡೆಗಳಲ್ಲಿ ಸಾಧನೆ ಮಾಡಿದವರು ಇದ್ದಾರೆ. ಅಥ್ಲೆಟಿಕ್ಸ್‌ನಲ್ಲಿಯೂ ಸಾಧನೆ ಮಾಡಬೇಕು ಎಂದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ವಿಧಾನಪರಿಷತ್ ಸದಸ್ಯ ಹಾಗೂ ಕೆಓಎ ಅಧ್ಯಕ್ಷ ಕೆ.ಗೋವಿಂದರಾಜ್, ಶಾಸಕ ರಿಜ್ವಾನ್ ಅರ್ಷದ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರಧಾನ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್, ಕರ್ನಾಟಕ ಕ್ರೀಡಾ ಪ್ರಾಧಿಕಾರ ಉಪಾಧ್ಯಕ್ಷ ಅರುಣ್ ಮಾಚಯ್ಯ ಹಾಜರಿದ್ದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಚೇತನ್ ಆರ್. ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಆಳಂದ ಕ್ಷೇತ್ರಕ್ಕೆ ಬನ್ನಿ ಮತಗಳ್ಳತನ ಸಾಬೀತುಪಡಿಸ್ತೇನೆ




ಬಿ.ಆರ್.ಪಾಟೀಲ್

ಕಲಬುರಗಿ: ಆಳಂದ ಕ್ಷೇತ್ರಕ್ಕೆ ಬನ್ನಿ ಮತಗಳ್ಳತನ ಸಾಬೀತುಪಡಿಸುತ್ತೇನೆಂದು ಮತಗಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಮೇಲೆ ಆರೋಪ ಮಾಡುವುದು ಸರಿಯಲ್ಲ ಎಂದು ರಾಹುಲ್ ಗಾಂಧಿಗೆ ಪತ್ರ ಬರೆದಿರುವ ನ್ಯಾ. ಎಸ್.ಎನ್. ಧಿಂಗ್ರಾ, ನಿರ್ಮಲ್ ಕೌರ್ ಸೇರಿದಂತೆ 272 ಬುದ್ಧಿಜೀವಿಗಳಿಗೆ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ, ಆಳಂದ ಕ್ಷೇತ್ರದ ಶಾಸಕ ಬಿ.ಆರ್. ಪಾಟೀಲ್ ಸವಾಲು ಹಾಕಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮತಗಳ್ಳತನ ಆರೋಪದ ಬಗ್ಗೆ ಪತ್ರ ಬರೆದಿರುವ ಬುದ್ಧಿಜೀವಿಗಳು, ನಿವೃತ್ತ ನ್ಯಾಯಾಧೀಶರು ನಮ್ಮ ತಾಲೂಕಿನ ಸ್ಥಳಗಳಿಗೆ ಭೇಟಿ ನೀಡಲಿ, ಹೇಗೆ ಮತಗಳ್ಳತನ ಆಗಿದೆ, ಮತಗಳ್ಳತನಕ್ಕೆ ಮಾಡಿರುವ ತಂತ್ರಗಳೆಲ್ಲವೂ ಖುದ್ದಾಗಿ ತಿಳಿದುಕೊಳ್ಳಲಿ, ಇದಕ್ಕೆ ಬೇಕಾಗುವ ಎಲ್ಲಾ ರೀತಿಯ ಖರ್ಚು ವೆಚ್ಚಗಳನ್ನು ಭರಿಸಲು ನಾನು ಸಿದ್ಧನಿದ್ದೇನೆಂದು ಅವರು ಸವಾಲು ಹಾಕಿದರು.

ದೇಶ - ವಿದೇಶ


ಸುರಂಗ ಮಾರ್ಗದಲ್ಲಿ ಸಿಲುಕಿದ ಚೆನ್ನೈ ಮೆಟ್ರೋ ರೈಲು: ಪ್ರಯಾಣಿಕರ ಪರದಾಟ!



ಚೆನ್ನೈ: ಮೆಟ್ರೋ ರೈಲು ಸುರಂಗಮಾರ್ಗದಲ್ಲಿ ಸಿಲುಕಿಕೊಂಡ ಪರಿಣಾಮ ಮೆಟ್ರೋ ಮೂಲಕ ವಿಮ್ಕೊ ನಗರ ಡಿಪೋ ಕಡೆಗೆ ಪ್ರಯಾಣಿಸುವ ಜನರು ರೈಲ್ವೆ ಹಳಿಯಲ್ಲಿ ನಡೆದುಕೊಂಡು ಹೋದ ಘಟನೆ ಚೆನ್ನೈನಲ್ಲಿ ನಡೆದಿದೆ.


ವಿಮ್ಕೊ ನಗರ ಡಿಪೋ ಮತ್ತು ಚೆನ್ನೈ ಅಂತ ರಾಷ್ಟ್ರೀಯ ವಿಮಾನ ನಿಲ್ದಾಣದ ನಡುವೆ ಚಲಿಸುವ ಚೆನ್ನೈ ಮೆಟ್ರೋ ರೈಲಿನ ಬ್ಲೂ ಲೈನ್‌ನಲ್ಲಿ ಮಂಗಳವಾರ ಮುಂಜಾನೆ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು. ಸೆಂಟ್ರಲ್ ಮೆಟ್ರೋ ಮತ್ತು ಹೈಕೋರ್ಟ್ ನಿಲ್ದಾಣದ ನಡುವಿನ ಸುರಂಗಮಾರ್ಗದಲ್ಲಿ ರೈಲು ಸಿಕ್ಕಿಹಾಕಿಕೊಂಡಿತ್ತು. ಇದರಿಂದ ಪ್ರಯಾಣಿಕರು ಪರದಾಡುವಂತಾಗಿತ್ತು. ಎಕ್ಸ್ ಖಾತೆಯಲ್ಲಿ ಘಟನೆಗೆ ಸಂಬಂಧಿಸಿದಂತೆ ಹಂಚಿಕೊಂಡ ವೀಡಿಯೋಗಳಲ್ಲಿ, ರೈಲು ಸುರಂಗಮಾರ್ಗದಲ್ಲಿ ಸಿಲುಕಿಕೊಂಡಿದ್ದರಿಂದ ಆತಂಕಗೊಂಡಿದ್ದ ಪ್ರಯಾಣಿಕರು ರೈಲಿನಿಂದ ಇಳುಕಲು ಪ್ರಯತ್ನಿಸುತ್ತಿರುವುದು ಸೆರೆಯಾಗಿದೆ. ಸುಮಾರು 500 ಮೀಟರ್ ದೂರದಲ್ಲಿರುವ ಹತ್ತಿರದ ಮೆಟ್ರೋ ನಿಲ್ದಾಣವಾದ ಹೈಕೋರ್ಟ್ ನಿಲ್ದಾಣಕ್ಕೆ ನಡೆದುಕೊಂಡು ಹೋಗುವಂತಾಯಿತು ಎಂದು ಪ್ರಯಾಣಿಕರು ಅಳಲು ತೋಡಿಕೊಂಡಿದ್ದಾರೆ.

ಪಾಕ್ ಅರೆಸೇನಾ ಕೇಂದ್ರ ಕಚೇರಿ ಮೇಲೆ ಮಹಿಳಾ ಆತ್ಮಾಹುತಿ ಬಾಂಬ್ ದಾಳಿ; 6 ಉಗ್ರರು ಸಾವು



ಕರಾಚಿ: ಪಾಕಿಸ್ತಾನದ ಪ್ರಕ್ಷುಬ್ಧ ಬಲೂಚಿಸ್ತಾನ್ ಪ್ರಾಂತ್ಯದಲ್ಲಿರುವ ಅರೆಸೇನಾ ಪಡೆಯ ಪ್ರಧಾನ ಕಚೇರಿಯ ಪ್ರವೇಶ ದ್ವಾರದಲ್ಲಿ ನಿಷೇಧಿತ ಬಲೂಚಿಸ್ತಾನ್ ಲಿಬರೇಶನ್ ಆರ್ಮಿ(ಬಿಎಲ್‌ಎ)ಯ ಮಹಿಳಾ ಆತ್ಮಹುತಿ ಬಾಂಬರ್ ಒಬ್ಬಳು ತನ್ನನ್ನು ತಾನು ಸ್ಫೋಟಿಸಿಕೊಂಡಿದ್ದು, ಬಳಿಕ ಸುದೀರ್ಘ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಆರು ಉಗ್ರರನ್ನು ಹೊಡೆದುರುಳಿಸಲಾಗಿದೆ ಎಂದು ಭದ್ರತಾ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಭಾನುವಾರ ರಾತ್ರಿ ಚಾಗೈ ಜಿಲ್ಲೆಯ ನೊಕುಂಡಿ ಪಟ್ಟಣದಲ್ಲಿರುವ ಫ್ರಾಂಟಿಯರ್ ಕಾರ್ಪ್ಸ್(ಎಫ್‌ಸಿ) ಪ್ರಧಾನ ಕಚೇರಿಯ ಮುಖ್ಯ ದ್ವಾರದಲ್ಲಿ ದಾಳಿಕೋರ ಮಹಿಳೆ ತನ್ನನ್ನು ತಾನು ಸ್ಫೋಟಿಸಿಕೊಂಡಿದ್ದಾಳೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಂತರ ಬಾಂಬರ್ ಮಹಿಳೆಯನ್ನು ಜಿನಾಟಾ ರಫೀಕ್ ಎಂದು ಗುರುತಿಸಿ ಅವರ ಫೋಟೋವನ್ನು ಬಿಡುಗಡೆ ಮಾಡಿದೆ. ಸ್ಫೋಟದ ನಂತರ, ಆರು ಉಗ್ರರು ಪ್ರಧಾನ ಕಚೇರಿಗೆ ನುಗ್ಗಲು ಯತ್ನಿಸಿದರು. ತಕ್ಷಣ ಎಚ್ಚೆತ್ತ ಭದ್ರತಾ ಪಡೆಗಳು ಪ್ರವೇಶದ್ವಾರದ ಬಳಿಯೇ ಮೂವರನ್ನು ಗುಂಡಿಕ್ಕಿ ಹತ್ಯೆ ಮಾಡಿದರು. ಉಳಿದ ಮೂವರು ಎಫ್‌ಸಿ ಸಿಬ್ಬಂದಿ ಸುತ್ತುವರಿಯುವ ಮೊದಲು ಆವರಣ ಪ್ರವೇಶಿಸುವಲ್ಲಿ ಯಶಸ್ವಿಯಾದರು. ನಂತರ ಆ ಮೂವರನ್ನು ಹತ್ಯೆ ಮಾಡಲಾಗಿದೆಎಂದು ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ.


15 ದಿನದಲ್ಲೇ ಕೋಟಿ ಒಡೆಯನಾದ ಅಯ್ಯಪ್ಪ!



ಜೈಪುರ: ಶಬರಿಮಲೆ ಅಯ್ಯಪ್ಪ ಸ್ವಾಮಿ ದೇಗುಲದ ವಾರ್ಷಿಕ ಮಂಡಲ–ಮಕರವಿಳಕ್ಕು ಯಾತ್ರೆ ಈಗಾಗಲೇ ಆರಂಭವಾಗಿದೆ. ನಿತ್ಯ ಸಾವಿರಾರು ಭಕ್ತರು ಅಯ್ಯಪ್ಪ ಸ್ವಾಮಿ ದರ್ಶನ ಪಡೆಯುತ್ತಿದ್ದಾರೆ. ಇದೀಗ ಶಬರಿಮಲೆ ದೇಗುಲದಲ್ಲಿ ಹುಂಡಿ ಎಣಿಕೆ ಕಾರ್ಯ ನಡೆದಿದ್ದು, ಕೋಟ್ಯಂತರ ರೂಪಾಯಿ ಕಾಣಿಕೆ ಸಂಗ್ರಹವಾಗಿದೆ.


ಈ ವರ್ಷ ಯಾತ್ರೆ ಆರಂಭವಾದಾಗಿನಿಂದ ನ.30ರವರೆಗೆ 1.3 ಮಿಲಿಯನ್ ಯಾತ್ರಿಕರು ಭೇಟಿ ನೀಡಿದ್ದಾರೆ. ಅಯ್ಯಪ್ಪನ ವಾರ್ಷಿಕ ಯಾತ್ರೆಯ ಮೊದಲ 15 ದಿನದಲ್ಲೇ ಹುಂಡಿಗೆ 92 ಕೋಟಿ ರೂ. ಹರಿದು ಬಂದಿದೆ. ಈ ಕುರಿತು ಶಬರಿಮಲೆ ದೇಗುಲದ ಆಡಳಿತ ಮಂಡಳಿ ಮಾಹಿತಿ ನೀಡಿದ್ದು, ಕಳೆದ ವರ್ಷ ಇದೇ ಅವಧಿಯಲ್ಲಿ ದೇಗುಲಕ್ಕೆ 69 ಕೋಟಿ ರೂ. ಆದಾಯ ಬಂದಿತ್ತು. ಈ ಸಲ ಶೇ.33ರಷ್ಟು ಹೆಚ್ಚಳದೊಂದಿಗೆ 92 ಕೋಟಿ ರೂ. ಸಂಗ್ರಹವಾಗಿದೆ. ಇದೇ ಅವಧಿಯಲ್ಲಿ ಕಳೆದ ವರ್ಷ ಸಂಗ್ರಹವಾಗಿದ್ದ ಮೊತ್ತಕ್ಕಿಂತ ಇದು 23 ಕೋಟಿ ರೂ. ಅಧಿಕ. ಅದರಲ್ಲಿ 47 ಕೋಟಿ ರೂ. ಅರವಣ ಮಾರಾಟದಿಂದ ಸಂಗ್ರಹವಾಗಿದೆ. ಕಳೆದ ಬಾರಿ ಅರವಣ ಮಾರಾಟದಿಂದ 32 ಕೋಟಿ ರೂ. ಸಂಗ್ರಹವಾಗಿತ್ತು.

ಎಕ್ಸ್‌ಪೈರಿ ಆದ ಸಾಮಗ್ರಿಗಳನ್ನು ಶ್ರೀಲಂಕಾಗೆ ಕಳುಹಿಸಿದ ಪಾಕ್!



ಕೊಲೊಂಬೋ: ಸದಾ ಒಂದಿಲ್ಲೊಂದು ಎಡವಟ್ಟು ಮಾಡುವ ಪಾಕಿಸ್ತಾನ ಇದೀಗ ಮತ್ತೊಂದು ವಿವಾದಕ್ಕೆ ಕಾರಣವಾಗಿದೆ. ದಿತ್ವಾ ಚಂಡಮಾರುತದಿಂದ ತತ್ತರಿಸುತ್ತಿರುವ ಶ್ರೀಲಂಕಾಗೆ ಪಾಕಿಸ್ತಾನದಿಂದ ಅವಧಿ ಮೀರಿದ ಮೆಡಿಕಲ್ ಕಿಟ್ ಮತ್ತು ಆಹಾರ ಪದಾರ್ಥಗಳನ್ನು ನೀಡಿದೆ ಎಂಬ ಬಹು ದೊಡ್ಡ ಆರೋಪ ಕೇಳಿಬಂದಿದ್ದು, ಇದಕ್ಕೆ ಸಬಂಧಿಸಿದಂತೆ ಕೆಲ ಫೋಟೋಗಳು ವೈರಲ್ ಆಗುತ್ತಿವೆ. ಇದು ಪಾಕಿಸ್ತಾನವನ್ನು ಮುಜುಗರಕ್ಕೀಡು ಮಾಡಿದ್ದು, ಶ್ರೀಲಂಕಾ ಮತ್ತು ವಿದೇಶಾಂಗ ಇಲಾಖೆಗಳಲ್ಲಿ ಕಳವಳ ಹುಟ್ಟುಹಾಕಿದೆ. ದಿತ್ವಾ ಚಂಡಮಾರುತಕ್ಕೆ ಶ್ರೀಲಂಕಾ ನಲುಗಿ ಹೋಗಿದ್ದು, ಜನರ ಬದುಕು ಬೀದಿಪಾಲಾಗಿದೆ. ಈ ಹಿನ್ನೆಲೆ ಭಾರತ ಸೇರಿದಂತೆ ಹಲವು ರಾಷ್ಟ್ರಗಳು ದ್ವೀಪ ರಾಷ್ಟ್ರಕ್ಕೆ ಸಹಾಯ ಹಸ್ತ ಚಾಚಿವೆ. ಸಹಾಯ ಮಾಡುವ ನೆಪ ತೋರಿರುವ ಪಾಕಿಸ್ತಾನ ಶ್ರೀಲಂಕಾಗೆ ಕಳುಹಿಸಿದ್ದ ವೈದ್ಯಕೀಯ ಕಿಟ್, ಆಹಾರ ಸರಬರಾಜು ಮತ್ತು ಅಗತ್ಯ ವಸ್ತುಗಳನ್ನು ಕಳುಹಿಸಿತ್ತು. ಆದರೆ ಅದೆಲ್ಲ ಅವಧಿ ಮೀರಿದ ವಸ್ತುಗಳು ಎಂದು ತಿಳಿದುಬಂದಿದೆ. ಇದು ಪಾಕಿಸ್ತಾನಕ್ಕೆ ಮತ್ತೊಂದು ರಾಜತಾಂತ್ರಿಕ ನಿಲುವನ್ನು ಎದುರಿಸುವ ಸಂಕಷ್ಟಕ್ಕೆ ಸಿಲುಕಿ ಸಿದೆ. ಇದು ಪಾಕಿಸ್ತಾನವನ್ನು ಮುಜುಗರಕ್ಕೀಡು ಮಾಡಿದ್ದು, ಶ್ರೀಲಂಕಾ ಮತ್ತು ವಿದೇಶಾಂಗ ಇಲಾಖೆಗಳಲ್ಲಿ ಕಳವಳ ಹುಟ್ಟುಹಾಕಿದೆ.

ಇಂಡಿಗೋ ವಿಮಾನಕ್ಕೆ ಬಾಂಬ್ ಬೆದರಿಕೆ: ಮುಂಬೈನಲ್ಲಿ ತುರ್ತು ಭೂ ಸ್ಪರ್ಶ!



ಹೈದರಾಬಾದ್: ಕುವೈತ್‌ನಿಂದ ಹೈದರಾಬಾದ್‌ಗೆ ಆಗಮಿಸುತ್ತಿದ್ದ ಇಂಡಿಗೋ ವಿಮಾನಕ್ಕೆ ಬಾಂಬ್ ಬೆದರಿಕೆ ಇಮೇಲ್ ಸಂದೇಶ ರವಾನೆಯಾದ ಹಿನ್ನೆಲೆಯಲ್ಲಿ ವಿಮಾನವನ್ನು ಮುಂಬೈಗೆ ತಿರುಗಿಸಲಾಗಿದ್ದು, ಸುರಕ್ಷಿತವಾಗಿ ಇಳಿಸಲಾಗಿದೆ. ವಿಮಾನ ಹೈದರಾಬಾದ್‌ನಲ್ಲಿ ಇಳಿದ ಬಳಿಕ ರಿಮೋಟ್ ಕಂಟ್ರೋಲ್ಡ್ ಸ್ಫೋಟಕ ಸಾಧನಗಳನ್ನು ಬಳಸಿಕೊಂಡು ದಾಳಿ ನಡೆಸುತ್ತೇವೆ ಎಂಬ ಬೆದರಿಕೆ ಸಂದೇಶ ಹೈದರಾಬಾದ್‌ನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿತ್ತು. ಈ ಬೆನ್ನಲ್ಲೇ ಮುಂಜಾಗ್ರತಾ ಕ್ರಮವಾಗಿ ವಿಮಾನವನ್ನು ಮುಂಬೈನಲ್ಲಿ ಲ್ಯಾಂಡ್ ಮಾಡಲಾಗಿದೆ. ಇಂಡಿಗೋ 6ಇ1234 ವಿಮಾನದಲ್ಲಿ 228 ಪ್ರಯಾಣಿಕರು ಮತ್ತು 6 ಸಿಬ್ಬಂದಿ ಇದ್ದರು. ಬೆಳಗ್ಗೆ ಸುಮಾರು 6.30ಕ್ಕೆ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ತುರ್ತು ಭೂಸ್ಪರ್ಶ ಮಾಡಿದೆ. ಬೆದರಿಕೆ ಇಮೇಲ್ ಬಂದ ನಂತರ, ಅಧಿಕಾರಿಗಳು ವಿಮಾನವನ್ನು ಮುಂಬೈಗೆ ತಿರುಗಿಸಲು ನಿರ್ಧರಿಸಿದರು. ಅಲ್ಲಿ ವಿಮಾನ ಸುರಕ್ಷಿತವಾಗಿ ಇಳಿದಿದೆ.

ವಿಮಾನ ಲ್ಯಾಂಡ್ ಆದ ಬಳಿಕ ಪ್ರಯಾಣಿಕರನ್ನು ಸುರಕ್ಷಿತವಾಗಿ ಇಳಿಸಿ, ಅಜ್ಞಾತ ಸ್ಥಳದಲ್ಲಿ ಭದ್ರತಾ ತಪಾಸಣೆ ನಡೆಸಲಾಯಿತು. ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳಗಳು ಸೇರಿದಂತೆ ಸಂಪೂರ್ಣ ಭದ್ರತಾ ತಂಡ ಪರಿಶೀಲನೆ ನಡೆಸಿದೆ.

ಮೈಸೂರು ಮಿತ್ರ ಬುಧವಾರ 3 ಡಿಸೆಂಬರ್ 2025

ಕಾಫಿಯ ಉತ್ಪಾದನೆಯ ಗುಣಮಟ್ಟವನ್ನೂ ವೃದ್ಧಿಸಿ



ಭಾರತೀಯ ಕಿಸಾನ್ ಸಂಘದ ವತಿಯಿಂದ ಕಾಫಿ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಮಾಲೋಚನಾ ಸಭೆ ನಡೆಸಿತು.

ನಾಪೋಕ್ಲು, ಡಿ.2(ದುಗ್ಗಳ)–ಕಾಫಿ ಬೆಳೆಗಾರರು ಕಾಫಿಯ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆ ಗುಣಮಟ್ಟವನ್ನು ವೃದ್ಧಿಸಬೇಕು. ಆಗ ಬೆಳೆಗಾರರು ಆರ್ಥಿಕವಾಗಿ ಸಬಲರಾಗಲು ಸಾಧ್ಯ ಎಂದು ಕಾಫಿ ರಾಷ್ಟ್ರೀಯ ಪಾನೀಯ ಹೋರಾಟ ಸಮಿತಿ ಸಂಚಾಲಕ ಮಾಚಿಮಾಡ ರವೀಂದ್ರ ಹೇಳಿದರು.

ಭಾರತೀಯ ಕಿಸಾನ್ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ನಾರಾಯಣ ಸ್ವಾಮಿ ಮಾತನಾಡಿ ರೈತರು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ಸಿಗಬೇಕು. ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಸಿಕ್ಕಬೇಕಾದರೆ ಉತ್ತಮ ಸಂಘಟನೆಯಿಂದ ಮಾತ್ರ ಸಾಧ್ಯ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ನಾಪೋಕ್ಲು ಬೆಳೆಗಾರರ ಹೋರಾಟ ಸಮಿತಿ ಅಧ್ಯಕ್ಷ ಕುಂಡ್ಯೋಳಂಡ ರಮೇಶ್ ಮುದ್ದಯ್ಯ ಮಾತನಾಡಿ ಕಾಫಿ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಕೊಡಗು ಬೆಳೆಗಾರರ ಒಕ್ಕೂಟ ಏಳು ವರ್ಷಗಳಿಂದ ಹೋರಾಟ ಮಾಡಿದೆ. ಸಂಘಟನೆ ಪ್ರಬಲವಾದಾಗ ಸಮಸ್ಯೆಗಳ ಪರಿಹಾರ ಸಾಧ್ಯ. ಕಾಫಿ ಬೆಳೆಗಾರರು ಸಾಧಕ ಬಾಧಕಗಳ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸುವ ಅಗತ್ಯವಿದೆ ಈ ತಿಂಗಳಲ್ಲಿ ಕೇಂದ್ರ ಸಚಿವರು ಚಿಕ್ಕಮಗಳೂರಿನ ಬಾಳೆಹೊನ್ನೂರಿಗೆ ಆಗಮಿಸಲಿದ್ದು ಅವರೊಂದಿಗೆ ಕಾಫಿ ಬೆಳೆಗಾರರ ಸಮಸ್ಯೆ ಗಳನ್ನು ಮುಕ್ತವಾಗಿ ಚರ್ಚಿಸಲಾಗುವುದು ಎಂದರು.

ಭಾರತೀಯ ಕಾಫಿ ಮಂಡಳಿ ಸದಸ್ಯರಾದ ತಳೂರು ಕಿಶೋರ್ ಕುಮಾರ್, ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ಪ್ರವೀಣ್, ಹಾಗೂ ಮುಂಡಂಡ ನಾಣಯ್ಯ, ಮನು ಮುತ್ತಪ್ಪ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಬೆಳೆಗಾರರ ಸಮಸ್ಯೆ ಹಾಗೂ ಕಾಫಿ ಮಾರುಕಟ್ಟೆ, ಗುಣಮಟ್ಟ ಹೆಚ್ಚಿಸಿ ರಫ್ತಿಗಿಂತ ಹೆಚ್ಚಾಗಿ ಆಂತರಿಕ ಮಾರುಕಟ್ಟೆ ಬಗ್ಗೆ ಕಾಫಿಪುಡಿಗಳಲ್ಲಿ ಚಿಕೋರಿ ಮಿಶ್ರಣದಿಂದಾಗುವ ವಿಚಾರ ಸೇರಿದಂತೆ ಇನ್ನಿತರ ಬೆಳೆಗಾರರ ಸಮಸ್ಯೆಯ ಬಗ್ಗೆ ಚರ್ಚಿಸಲಾಯಿತು. ಬೆಳೆಗಾರರಾದ ಪಾಂಡಂಡ ನರೇಶ್, ಕೊಂಡೀರ ಗಣೇಶ್, ಎನ್.ಎಸ್. ಉದಯಶಂಕರ್, ಹರೀಶ್ ಪೂವಯ್ಯ ಮತ್ತಿತರ ಬೆಳೆಗಾರರಿದ್ದರು

ಸಂಸ್ಕೃತಿ ಪರಂಪರೆಯೊಂದಿಗೆ ಕನ್ನಡಾಭಿಮಾನವನ್ನು ಮೈಗೂಡಿಸಿ



ಸಿದ್ದಾಪುರದಲ್ಲಿ ನಡೆದ ರಾಜ್ಯೋತ್ಸವದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮಡಿಕೇರಿ, ಡಿ.2– ಕನ್ನಡ ನಾಡು ನುಡಿ ಸಂಸ್ಕೃತಿ ಪರಂಪರೆಯೊಂದಿಗೆ ಪ್ರತಿಯೊಬ್ಬರು ಕನ್ನಡಾಭಿಮಾನವನ್ನು ಮೈಗೂಡಿಸಿಕೊಂಡು ಮುನ್ನಡೆಯುವ ಮೂಲಕ ಕನ್ನಡಪರ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕೆಂದು ಗಣ್ಯರು ಕರೆ ನೀಡಿದರು.

ಸಿದ್ದಾಪುರದ ಸರ್ವ ಸಹಾಯಿ ಮಿತ್ರ ಮಂಡಳಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತವಾಗಿ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲಾ ಆವರಣದಲ್ಲಿ ವಿವಿಧ ಆರೋಗ್ಯ ಶಿಬಿರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಅದ್ದೂರಿಯಾಗಿ ನೆರವೇರಿತು. ಆಚರಣೆ ಅಂಗವಾಗಿ ಆರೋಗ್ಯ, ಕಣ್ಣು, ದಂತ ತಪಾಸಣಾ ಶಿಬಿರ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮಾತನಾಡಿ, ನಾಡು ನುಡಿ ಸಂರಕ್ಷಣೆಯೊಂದಿಗೆ ಕನ್ನಡ ಅಭಿಮಾನವನ್ನು ಮೈಗೂಡಿಸಿಕೊಂಡಾಗ ಮಾತ್ರ ಕನ್ನಡ ಭಾಷಾ ಪ್ರೇಮವನ್ನು ಮತ್ತಷ್ಟು ಬೆಳೆಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಿಸಿದರು. ಪೊನ್ನಂಪೇಟೆ ಶಾರದಾಶ್ರಮದ ಮಹೇಶ ನೂರಜ್ ಮಹಾರಾಜ್ ದಿವ್ಯಸಾನಿಧ್ಯ ವಹಿಸಿ ಮಾತನಾಡಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಮುನ್ನಡೆದಲ್ಲಿ ಯಶಸ್ಸು ಕಾಣಲು ಸಾಧ್ಯವಾಗಲಿದೆ. ವಿದ್ಯಾರ್ಥಿಗಳು ಕನ್ನಡ ಅಭಿಮಾನದೊಂದಿಗೆ ಶಿಕ್ಷಣದ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಹೇಳಿದರು. ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ್, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅರೆಕಳ ಹಾಜಬ್ಬ ಮಾತನಾಡಿದರು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅರೆಕಳ ಹಾಜಬ್ಬ, ಜೀವ ರಕ್ಷಕ ಈಶ್ವರ್ ಮಲ್ಪೆ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದ ಶಿಕ್ಷಕಿ ಬಿ.ಬಿ ಜಾಜಿ, ಸೇವಾ ಸಾಧನೆಗಾಗಿ ಸಂಜು ಸುಬ್ಬಯ್ಯ, ಅಬ್ದುಲ್ ರೆಹಮಾನ್, ಜನಾರ್ಧನ್ ಅವರುಗಳನ್ನು ಗೌರವಿಸಲಾಯಿತು.

ಸರ್ವ ಸಹಾಯಿ ಮಿತ್ರ ಮಂಡಳಿ ಅಧ್ಯಕ್ಷ ಎಂ.ಎಸ್.ವಿಜು, ಸಿದ್ದಾಪುರ ಗ್ರಾ.ಪಂ. ಅಧ್ಯಕ್ಷೆ ಜಯಲಕ್ಷ್ಮಿ, ಮಾಲ್ದಾರೆ ಗ್ರಾ.ಪಂ. ಅಧ್ಯಕ್ಷೆ ಮಾಲಿನಿ, ಜಿ.ಪಂ. ಮಾಜಿ ಸದಸ್ಯ ಗಣೇಶ್, ಪ್ರಮುಖರಾದ ಸಂಜು ಸುಬ್ಬಯ್ಯ, ಅನೀಫ್ ಸೂಫಿ, ರವೀಂದ್ರ ಬಾವೆ, ನಿವೃತ್ತ ಯೋಧ ಮಣಿ, ರಾಫಿ ನವಾಜ್, ವೈದ್ಯಾಧಿಕಾರಿ ಶಿಲ್ಪ ಶೀಲಾ ಕಾವೇರಿ, ಸರ್ವ ಸಹಾಯಿ ಮಿತ್ರ ಮಂಡಳಿ ಸ್ಥಾಪಕ ಅಧ್ಯಕ್ಷ ಅಬ್ದುಲ್ ರೆಹಮಾನ್ ಸೇರಿದಂತೆ ಗಣ್ಯರು ಹಾಜರಿದ್ದರು.

ಜಾಗೃತಿ ಮೂಡಿಸಿದಾಗ ಮಾತ್ರ ಏಡ್ಸ್ ನಿರ್ಮೂಲನೆ



ಏಡ್ಸ್ ಜಾಗೃತಿ ಜಾಥಾವನ್ನು ವಿರಾಜಪೇಟೆಯಲ್ಲಿ ಮಂಗಳವಾರ ನಡೆಸಲಾಯಿತು.

ವಿರಾಜಪೇಟೆ, ಡಿ.2– ಏಡ್ಸ್ ಕುರಿತು ಪ್ರತಿಯೊಬ್ಬರಲ್ಲಿಯೂ ಜಾಗೃತಿ ಮೂಡಿದಾಗ ಮಾತ್ರ ಸಂಪೂರ್ಣ ನಿರ್ಮೂಲನೆ ಸಾಧ್ಯ ಎಂದು ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಅಧಿಕಾರಿ ಡಾ.ಸನತ್ ಕುಮಾರ್ ಅಭಿಪ್ರಾಯಪಟ್ಟರು.

ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಮಂಗಳವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುವ ಜನತೆಯು ತಾವು ಜಾಗೃತರಾಗುವ ಜೊತೆಗೆ ಬೇರೆಯವರಲ್ಲಿಯೂ ಜಾಗೃತಿಯನ್ನು ಮೂಡಿಸಬೇಕು. ಏಡ್ಸ್‌ನ ಆರಂಭಿಕ ರೋಗ ಲಕ್ಷಣಗಳನ್ನು ನಿರ್ಲಕ್ಷಿಸಬಾರದು. ವಿದ್ಯಾರ್ಥಿಗಳು ಸಾಮಾಜಿಕ ಜಾಗೃತಿಯನ್ನು ಮೂಡಿಸಬೇಕಿದೆ ಎಂದರು.

ಸೆಂಟ್ ಆನ್ಸ್ ಪದವಿ ಕಾಲೇಜಿನ ವ್ಯವಸ್ಥಾಪಕ ರೆ.ಫಾ.ಮದಲೈ ಮುತ್ತು ಮಾತನಾಡಿ ಪ್ರತಿಯೊಬ್ಬರೂ ಸಮಾಜದಲ್ಲಿ ಜವಾಬ್ದಾರಿಯುತವಾಗಿ ಜೀವಿಸಬೇಕು. ಮಾನವ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಸಾಮಾಜಿಕ ಪ್ರಜ್ಞೆಯನ್ನು ಮರೆಯಬಾರದು. ಉತ್ತಮ ಸಮಾಜಮುಖಿ ಚಟುವಟಿಕೆಗಳಿಂದ ಜೀವನವನ್ನು ನಡೆಸಬೇಕು ಎಂದರು. ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಜಿಲ್ಲಾ ಮೇಲ್ವಿಚಾರಕಿ ಸುನಿತಾ ಮುತ್ತಣ್ಣ ಮಾತನಾಡಿ ಉತ್ತಮ ಆರೋಗ್ಯದಿಂದ ಸ್ವಾಸ್ಥ ಸಮಾಜದ ನಿರ್ಮಾಣವಾಗುತ್ತದೆ. ಪ್ರತಿಯೊಬ್ಬರಲ್ಲಿಯೂ ಏಡ್ಸ್ ಕುರಿತು ಸ್ವ ಜಾಗೃತಿ ಮೂಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ತೃಪ್ತಿ ಬೋಪಣ್ಣ ಮಾತನಾಡಿ ಆರೋಗ್ಯವನ್ನು ಉತ್ತಮವಾಗಿ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು. ಕಾಲೇಜಿನ ಎನ್‌ಎಸ್‌ಎಸ್ ಘಟಕದ ಅಧಿಕಾರಿ ಬಿ.ಎನ್. ಶಾಂತಿಭೂಷಣ್ ಮಾತನಾಡಿದರು. ಕಾಲೇಜಿನ ಪ್ರಾಧ್ಯಾಪಕಿ ಪ್ರತಿಮಾ ಹರೀಶ್ ರೈ, ಯುವ ರೆಡ್‌ಕ್ರಾಸ್ ಘಟಕದ ಅಧಿಕಾರಿ ವಿಲೀನ, ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆಯ ಐಸಿಟಿಸಿ ವಿಭಾಗದ ಆಪ್ತ ಸಮಾಲೋಚಕ ಚಿಟ್ಟಿಯಪ್ಪ, ಚಂದ್ರಶೇಖರ್, ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.

ವಿಪ್ರ ಬಾಂಧವರಿಗಾಗಿ ಜಿಲ್ಲೆ ಮತ್ತು ತಾಲೂಕು ಮಟ್ಟದ ಕ್ರೀಡೋತ್ಸವ



ಮಡಿಕೇರಿ, ಡಿ.2–ವಿಪ್ರ ಬಾಂಧವರಿಗಾಗಿ ಜಿಲ್ಲೆ ಮತ್ತು ತಾಲೂಕು ಮಟ್ಟದ 'ವಿಪ್ರ ಕ್ರೀಡೋತ್ಸವ' ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ರಾಮಚಂದ್ರ ಮೂಗೂರು ತಿಳಿಸಿದ್ದಾರೆ.

ಜಿಲ್ಲೆಯ ವಿಪ್ರ ಬಾಂಧವರು ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಪರಸ್ಪರ ಸೌಹಾರ್ದಯುತವಾಗಿ ಬೆರೆಯಲು ಇದೊಂದು ಸದವಕಾಶವಾಗಿದ್ದು, ವಿಪ್ರ ಬಾಂಧವರು ಕ್ರೀಡಾಕೂಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕ್ರೀಡೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಕೆ.ಜಗದೀಶ್ ಮಾತನಾಡಿ, ಡಿ.7 ರಂದು ಜಿಲ್ಲಾ ಮಟ್ಟದ ಶಟಲ್ ಬ್ಯಾಡ್ಮಿಂಟನ್ ಹಾಗೂ ಟೇಬಲ್ ಟೆನ್ನಿಸ್ ಸ್ಪರ್ಧೆಗಳು ಬೆಳಗ್ಗೆ 9 ಗಂಟೆಗೆ ನಗರದ ಜಿಲ್ಲಾ ಒಳಾಂಗಣ ಕ್ರೀಡಾಂಗಣ (ವ್ಯಾನ್ಸ್ ಕಾಂಪೌಂಡ್) ದಲ್ಲಿ ವಿವಿಧ ವಿಭಾಗಗಳಲ್ಲಿ ನಡೆಯಲಿದೆ ಪುರುಷರ ವಿಭಾಗ ಹಾಗೂ ಮಹಿಳೆಯರ ವಿಭಾಗದಲ್ಲಿ ಸಿಂಗಲ್ಸ್ ಹಾಗೂ ಡಬಲ್ಸ್, 50 ವರ್ಷ ಮೇಲ್ಪಟ್ಟವರ ವಿಭಾಗ, ಬಾಲಕ–ಬಾಲಕಿಯರ ವಿಭಾಗದಲ್ಲಿ ಪಂದ್ಯಾವಳಿ ನಡೆಯಲಿದ್ದು, ಸ್ಪರ್ಧೆಯಲ್ಲಿ ಭಾಗವಹಿಸುವವರು ಅದೇ ದಿನ ಬೆಳಗ್ಗೆ 9 ಗಂಟೆಗೆ ಸ್ಥಳದಲ್ಲೇ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಲು ಅವಕಾಶವನ್ನು ಮಾಡಿಕೊಡಲಾಗಿದೆ ಎಂದು ಹೇಳಿದರು.

ವಿರಾಜಪೇಟೆಯಲ್ಲಿ ಕ್ರಿಕೆಟ್: ಡಿ.14 ರಂದು ಜಿಲ್ಲಾ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ವಿರಾಜಪೇಟೆಯ ಜೂನಿಯರ್ ಕಾಲೇಜು ಮೈದಾನದಲ್ಲಿ ಬೆಳಿಗ್ಗೆ 9 ಗಂಟೆಗೆ ಪಂದ್ಯಾವಳಿ ಆರಂಭಗೊಳ್ಳಲಿದ್ದು, ತಂಡಗಳು ಡಿ.5ರ ಒಳಗೆ ಹೆಸರು ನೋಂದಾಯಿಸಿಕೊಳ್ಳುವಂತೆ ಮಾಹಿತಿ ನೀಡಿ, ಇಲ್ಲಿಯವರೆಗೆ 9 ತಂಡಗಳು ನೋಂದಾಯಿಸಿಕೊಂಡಿರುವುದಾಗಿ ಪ್ರಕಟಿಸಿದರು. ಪಂದ್ಯಾವಳಿಯ ನಡುವೆ ಸಂಜೆ 4 ಗಂಟೆಗೆ ಮೈದಾನದ ಮತ್ತೊಂದು ಭಾಗದಲ್ಲಿ ಜಿಲ್ಲಾ ಮಟ್ಟದ ಹಗ್ಗ–ಜಗ್ಗಾಟ ಸ್ಪರ್ಧೆಯು ಸಹ ನಡೆಯಲಿದೆ. ಪುರುಷ ಹಾಗೂ ಮಹಿಳಾ ವಿಭಾಗದಲ್ಲಿ ಈ ಸ್ಪರ್ಧೆ ನಡೆಯಲಿದೆ ಎಂದು ತಿಳಿಸಿದರು.

ಕ್ರೀಡೋತ್ಸವದ ಅಂಗವಾಗಿ ತಾಲೂಕು ಮಟ್ಟದ ಕ್ರೀಡೆಗಳು ನಡೆಯಲಿದ್ದು, ಇದರಲ್ಲಿ ಒಳಾಂಗಣ ಕ್ರೀಡೆಗಳಾದ ಚೆಸ್, ಕೇರಂ ಹಾಗೂ ಇನ್ನಿತರ ಮನೋರಂಜನಾ ಕ್ರೀಡೆಗಳು ನಡೆಯಲಿದೆ. ಚೆಸ್ ಹಾಗೂ ಕೇರಂನಲ್ಲಿ ವಿಜೇತರಾಗುವ ತಾಲೂಕು ಮಟ್ಟದ ಸ್ಪರ್ಧಿಗಳು ಜನವರಿಯಲ್ಲಿ ಮಡಿಕೇರಿಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆಯುತ್ತಾರೆ ಎಂದರು. ಅದೇ ದಿನ ಜಿಲ್ಲೆಯ ವಿಪ್ರ ಸಾಧಕರನ್ನು ಗುರುತಿಸಿ ಸನ್ಮಾನಿಸುವ ಕಾರ್ಯಕ್ರಮ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಲಾಗಿದೆ. ಕ್ರೀಡೋತ್ಸವದಲ್ಲಿ ವಿಜೇತರಾಗುವ ಎಲ್ಲಾ ಸ್ಪರ್ಧಿಗಳಿಗೆ ಅದೇ ದಿನ ನಡೆಯುವ ಸಮಾರೋಪ ಸಮಾರಂಭದಲ್ಲಿ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು ಎಂದು ಬಿ.ಕೆ.ಜಗದೀಶ್ ಹೇಳಿದರು.

ಇದೇ ಡಿ.21ರಂದು ನಗರದ ಶ್ರೀ ಲಕ್ಷ್ಮೀ ನರಸಿಂಹ ಕಲ್ಯಾಣ ಮಂಟಪದಲ್ಲಿ ತಾಲೂಕಿನ ವಿಪ್ರ ಬಾಂಧವರಿಗಾಗಿ ಚೆಸ್ ಮತ್ತು ಕೇರಂ ಪಂದ್ಯಾವಳಿ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಸುದ್ದಿ ಗೋಷ್ಠಿಯಲ್ಲಿ ನಿಧಿಯ ಉಪಾಧ್ಯಕ್ಷ ಭರತೇಶ್ ಕಂಡಿಗೆ, ನಿರ್ದೇಶಕ ಎಂ.ಎನ್. ಶಾಮಲ ಹಾಗೂ ಬಿ.ಕೆ. ಅರುಣ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ಹಿರಿಯ ನಾಗರಿಕರ ವೇದಿಕೆಯ ಸ್ನೇಹಕೂಟ ಸಮಾರಂಭ

ಮಡಿಕೇರಿ, ಡಿ.2–ಹಿರಿಯ ನಾಗರಿಕರ ವೇದಿಕೆಯ ಸ್ನೇಹಕೂಟ ಸಮಾರಂಭವು ನಗರದ ಬಾಲಭವನದ ಆವರಣದಲ್ಲಿ ಇತ್ತೀಚೆಗೆ ನಡೆಯಿತು.

ಮುಖ್ಯ ಅತಿಥಿಗಳಾಗಿದ್ದ ವೈದ್ಯ ಡಾ.ಚೇತನ್ ಹಿರಿಯ ನಾಗರಿಕರಿಗೆ ಉಪಯುಕ್ತವಾದ ಸಲಹೆಯನ್ನು ಪವರ್ ಪಾಯಿಂಟ್ ಮೂಲಕ ತಿಳಿಸಿದರು.

ವೇದಿಕೆಯ ಅಧ್ಯಕ್ಷ ಕೊಂಗಾಂಡ ಎ.ತಿಮ್ಮಯ್ಯ ಅಧ್ಯಕ್ಷತೆ ವಹಿಸಿ ಪ್ರಾಸ್ತವಿಕವಾಗಿ ಮಾತನಾಡಿದರು. ಕಿಗ್ಗಟ್ಟು ನಾಡು ಹಿರಿಯ ನಾಗರಿಕರ ವೇದಿಕೆಯ ಸ್ಥಾಪಕ ಅಧ್ಯಕ್ಷ ಕಾಟಿಮಾಡ ಜಿಮ್ಮಿ ಅಣ್ಣಯ್ಯ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ವೇದಿಕೆಯ ಸದಸ್ಯರಿಗೆ ಆಟೋಟ ಸ್ಪರ್ಧೆ ಏರ್ಪಡಿಸಲಾಗಿತ್ತು ಇದರಲ್ಲಿ ಸದಸ್ಯರು ಉತ್ಸಾಹದಿಂದ ಪಾಲ್ಗೊಂಡರು.

ಕಾರ್ಯಕ್ರಮದಲ್ಲಿ ಪಿ.ಪಿ.ಸೋಮಣ್ಣ ಅತಿಥಿಗಳನ್ನು ಪರಿಚಯಿಸಿದರೆ, ಐ.ಎಸ್. ಅರವಿಂದ ಸನ್ಮಾನಿತರ ಪರಿಚಯ ಮಾಡಿದರು. ಬಿ.ಎಸ್.ಚೆಂಗಪ್ಪ ವಂದಿಸಿದರು. ಆಟೋಟ ಸ್ಪರ್ಧೆಯನ್ನು ವಸಂತಿ ಪೊಣಚ್ಚ ಹಾಗೂ ವಿಜು ನಂಜಪ್ಪ ನಡೆಸಿಕೊಟ್ಟರು. ಶೋಭಾ ಸುಬ್ಬಯ್ಯ ಪ್ರಾರ್ಥಿಸಿದರು. ಉಪಾಧ್ಯಕ್ಷೆ ಲೀಲಾ ಚೆಣ್ಣಪ್ಪ, ಉಪಕಾರ್ಯದರ್ಶಿ ಗಂಗಮ್ಮ, ಬಾಬು ಸೋಮಯ್ಯ, ಕಿಗ್ಗಟ್ಟುನಾಡು ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷ ಸೋಮಣ್ಣ ಹಾಗೂ ಆಡಳಿತ ಮಂಡಳಿಯ ಸದಸ್ಯರು ಭಾಗವಹಿಸಿದ್ದರು.

ಕ್ರಾಸ್–ಕಂಟ್ರಿ ಸ್ಪರ್ಧೆಯಲ್ಲಿ ಗೌತಮ್ ಶೆಟ್ಟಿ ರಾಷ್ಟ್ರಮಟ್ಟಕ್ಕೆ ಆಯ್ಕೆ



ನಾಪೋಕ್ಲು, ಡಿ.2– ಜಿಲ್ಲಾ ವಿಶ್ವವಿದ್ಯಾಲಯ ಮಟ್ಟದ ಕ್ರಾಸ್–ಕಂಟ್ರಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಗೌತಮ್ ಶೆಟ್ಟಿ ಅಖಿಲ ಭಾರತ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ವಿರಾಜಪೇಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ವಿಶ್ವವಿದ್ಯಾಲಯ ಮಟ್ಟದ 10 ಕಿ.ಮೀ ಪುರುಷರ ಗುಡ್ಡಗಾಡು ಓಟ (ಕ್ರಾಸ್–ಕಂಟ್ರಿ) ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ಬಿಎ ವಿದ್ಯಾರ್ಥಿಯಾಗಿದು. ವಿಕಾಸ್ ಶ್ರೀನಿವಾಸ್ ಮಾರ್ಗದರ್ಶಕರಾಗಿದ್ದಾರೆ. ಈತ ವಿರಾಜಪೇಟೆಯ ಶೇಖರ್ ಮತ್ತು ಶೋಭಾ ದಂಪತಿಯ ಪುತ್ರ

ಕೆರೆ ಜಾಗದಲ್ಲಿ ಅಕ್ರಮ ಕಟ್ಟಡ; ಕ್ರಮಕ್ಕೆ ಎಡಿಸಿಗೆ ಮನವಿ



ಸೂಕ್ತ ಕ್ರಮಕ್ಕೆ ಆಗ್ರಹಿಸಿ ಎಡಿಸಿಯವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ಡಿ.2– ಕೊಳ್ಳೇಗಾಲ ನಗರಸಭೆಯ 10ನೇ ವಾರ್ಡ್‌ನ ಸರ್ವೆ ನಂ.866ರ ಕೆರೆಯ ಜಾಗದಲ್ಲಿ ಅಕ್ರಮವಾಗಿ ಕಟ್ಟಡವನ್ನು ನಿಯಮ ಮೀರಿ ನಿರ್ಮಾಣ ಮಾಡುತ್ತಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ನಿವಾಸಿಗಳು ಒತ್ತಾಯಿಸಿದ್ದಾರೆ.

ಕೊಳ್ಳೇಗಾಲ ಪಟ್ಟಣದ ನಾಯಕರ ದೊಡ್ಡ ಬೀದಿಯ ಯಜಮಾನರು ಮತ್ತು ನಿವಾಸಿಗಳು ನಗರದ ಜಿಲ್ಲಾಡಳಿತ ಭವನದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಮನವಿ ಸಲ್ಲಿಸಿ ನಗರಸಭೆಯು ಅ.24 ರಂದು ಸದರಿ ಅಕ್ರಮ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ ನೋಟಿಸ್ ಜಾರಿ ಮಾಡಿದ್ದರೂ ಇದನ್ನು ಉಲ್ಲಂಘಿಸಿ ಅಕ್ರಮ ಕಟ್ಟಡ ವನ್ನು ನಿರ್ಮಾಣ ಕಾಮಗಾರಿಯನ್ನು ಮುಂದುವರೆಸಿದ್ದಾರೆ. ಈಗಾಗಲೇ ಹಲವು ಬಾರಿ ಜಿಲ್ಲಾಧಿಕಾರಿಗಳಿಗೆ, ಕೊಳ್ಳೇಗಾಲ ನಗರಸಭೆ, ತಹಸೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳ ಗಮನಕ್ಕೂ ತರಲಾಗಿದೆ ಎಂದರು.

ನಮ್ಮ ಮನವಿಗೆ ಸ್ಪಂದಿಸಿ ನಗರಸಭೆಯು ಕಟ್ಟಡ ಕಾಮಗಾರಿ ನಿರ್ಮಾಣ ಮಾಡುತ್ತಿರು ವವರಿಗೆ ನೋಟಿಸ್ ಜಾರಿ ಮಾಡಿದ್ದರು ಕೂಡ ಉಲ್ಲಂಘಿಸಿ ನ.30 ರಂದು ಭಾನು ವಾರವಾದ್ದರಿಂದ ಕಟ್ಟಡ ಕಾಮಗಾರಿ ನಿರ್ಮಾಣವನ್ನು ಮುಂದುವರೆಸುತ್ತಿದ್ದಾರೆ. ಈ ಬಗ್ಗೆ ನಿಯಮ ಉಲ್ಲಂಘಿಸಿರುವ ಅಕ್ರಮ ಕಟ್ಟಡ ನಿರ್ಮಾಣ ಮಾಡುತ್ತಿರುವವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಯಜಮಾನ ಚಿಕ್ಕಮಾದನಾಯಕ ಒತ್ತಾಯಿಸಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ: ಟಾಟಾ ಏಸ್ ಚಾಲಕ ಸಾವು

ಚಾಮರಾಜನಗರ, ಡಿ.2– ಟಾಟಾ ಏಸ್ ಗೂಡ್ಸ್ ವಾಹನಕ್ಕೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಗೂಡ್ಸ್ ವಾಹನದ ಚಾಲಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಹೊರವಲಯದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಬಳಿ ಸೋಮವಾರ ರಾತ್ರಿ ನಡೆದಿದೆ.

ನಂಜನಗೂಡು ತಾಲೂಕಿನ ಕುಮಾರ ಸ್ವಾಮಿ(37) ಮೃತ ಚಾಲಕ. ಈತ ನಗರದಿಂದ ನಂಜನಗೂಡಿನ ಕಡೆಗೆ ಟಾಟಾಏಸ್ ಗೂಡ್ಸ್ ವಾಹನ (ಕೆಎ 09, ಎಎ 6259)ದಲ್ಲಿ ತೆರಳುತ್ತಿದ್ದ ವೇಳೆ ಇಂಜಿನಿಯರಿಂಗ್ ಕಾಲೇಜು ಬಳಿ ಮೈಸೂರಿನಿಂದ ಚಾಮರಾಜನಗರದ ಕಡೆಗೆ ಬರುತ್ತಿದ್ದ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದಿದೆ. ಅಪಘಾತದ ಪರಿಣಾಮ ಚಾಲಕ ಕುಮಾರಸ್ವಾಮಿ ಸ್ಥಳದಲ್ಲೇ ಮೃತ ಪಟ್ಟಿದ್ದಾನೆ ಎಂದು ಹೇಳಲಾಗುತ್ತಿದೆ.

ಸಂಚಾರ ಠಾಣೆಯ ಪೊಲೀಸರು ತೆರಳಿ ಪರಿಶೀಲಿಸಿದ್ದು ಮೃತದೇಹವನ್ನು ಸಿಮ್ಸ್ ಶವಾಗಾರಕ್ಕೆ ರವಾನಿಸಿದರು. ಈ ಸಂಬಂಧ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ

ಸಿದ್ದರಾಮಯ್ಯ, ಡಿಕೆಶಿ ಮನಸ್ಸುಗಳೆ ಬ್ರೇಕ್ ಆಗಿವೆ, ಇನ್ನೆಲ್ಲಿ ಬ್ರೇಕ್ ಫಾಸ್ಟ್ ಸಭೆ: ಛಲವಾದಿ ವ್ಯಂಗ್ಯ



ಬಿಜೆಪಿ ಆಯೋಜಿಸಿದ್ದ ಸಂವಿಧಾನ ಸಮರ್ಪಣಾ ದಿನದ ಪ್ರಯುಕ್ತ ಸಂವಿಧಾನ ಜಾಗೃತಿಗಾಗಿ ಭೀಮನ ನಡೆ ಕಾರ್ಯಕ್ರಮಕ್ಕೆ ಛಲವಾದಿ ನಾರಾಯಣಸ್ವಾಮಿ ಚಾಲನೆ ನೀಡಿದರು

ಕೊಳ್ಳೇಗಾಲ, ಡಿ.2. (ಎನ್‌ಎನ್)–ಸಿದ್ದರಾಮಯ್ಯ, ಡಿ.ಕೆ ಶಿವಕುಮಾರ್‌ರ ಮನಸ್ಸುಗಳೆ ಬ್ರೇಕ್ ಆಗಿರುವಾಗ, ಇನ್ನೆಲ್ಲಿ ಬ್ರೇಕ್ ಫಾಸ್ಟ್ ಸಭೆಗಳು ಎಂದು ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ವ್ಯಂಗ್ಯ ವಾಡಿದ್ದಾರೆ.

ಪಟ್ಟಣದಲ್ಲಿ ಅಯೋಜಿಸಲಾಗಿದ್ದ ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಸಂವಿಧಾನ ಜಾಗೃತಿಗಾಗಿ ಭೀಮನಡಿಗೆ ಕಾರ್ಯಕ್ರಮಕ್ಕೂ ಮುನ್ನ ಡಾ.ಬಿ.ಆರ್ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಮನಸ್ಸು ಒಡೆದು ಹೋಗಿದ್ದರೂ ತಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕಾಗಿ ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್ ಅವರ ಮನೆಗೆ ಇವರು, ಇವರ ಮನೆಗೆ ಅವರು ಭೇಟಿಯ ನಾಟಕವಾಡುತ್ತಿದ್ದಾರೆ ಎಂದು ಮೂದಲಿಸಿದರು.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರುಗಳು ಬ್ರೇಕ್ ಫಾಸ್ಟ್‌ಗೆ ಸೇರಿ ರೈತರ ಅಥವಾ ನಾಡಿನ ಜ್ವಲಂತ ಸಮಸ್ಯೆ ನಿವಾರಣೆಗಾಗಿ ಅಲ್ಲ, ಅಥವಾ ರಾಜ್ಯದ ಅಭಿವೃದ್ದಿಪರ ಚಿಂತನೆಗಾಗಿ ಅಲ್ಲ ಅಥವಾ ದಲಿತರ ಸಮಸ್ಯೆಗಳನ್ನು ಪರಿಹರಿಸಲಿಕ್ಕಾಗಿಯೂ ಅಲ್ಲ, ಕೇವಲ ಅಧಿಕಾರ ದಾಹಕ್ಕಾಗಿ ಬ್ರೇಕ್‌ಫಾಸ್ಟ್ ನೆಪದಲ್ಲಿ ಜನತೆಯ ಮುಖಕ್ಕೆ ತೇಪೆ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಜನತೆ ಇವರಿಬ್ಬರ ಕುರ್ಚಿ ಕಲಹವನ್ನು ವೀಕ್ಷಿಸುತ್ತಿದ್ದು, ಸೂಕ್ತ ಸಮಯದಲ್ಲಿ ಇಬ್ಬರಿಗೂ ತಕ್ಕ ಬುದ್ಧಿ ಕಲಿಸುತ್ತಾರೆ ಎಂದು ಹೇಳಿದರು.

ದಲಿತರಿಗೆ ಸಿಎಂ ಹುದ್ದೆ ಸಿಗಲ್ಲ ಕಾಂಗ್ರೆಸ್ಸಿನಲ್ಲಿ ದಲಿತರಿಗೆ ಸಿಎಂ ಹುದ್ದೆ ಎಂದಿಗೂ ಲಭಿಸುವುದಿಲ್ಲ ಎಂಬುದು ಖಚಿತ ವಾಗಿದೆ. ಮುಂದೆ ಸಂಪುಟ ವಿಸ್ತರಣೆ ವೇಳೆ ಎಚ್.ಸಿ. ಮಹದೇವಪ್ಪ, ಮುನಿಯಪ್ಪ, ಪರಮೇಶ್ವರ್ ಅವರನ್ನು ಸಹಾ ಕೈಬಿಡಲಾಗುತ್ತೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ದಲಿತರನ್ನು ಸಿಎಂ ಆಗಲು ಬಿಡಲ್ಲ, ಅವರಿಗೆ ತಮ್ಮ ಪುತ್ರ ಪ್ರಿಯಾಂಕ ಖರ್ಗೆಯನ್ನು ಸಿಎಂ ಕುರ್ಚಿಗೆ ತರಬೇಕೆಂಬ ಆಸೆ ಹೊಂದಿದ್ದು ಪ್ರಿಯಾಂಕ್ ಖರ್ಗೆ ಡಿಸಿಎಂ ಆದರೂ ಅಚ್ಚರಿ ಪಡಬೇಕಿಲ್ಲ ಸದ್ಯಕ್ಕೆ ಕಾಂಗ್ರೆಸ್ ಸುಡುವ ಮನೆ, ಒಡೆದ ಮನೆಯಂತಾಗಿದೆ ಎಂಬುದನ್ನ ನಾನು ಘಂಟಾ ಘೋಷವಾಗಿ ಹೇಳಬಲ್ಲೆ ಎಂದರು.

ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕರಾದ ಎಸ್.ಬಾಲರಾಜ್, ನಿರಂಜನ್ ಕುಮಾರ್ ವಿಧಾನಪರಿಷತ್ತು ಮಾಜಿ ಸದಸ್ಯ ಮಲ್ಲಿಕಾರ್ಜುನಪ್ಪ, ಮಾಜಿ ಶಾಸಕ ಇನ್ನಿತರರಿದ್ದರು.

ಗೋವಿಂದವಾಡಿ ಗ್ರಾಪಂ ಅಧ್ಯಕ್ಷೆ, ಉಪಾಧ್ಯಕ್ಷೆ ಸದಸ್ಯತ್ವ ರದ್ಧತಿಗೆ ಆದೇಶ

ಚಾಮರಾಜನಗರ, ಡಿ.2– ತಾವೇ ನೀಡಿದ್ದ ಅನುಮೋದನೆ ವಿರುದ್ಧವೇ ನ್ಯಾಯಾಲಯದಲ್ಲಿ ದಾವೆ ಹುಡಿದ್ದ ತಾಲೂಕಿನ ಗೋವಿಂದವಾಡಿ (ಕಲ್ಲೂರ) ಗ್ರಾಪಂ ಅಧ್ಯಕ್ಷೆ, ಉಪಾಧ್ಯಕ್ಷೆ, ಮತ್ತು ಇಬ್ಬರು ಸದಸ್ಯರ ಸದಸ್ಯತ್ವವನ್ನು ರದ್ದುಪಡಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪೀಠಾಧಿಕಾರಿ ಆದೇಶ ಹೊರಡಿಸಿದ್ದಾರೆ ಎಂದು ವಕೀಲ ಅರುಣ್ ಕುಮಾರ್ ತಿಳಿಸಿದ್ದಾರೆ.

ಗ್ರಾಪಂ. ಅಧ್ಯಕ್ಷೆ ನಾಗಲಾಂಬಿಕಾ, ಉಪಾಧ್ಯಕ್ಷೆ ನೀಲಮ್ಮ, ಸದಸ್ಯರಾದ ಉಮೇಶ್ ಹಾಗೂ ಗೌರಮ್ಮ ಎಂಬುವವರ ಸದಸ್ಯತ್ವವನ್ನು ರದ್ದುಪಡಿಸಲಾಗಿದೆ. ಹಾಗೆಯೇ ಈ ನಾಲ್ವರು ಮುಂದಿನ 6 ವರ್ಷಗಳ ವರೆಗೆ ಯಾವುದೇ ಚುನಾವಣೆಗೆ ನಿಲ್ಲದಂತೆ ಪೀಠಾಧಿಕಾರಿ ಅನರ್ಹಗೊಳಿಸಿದ್ದಾರೆ ಎಂದು ಅವರು ಸುದ್ಧಿಗೋಷ್ಠಿಯಲ್ಲಿ ಹೇಳಿದರು

ಗ್ರಾಪಂಗೆ ಹೊಸ ಕಟ್ಟಡ ನಿರ್ಮಿಸಲು ಸಾಮಾನ್ಯ ಸಭೆಯಲ್ಲಿ ಅನುಮೋದನೆ ನೀಡಿದ್ದರು. ಅದರಂತೆ ಹಳೆ ಕಟ್ಟಡ ಕೆಡವಿ ಹೊಸ ಕಟ್ಟಡ ನಿರ್ಮಾಣಕ್ಕೆ ಮುಂದಾದ ವೇಳೆ ಈ ನಾಲ್ವರು ರಾಜಕೀಯ ದುರುದ್ದೇಶದಿಂದಾಗಿ ಕಟ್ಟಡ ನಿರ್ಮಾಣ ಮಾಡಬಾರದೆಂದು ತಮ್ಮದೇ ಗ್ರಾಪಂನ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು ಎಂದರು.

ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಮಂಡಳಿ ಸದಸ್ಯ ಮಹದೇವಸ್ವಾಮಿ ಎಂಬುವರು ಈ ನಾಲ್ವರ ವಿರುದ್ಧ ಜಿಪಂ ಸಿಇಓಗೆ ದೂರು ಸಲ್ಲಿಸಿದ್ದರು. ಸಿಇಓ ವಿಚಾರಣೆ ನಡೆಸಿ ಗ್ರಾಪಂ ಕಟ್ಟಡ ನಿರ್ಮಾಣ ವಿಚಾರದಲ್ಲಿ ಮೇಲಾಧಿಕಾರಿಗಳಿಂದ ಯಾವುದೇ ಅನುಮತಿ ಪಡೆಯದೆ ತಮ್ಮ ಸ್ವಂತ ಗ್ರಾಪಂ ವಿರುದ್ಧವೇ ಉಚ್ಚ ನ್ಯಾಯಾಲಯ ಹಾಗೂ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾ ಲಯದಲ್ಲಿ ಪ್ರಕರಣ ದಾಖಲಿಸಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ–1993ರ ಪ್ರಕರಣ 289ರ ನಿಯಮವನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ದೃಢಪಟ್ಟಿದೆಯೆಂದು ಅವರು ಪ್ರಾದೇಶಿಕ ಆಯುಕ್ತರಿಗೆ ನೀಡಿರುವ ವರದಿಯಲ್ಲಿ ಆರೋಪಿಸಿದ್ದರು.

ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಸದಸ್ಯ ಮಾದಪ್ಪ, ಕರ್ನಾಟಕ ರೈತಸಂಘ ಹಾಗೂ ಹಸಿರು ಸೇನೆ ತಾಲೂಕು ಮಂಡಳಿ ಸದಸ್ಯ ಮಹದೇವಸ್ವಾಮಿ, ವಕೀಲ ಲೋಕೇಶ್ ಹಾಜರಿದ್ದರು.

ಸವಲತ್ತುಗಳು ನೈಜ ಪತ್ರಕರ್ತರಿಗೆ ತಲುಪಬೇಕು



ರಾಜ್ಯ ಮಾಧ್ಯಮ ಪತ್ರಕರ್ತರ ಸಂಘದ ಸದಸ್ಯರಾಗಿ ಆಯ್ಕೆಯಾಗಿರುವ ಕೆ.ಎನ್.ಮಹದೇವಸ್ವಾಮಿ ಅವರಿಗೆ ಸದಸ್ಯತ್ವ ಪ್ರಮಾಣ ಪತ್ರವನ್ನು ಸಂಘದ ರಾಜ್ಯಾಧ್ಯಕ್ಷ ಜಿ.ಎ.ರಾಜಶೇಖರ್ ವಿತರಣೆ ಮಾಡಿದರು.


ಗುಂಡ್ಲುಪೇಟೆ: ಡಿ–2 (ಸೋಮ್.ಜಿ)– ಸರ್ಕಾರದಿಂದ ದೊರಕುವ ಎಲ್ಲಾ ಸವಲತ್ತುಗಳು ನಿಜವಾದ ಪತ್ರಕರ್ತರಿಗೆ ತಲುಪುವಂತೆ ಮಾಡಬೇಕಾಗಿದೆ ಎಂದು ರಾಜ್ಯ ಮಾಧ್ಯಮ ಪತ್ರಕರ್ತರ ಸಂಘದ ನೂತನ ರಾಜ್ಯ ಸಮಿತಿ ಸದಸ್ಯ ಕೊಡಸೋಗೆ ಕೆ.ಎನ್. ಮಹದೇವಸ್ವಾಮಿ ಹೇಳಿದರು.

ತಾಲೂಕಿನ ತೆರಕಣಾಂಬಿಯಲ್ಲಿರುವ ರಾಜ್ಯ ಮಾಧ್ಯಮ ಪತ್ರಕರ್ತರ ಸಂಘದ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪತ್ರಕರ್ತರು ಸದಾ ಒತ್ತಡದಿಂದ ಕಾರ್ಯನಿರ್ವಹಿಸುತ್ತಿದ್ದು ಹೆಚ್ಚಿನವರು ವಿಮೆ, ಬಸ್‌ಪಾಸ್ ಸೇರಿದಂತೆ ಎಲ್ಲಾ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಅಲ್ಲದೆ ಯುವಪತ್ರಕರ್ತರಿಗೆ ಅನುಭವದ ಕೊರತೆಯಿಂದ ಹಲವಾರು ರೀತಿಯ ಸಮಸ್ಯೆಗಳಾಗುತ್ತಿದ್ದು ಈ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯಾಗಾರಗಳನ್ನು ನಡೆಸಿ ಹೆಚ್ಚಿನ ಅರಿವು ಮೂಡಿಸಲಾಗುವುದು ಎಂದರು.

ನೈಜ ವರದಿಗಾರಿಕೆಗೆ ಕಾನೂನು ತೊಡಕುಗಳು ಎದುರಾದರೆ ಸಂಘದ ವತಿಯಿಂದಲೇ ಉಚಿತ ಕಾನೂನು ನೆರವು ಒದಗಿಸುವ ಜತೆಗೆ ಪ್ರತಿ ವರ್ಷವೂ ಉತ್ತಮ ವರದಿಗಾರಿಕೆಗೆ ರಾಜ್ಯಮಟ್ಟದಲ್ಲಿ ಪ್ರಶಸ್ತಿ ನೀಡಲಾಗುವುದು. ಸಂಘವು ಪತ್ರಕರ್ತರ ಜತೆಗೆ ಯುಟ್ಯೂಬ್ ಚಾನೆಲ್‌ಗಳವರನ್ನೂ ಒಳಗೊಂಡಂತೆ ರಾಜ್ಯಾದ್ಯಂತ ಸಂಘಟನೆಯನ್ನು ಮಾಡುತ್ತಿದೆ. ಈಗಾಗಲೇ ಎಲ್ಲಾ ಜಿಲ್ಲೆ ಹಾಗೂ ಬಹುತೇಕ ತಾಲೂಕು ಘಟಕಗಳನ್ನು ರಚಿಸಲಾಗುತ್ತಿದ್ದು ಡಿಸೆಂಬರ್ ಇಲ್ಲವೇ ಜನವರಿಯಲ್ಲಿ ವಿಭಾಗೀಯ ಮಟ್ಟದ ಪದಗ್ರಹಣ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿದರು.

ರಾಜ್ಯ ಸಮಿತಿಗೆ ನೇಮಕ: ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಗುಂಡ್ಲುಪೇಟೆ ಘಟಕದ ಅಧ್ಯಕ್ಷ ಕೆ.ಎನ್.ಮಹದೇವಸ್ವಾಮಿ ಅವರನ್ನು ರಾಜ್ಯ ಸಮಿತಿಯ ಸದಸ್ಯರಾಗಿ ಹಾಗೂ ರಾ.ಬಾಬು ಅವರನ್ನು ಸಹೋದ್ಯೋಗಿಗಳು ಸನ್ಮಾನಿಸಿದರು. ಪದಾಧಿಕಾರಿಗಳಾದ ಎ.ಎಂ.ವೀರಭದ್ರಪ್ಪ, ಬೈರೇಶ್ ಗಾಣಿಗ್, ಎಂ.ಮಲ್ಲು ಚಿಕ್ಕತುಪ್ಪೂರು, ಸುರೇಶ್ ರಂಗೂಪುರ, ಮಂಜುಕುಮಾರ್ ಚನ್ನವಡೆಯನಪುರ ಸೇರಿದಂತೆ ಹಲವರು ಇದ್ದರು.

ಕಾಡಾನೆಗಳ ಹಿಂಡು ಪ್ರತ್ಯಕ್ಷ; ಗ್ರಾಮಸ್ಥರಲ್ಲಿ ಆತಂಕ




ಚಾಮರಾಜನಗರ, ಡಿ.2– ತಾಲೂಕಿನ ಬಿಸಲವಾಡಿ ಹಾಗೂ ಅರಳವಾಡಿ ಗ್ರಾಮಗಳ ವ್ಯಾಪ್ತಿಯ ಹೊರವಲಯದ ಜಮೀನುಗಳಲ್ಲಿ ಸುಮಾರು 20ಕ್ಕೂ ಹೆಚ್ಚು ಕಾಡಾನೆ ಹಿಂಡು ಕಾಣಿಸಿಕೊಂಡಿದ್ದು, ಈ ಭಾಗದ ಜನರು ಆತಂಕಗೊಂಡಿದ್ದಾರೆ.

ಮಂಗಳವಾರ ಬೆಳಗ್ಗೆ 7 ಗಂಟೆ ಸಮಯದಲ್ಲಿ ತಾಲೂಕಿನ ಬಿಸಲವಾಡಿ ಹಾಗೂ ಗಡಿ ಹಂಚಿಕೊಂಡಿರುವ ಅರಳವಾಡಿ ಗ್ರಾಮದ ವ್ಯಾಪ್ತಿಯ ಜಮೀನುಗಳಲ್ಲಿ ಕಾಡಾನೆಗಳ ಹಿಂಡು ಕಾಣಿಸಿಕೊಂಡಿವೆ.

ಕಾಡಾನೆಗಳ ಹಿಂಡನ್ನು ಕಂಡು ರೈತರು ಆತಂಕಗೊಂಡಿದ್ದು ಜಮೀನುಗಳಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಜಮೀನುಗಳಲ್ಲಿ ಓಡಾಡುತ್ತಿರುವ ಕಾಡಾನೆಗಳ ಹಿಂಡಿನ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಿಷಯ ತಿಳಿದು ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿದ್ದು ಆನೆಗಳನ್ನು ಕಾಡಿನತ್ತ ಓಡಿಸಲು ಕ್ರಮವಹಿಸಿದ್ದಾರೆ

ಕೊಂಗಳ್ಳಿ ಗ್ರಾಮದಲ್ಲಿ ಒಂಟಿ ಸಲಗ ಓಡಾಟ: ಆತಂಕ



ಕೊಂಗಳ್ಳಿ ಗ್ರಾಮದಲ್ಲಿ ಅಡ್ಡಾಡುತ್ತಿರುವ ಒಂಟಿ ಸಲಗ

ಚಾಮರಾಜನಗರ, ಡಿ.2–ಇಲ್ಲಿಗೆ ಸಮೀಪದ ನೆರೆಯ ತಮಿಳುನಾಡಿಗೆ ಸೇರಿದ ಕೊಂಗಳ್ಳಿ ಗ್ರಾಮಕ್ಕೆ ಮಂಗಳವಾರ ಮುಂಜಾನೆ ಒಂಟಿ ಸಲಗವೊಂದು ನುಗ್ಗಿ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿದ ಘಟನೆ ನಡೆದಿದೆ.

ಬೆಳಗ್ಗೆಯೇ ಗ್ರಾಮದಲ್ಲಿ ಕಾಣಿಸಿಕೊಂಡ ಒಂಟಿ ಸಲಗ ಕಂಡು ಗ್ರಾಮಸ್ಥರು ಚೀರಾಡಿಕೊಂಡು ದಿಕ್ಕಾಪಾಲಾಗಿ ಓಡಿದ್ದಾರೆ. ಕಾಡಾನೆ ಕೆಲಕಾಲ ಗ್ರಾಮದ ಹಲವು ಬೀದಿಗಳಲ್ಲಿ ಓಡಾಡಿ ಆತಂಕ ಸೃಷ್ಟಿಸಿತು. ನಂತರ ಜನರ ಚೀರಾಟಕ್ಕೆ ಹೆದರಿ ಕಾಡಿನತ್ತ ತೆರಳಿದೆ ಎಂದು ಹೇಳಲಾಗುತ್ತಿದೆ. ಕೊಂಗಳ್ಳಿ ಗ್ರಾಮಕ್ಕೆ ಕಾಡಾನೆ ನುಗ್ಗಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗಿದೆ.

ಡಾ.ಅಂಬೇಡ್ಕರ್ ಅವರಿಗೆ ಪಿಟೀಲು ನುಡಿಸುವುದೆಂದರೆ ಅತ್ಯಂತ ಹೆಚ್ಚು ಪ್ರಿಯವಾಗಿತ್ತು; ಹೆಚ್.ಸಿ.ಮಹದೇವಪ್ಪ

ಜೆಎಸ್‌ಎಸ್ 30ನೇ ಸಂಗೀತ ಸಮ್ಮೇಳನಕ್ಕೆ ಚಾಲನೆ



ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಸಂಸ್ಮರಣಾರ್ಥ ಏರ್ಪಡಿಸಿರುವ ಜೆಎಸ್‌ಎಸ್ 30ನೇ ಸಂಗೀತ ಸಮ್ಮೇಳನವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಟಿ.ಎಸ್.ಶ್ರೀವತ್ಸ, ವಿದುಷಿ ಡಾ.ಟಿ.ಎಸ್.ಸತ್ಯವತಿ ಸೇರಿದಂತೆ ಇತರರಿದ್ದರು.

ಮೈಸೂರು, ಡಿ.2(ಎಸ್‌ಪಿಎನ್)– ಭಾರತಕ್ಕೆ ಸ್ವಾತಂತ್ರ್ಯ ಬರುವ ಸಂದರ್ಭದಲ್ಲಿ ಇಲ್ಲಿಯವರೆಗೆ ರಾಜ ಅರಮನೆಯಲ್ಲಿ ಹುಟ್ಟುತ್ತಿದ್ದರು. ಇನ್ಮುಂದೆ ರಾಜ ಮತಪೆಟ್ಟಿಗೆಯಲ್ಲಿ ಹುಟ್ಟುತ್ತಾನೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಹೇಳಿದ ಮಾತನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉಲ್ಲೇಖಿಸಿದರು.

ಮೈಸೂರು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಇಂದಿ (ಮಂಗಳವಾರ)ನಿಂದ ಡಿ.6ರವರೆಗೆ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಸಂಸ್ಮರಣಾರ್ಥ ಏರ್ಪಡಿಸಿರುವ 30ನೇ ಸಂಗೀತ ಸಮ್ಮೇಳನವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಭಾರತಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಡಾ.ಬಿ.ಆರ್.ಅಂಬೇಡ್ಕರ್ ಬ್ರಿಟಿಷರೊಂದಿಗೆ ರೌಂಡ್ ಟೇಬಲ್ ಚರ್ಚೆ ನಡೆಸಿದ ಬಳಿಕ ಪಿಟೀಲು ನುಡಿಸುತ್ತಿದ್ದರು. ಆಗ ಆಚಾರ್ಯ ಕೃಪಾಲನಿ(ಜೀವತ್ ರಾಮ್ ಭಗವಾನ್ ದಾಸ್ ಕೃಪಲಾನಿ) ಅವರು, ಅಂಬೇಡ್ಕರ್ ಅವರನ್ನು ಭೇಟಿ ಮಾಡಲು ಆಗಮಿಸುತ್ತಾರೆ. ಪಿಟೀಲು ನುಡಿಸುತ್ತಿದ್ದ ಅಂಬೇಡ್ಕರ್ ಅವರನ್ನು ಮಾತಿಗೆಳೆದು ನಿಮ್ಮ ಸಂತೋಷಕ್ಕೆ ಕಾರಣವೇನು ಎಂದು ಆಚಾರ್ಯ ಕೃಪಾಲನಿ, ಅಂಬೇಡ್ಕರ್ ಅವರನ್ನು ಕೇಳುತ್ತಾರೆ. ಇದಕ್ಕೆ ಅಂಬೇಡ್ಕರ್ ಪ್ರತಿಕ್ರಿಯಿಸಿ, ಭಾರತದಲ್ಲಿ ಇಲ್ಲಿಯವರೆಗೆ ರಾಜರ ಆಳ್ವಿಕೆ ಇತ್ತು. ಇನ್ನು ಮುಂದೆ ಜನರಿಗಾಗಿ, ಜನರಿಗೋಸ್ಕರ, ಜನರಿಗಾಗಿಯೇ ಇರುವ ಸರ್ಕಾರ ಭಾರತದಲ್ಲಿ ಆಡಳಿತ ನಡೆಸಲಿದೆ. ಅಂದರೆ, ಸ್ವಾತಂತ್ರ್ಯ ಪೂರ್ವದಲ್ಲಿ ರಾಜ ಅರಮನೆಯಲ್ಲಿ ಹುಟ್ಟುತ್ತಿದ್ದರು. ಇನ್ಮುಂದೆ ಮತಪೆಟ್ಟಿಗೆಯಲ್ಲಿ ರಾಜ ಹುಟ್ಟುತ್ತಾನೆ ಎಂದು ಅಂಬೇಡ್ಕರ್ ಹೇಳಿದ ಪ್ರಸಂಗವನ್ನು ಉಲ್ಲೇಖಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಪಿಟೀಲು ವಾದನ ಎಂದರೆ ಬಲು ಪ್ರಿಯವಾಗಿತ್ತು. ಸಂಗೀತದಿಂದ ಏನು ಬೇಕಾದರೂ ಸಾಧಿಸಬಹುದು. ಪ್ರಾರ್ಥನೆ ಮೂಲಕ ಗಾಂಧೀಜಿ ಜನರಿಗೆ ಸಂದೇಶ ನೀಡುತ್ತಿದ್ದರು. ಅಂಬೇಡ್ಕರ್ ಅವರಿಗೆ ಅತೀ ಸಂತೋಷವಾದಾಗ ಪಿಟೀಲು ನುಡಿಸುತ್ತಿದ್ದರು. ಅಂದರೆ ನಮ್ಮಲ್ಲಿನ ಒತ್ತಡ ಕಡಿಮೆ ಮಾಡಲು ಸಂಗೀತ ಥೆರಪಿಯಿಂದ ಸಾಧ್ಯವಿದೆ. ಭಾಷಣದಲ್ಲಿ, ಮಾತಿನಲ್ಲಿ ಹೇಳಲಾಗದ ಸಂದೇಶವನ್ನು ಸಂಗೀತದ ಮೂಲಕ ಸಮಾಜಕ್ಕೆ ತಿಳಿಸಬಹುದು. ಅಂತಹ ಶಕ್ತಿ ಸಂಗೀತಕ್ಕೆ ಮಾತ್ರ ಇದೆ. ದಾಸಶ್ರೇಷ್ಠರಲ್ಲಿ ಕನಕದಾಸರು, ಹರಿದಾಸರು, ಪುರಂದರ ದಾಸರು ಸೇರಿದಂತೆ ಅನೇಕ ದಾಸಪರಂಪರೆಯ ಮಹನೀಯರು ತಮ್ಮ ಹಾಡಿನ ಮೂಲಕ ಸಾಮಾಜಿಕ ಸಂದೇಶವನ್ನು ನೀಡಿದ್ದಾರೆ ಎಂದರು.

ಸುತ್ತೂರು ಮಠದ ಹಿರಿಯ ಶ್ರೀಗಳಾದ ಲಿಂಗೈಕ್ಯ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು 30 ವರ್ಷಗಳ ಹಿಂದೆಯೇ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಮೂಲಕ ಹಲವು ಸಂಗೀತಗಾರರಿಗೆ ವೇದಿಕೆ ಒದಗಿಸಿ, ಭಾರತೀಯ ಪರಂಪರೆಯನ್ನು ಉಳಿಸಿಕೊಂಡರು. ಈ ಮೂಲಕ 30ನೇ ಸಂಗೀತ ಸಮ್ಮೇಳನ ಕಾರ್ಯಕ್ರಮವನ್ನು ನನ್ನಿಂದ ಉದ್ಘಾಟಿಸಲು ಆಹ್ವಾನಿಸಿದ್ದು, ಅತೀವ ಸಂತೋಷವಾಗಿದೆ ಎಂದು ಹೇಳಿದರು.

ಸಂಗೀತ ಸೇವಾ ನಿಧಿ ಪ್ರಶಸ್ತಿ ಪ್ರದಾನ: ಈ ವೇಳೆ ಕಲಾಪೋಷಕ ಹಾಗೂ ಸಂಘಟಕ ಎಸ್.ರಾಮಪ್ರಸಾದ್ ಅವರಿಗೆ ಸಂಗೀತ ಸೇವಾನಿಧಿ ಪ್ರಶಸ್ತಿಯನ್ನು ನೀಡಿ, ಗೌರವಿಸಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ ಅವರು 'ನಾದನಮನ' ಸಂಚಿಕೆ ಬಿಡುಗಡೆಗೊಳಿಸಿದರು. ವೇದಿಕೆ ಕಾರ್ಯಕ್ರಮದ ನಂತರ ವಿದುಷಿ ಡಾ.ಟಿ.ಎಸ್.ಸತ್ಯವತಿ ಮತ್ತು ತಂಡ ಸಂಗೀತ ಗಾಯನ ನಡೆಸಿಕೊಟ್ಟರು. ವಿದುಷಿ ನಳಿನಾ ಮೋಹನ್ ವಯೋಲಿನ್, ವಿದ್ವಾನ್ ಕೆ.ಯು.ಜಯಚಂದ್ರರಾವ್ ಮೃದಂಗ, ವಿದ್ವಾನ್ ವಿ.ಎಸ್.ರಮೇಶ್ ಮೋರ್ಸಿಂಗ್ ನುಡಿಸಿ, ಕಾರ್ಯಕ್ರಮಕ್ಕೆ ಮೆರಗು ತಂದು ಕೊಟ್ಟರು. ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು. ಕೆ.ಅಶ್ವಿನಿ ಮತ್ತು ಡಾ.ಮೇಧಭಟ್ ಪ್ರಾರ್ಥಿಸಿದರು. ಪ್ರೊ.ಕೆ.ರಾಮಮೂರ್ತಿ ರಾವ್, ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಕಾರ್ಯದರ್ಶಿ ಟಿ.ಪಿ.ಪ್ರಭುಸ್ವಾಮಿ, ಡಾ.ಪೂರ್ಣಿಮಾ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಕಲೆಯನ್ನು ಹೆಚ್ಚು ಕಲಿತಷ್ಟು ಪ್ರೌಢಿಮೆ ಹೆಚ್ಚಾಗುತ್ತದೆ

ವಿದುಷಿ ಡಾ.ಟಿ.ಎಸ್.ಸತ್ಯವತಿ ಅಭಿಮತ

ಮೈಸೂರು,ಡಿ.2(ಎಸ್‌ಪಿಎನ್)– ಬೇರಿನ ಶಕ್ತಿಯೇ ಮರದ ಶಕ್ತಿ. ಮರದ ಬೇರು ಭದ್ರವಾದಷ್ಟೂ ಅದು ಎತ್ತರಕ್ಕೆ ಬೆಳೆಯಲು ಸಾಧ್ಯ. ಕಲೆಯೂ ಹಾಗೆಯೇ ಎಂದು 30ನೇ ಸಂಗೀತ ಸಮ್ಮೇಳನಾಧ್ಯಕ್ಷೆ ವಿದುಷಿ ಡಾ.ಟಿ.ಎಸ್.ಸತ್ಯವತಿ ಅಭಿಪ್ರಾಯಪಟ್ಟರು.

ಕಲಿಯುವ ಸಂದರ್ಭದಲ್ಲಿ ತಾವು ಕಲಿಯುತ್ತಿರುವ ವಿಶೇಷವಾದ ಕಲಾಪ್ರಕಾರವನ್ನು ಆಳವಾಗಿ ಅಧ್ಯಯನ ಮಾಡಿ, ಅದರ ರುಚಿ ದರ್ಶನ, ಗಮ್ಯಗಳು ಚೆನ್ನಾಗಿ ಮನದಟ್ಟಾದ ಮೇಲೆ(ಅಂದರೆ ಬೇರು ಭದ್ರವಾದ ಮೇಲೆ) ರೆಂಬೆಕೊಂಬೆಗಳನ್ನು, ಬೇರೆಯ ಕಲಾಪ್ರಕಾರಗಳ ಅಧ್ಯಯನದ ಮೂಲಕ ಕಲಾ ಸೌಂದರ್ಯಕ್ಕೆ, ಕಲೆಯ ಗೌರವಕ್ಕೆ ಧಕ್ಕೆ ಬಾರದ ರೀತಿ ಪ್ರಯೋಗ–ಪ್ರಯತ್ನಗಳಿಂದ ಬೆಳೆಸಬೇಕು. ಇಂತಹ ಅಧ್ಯಯನವೂ ಪುನಃ ಬೇರಿಗೇ ತನ್ನ ಪುಷ್ಟಿಯನ್ನು ನೀಡುತ್ತದೆ ಎಂದರು.

ಕಲಾ ಕ್ಷೇತ್ರ ಯಶಸ್ಸು ಕಾಣಬೇಕಾದರೆ, ನಮ್ಮ ಹಿರಿಯರೂ ಪರಂಪರೆಯನ್ನರಿತ ಪಂಡಿತರೂ ಆಧುನಿಕರಿಗೆ ಒತ್ತಾಸೆಯಾಗಿ ನಿಂತು ಮಾರ್ಗದರ್ಶನ ಮಾಡಿದರೆ, ಕಲೆಯ ಬೇರಿಗೆ ಕೊಡಲಿ ಬೀಳುವ ಭಯ ತಪ್ಪುತ್ತದೆ. ಹಿರಿಯರು ಸಂಪ್ರದಾಯದ ವಿಷಯದಲ್ಲಿ ವಿವೇಕದಿಂದ, ಆಧುನಿಕತೆ ವಿಷಯದಲ್ಲಿ ಸಹಾನುಭೂತಿಯಿಂದ ವರ್ತಿಸಬೇಕಾಗುತ್ತದೆ. ಖ್ಯಾತ ಚಿಂತಕರೊಬ್ಬರು ಸಂಪ್ರದಾಯಕ್ಕೆ ಜಿಗುಟುತನ, ಆಧುನಿಕತೆಗೆ ಅಹಂಕಾರ ಎಂದು ಸಾಂಪ್ರದಾಯಿಕರಿಗೂ ಆಧುನಿಕರಿಗೂ ಏಕಕಾಲದಲ್ಲಿ ಕನ್ನಡಿ ಹಿಡಿಯುವಂತಹ ಮಾತುಗಳನ್ನು ಹೇಳಿರುವ ಪ್ರಸಂಗವನ್ನು ವಿವರಿಸಿದರು.

ಪಿಎಂಒ ಕಚೇರಿಗೆ 'ಸೇವಾ ತೀರ್ಥ': ದೇಶದಲ್ಲಿರುವ ಎಲ್ಲಾ ರಾಜಭವನಗಳಿಗೆ 'ಲೋಕಭವನ' ಮರು ನಾಮಕರಣ!

ನವದೆಹಲಿ: ಪ್ರಧಾನಮಂತ್ರಿ ಕಚೇರಿಯ ಹೆಸರನ್ನು ಬದಲಾಯಿಸಲಾಗಿದೆ. ಪ್ರಧಾನಮಂತ್ರಿ ಕಚೇರಿಯನ್ನು ಇನ್ಮುಂದೆ 'ಸೇವಾ ತೀರ್ಥ' ಎಂದು ಕರೆಯಲಾಗುತ್ತದೆ. ಕೇಂದ್ರ ಸಚಿವಾಲಯದ ಹೆಸರನ್ನು ಸಹ 'ಕರ್ತವ್ಯ ಭವನ' ಎಂದು ಬದಲಾಯಿಸಲಾಗಿದೆ. ಈ ಬದಲಾವಣೆಗಳ ಜೊತೆಗೆ, ಕೇಂದ್ರ ಸರ್ಕಾರವು ದೇಶಾದ್ಯಂತ ರಾಜಭವನಗಳನ್ನು "ಲೋಕಭವನಗಳು" ಎಂದು ಮರುನಾಮಕರಣ ಮಾಡುವುದಾಗಿ ಘೋಷಿಸಿದೆ. ಈ ಹಿಂದೆ, ದೆಹಲಿಯ ರಾಜಪಥವನ್ನು 'ಕರ್ತವ್ಯ ಪಥ' ಎಂದು ಮರುನಾಮಕರಣ ಮಾಡಲಾಗಿತ್ತು. ಈಗ ಪ್ರಧಾನ ಮಂತ್ರಿ ನಿವಾಸವನ್ನು 'ಲೋಕ ಕಲ್ಯಾಣ ಮಾರ್ಗ' ಎಂದು ಕರೆಯಲಾಗುವುದು.

ಈ ಬದಲಾವಣೆಗಳ ನಡುವೆ, ಎಂಟು ರಾಜ್ಯಗಳು ಮತ್ತು ಉತ್ತರಾಖಂಡ, ಪಶ್ಚಿಮಬಂಗಾಳ ಮತ್ತು ತಮಿಳುನಾಡು ಸೇರಿದಂತೆ ಒಂದು ಕೇಂದ್ರಾಡಳಿತ ಪ್ರದೇಶವು ತಮ್ಮ ರಾಜಭವನಗಳ ಹೆಸರನ್ನು ಬದಲಾಯಿಸಿವೆ. ಗೃಹ ಸಚಿವಾಲಯ ಹೊರಡಿಸಿದ ನಿರ್ದೇಶನದ ನಂತರ ಈ ಬದಲಾವಣೆಗಳನ್ನು ಮಾಡಲಾಗಿದೆ. ಕಳೆದ ವರ್ಷ ರಾಜ್ಯಪಾಲರ ಸಮ್ಮೇಳನದಲ್ಲಿ ನಡೆದ ಚರ್ಚೆಯನ್ನು ಉಲ್ಲೇಖಿಸಿ, 'ರಾಜಭವನ' ಎಂಬ ಹೆಸರು ವಸಾಹತುಶಾಹಿ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಸಚಿವಾಲಯ ಹೇಳಿತ್ತು.

ಗೃಹ ಸಚಿವಾಲಯದ ನಿರ್ದೇಶನವನ್ನು ಅನುಸರಿಸಿ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಕಚೇರಿಗಳಿಂದ 'ರಾಜ್' ಪದವನ್ನು ತೆಗೆದುಹಾಕಲು ಪ್ರಾರಂಭಿಸಿವೆ. ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಅಸ್ಸಾಂ, ಉತ್ತರಾಖಂಡ್, ಒಡಿಶಾ, ಗುಜರಾತ್ ಮತ್ತು ತ್ರಿಪುರಗಳು 'ರಾಜ್ ಭವನ' ಅನ್ನು 'ಲೋಕ ಭವನ' ಎಂದು ಮರುನಾಮಕರಣ ಮಾಡಿವೆ. ಲಡಾಖ್‌ನ ರಾಜಭವನವನ್ನು 'ಲೋಕ ನಿವಾಸ್' ಎಂದು ಮರುನಾಮಕರಣ ಮಾಡಲಾಗಿದೆ.

ಬ್ರಿಟಿಷ್ ಪರಂಪರೆಯನ್ನು ಅಳಿಸಿ ಹಾಕುವ ಬಗ್ಗೆ ಒತ್ತು: ಭಾರತದಲ್ಲಿ ಬ್ರಿಟಿಷ್ ಪರಂಪರೆಯನ್ನು ನಿರ್ಮೂಲನೆ ಮಾಡಲು ಮೋದಿ ಸರ್ಕಾರ ಕೆಲಸ ಮಾಡುತ್ತಿದೆ. ಇದು ಹಿಂದೆ ರಾಜ್‌ಪಥ್ ಅನ್ನು ಕರ್ತವ್ಯ ಪಥ ಎಂದು ಮರುನಾಮಕರಣ ಮಾಡಿತ್ತು. ಸರ್ಕಾರಿ ವೆಬ್‌ಸೈಟ್‌ಗಳು ಈಗ ಮುಖ್ಯವಾಗಿ ಹಿಂದಿಯಲ್ಲಿ ವಿಷಯವನ್ನು ಪ್ರದರ್ಶಿಸುತ್ತಿವೆ. ಆದರೂ ಇಂಗ್ಲಿಷ್ ಕೂಡ ಲಭ್ಯವಿದೆ. ಬೀಟಿಂಗ್ ರಿಟ್ರೀಟ್ ಸಮಾರಂಭದಲ್ಲಿ ಬ್ಯಾಂಡ್‌ಗಳು ಇನ್ನು ಮುಂದೆ 'ಅಬೈಡ್ ವಿತ್ ಮಿ'ನಂತಹ ಇಂಗ್ಲಿಷ್ ಹಾಡುಗಳನ್ನು ನುಡಿಸುವುದಿಲ್ಲ.

ಹಿರಿಯ ನಾಗರಿಕರು ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡುವ ಬಗ್ಗೆಯೂ ಚಿಂತಿಸಬೇಕು



'ಹಿರಿಯ ನಾಗರಿಕರಿಗೆ ಖಾಸಗಿ ಕ್ಷೇತ್ರದಲ್ಲಿ ಆರ್ಥಿಕ ಹೂಡಿಕೆ' ಕುರಿತ ಉಪನ್ಯಾಸ

ಮೈಸೂರು, ಡಿ.2(ಎಸ್‌ಪಿಎನ್)– ಹಿರಿಯ ನಾಗರಿಕರು ಯಾವುದೇ ಹೂಡಿಕೆ ನಿರ್ಧಾರ ತೆಗೆದುಕೊಳ್ಳುವ ಮುನ್ನ ಹಣಕಾಸು ತಜ್ಞರನ್ನು ಸಂಪರ್ಕಿಸಿ, ಸೂಕ್ತ ಸಲಹೆ ಪಡೆದುಕೊಳ್ಳಬೇಕು ಎಂದು ಖಾಸಗಿ ಕಂಪನಿಯ ಮ್ಯೂಚುಯಲ್ ಫಂಡ್ ಡಿಸ್ಟ್ರಿಬ್ಯೂಟರ್ ಆರ್.ಎ.ಅರವಿಂದ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಹಿರಿಯ ನಾಗರಿಕರ ಮಂಡಳಿ ವತಿಯಿಂದ ಏರ್ಪಡಿಸಿದ್ದ 'ಹಿರಿಯ ನಾಗರಿಕರಿಗೆ ಖಾಸಗಿ ಕ್ಷೇತ್ರದಲ್ಲಿ ಆರ್ಥಿಕ ಹೂಡಿಕೆ' ವಿಷಯ ಕುರಿತು ಮಾತನಾಡಿದ ಅವರು, ಖಾಸಗಿ ಮ್ಯೂಚುಯಲ್ ಫಂಡ್‌ಗಳಲ್ಲಿ ಹಿರಿಯ ನಾಗರಿಕರು ಹೂಡಿಕೆ ಮಾಡುವ ಮುನ್ನ ಆರ್ಥಿಕ ತಜ್ಞರ ಸಲಹೆ ಪಡೆದು, ಹೂಡಿಕೆ ಮಾಡಬೇಕು. ಅಲ್ಲದೆ, ನಿಮ್ಮ ಮೊಬೈಲ್‌ಗಳಿಗೆ ಅಪರಿಚಿತ ವ್ಯಕ್ತಿಗಳು ಕಳುಹಿಸುವ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ ಎಂದು ಸಲಹೆ ನೀಡಿದರು.

ನಿಮ್ಮ ಮೊಬೈಲ್ ಫೋನ್‌ಗಳಲ್ಲಿ ಕುಟುಂಬ ವೈದ್ಯರು, ಆರ್ಥಿಕ ಸಲಹೆಗಾರರು, ಲೆಕ್ಕ ಪರಿಶೋಧಕರು ಮತ್ತು ತೆರಿಗೆ ಸಲಹೆಗಾರರ ಸಂಪರ್ಕ ಫೋನ್ ನಂಬರ್ ಸೇವ್ ಮಾಡಿಕೊಳ್ಳಿ ಎಂದ ಅವರು, ನೀವು ಜೀವಮಾನ ಪೂರ್ತಿ ದುಡಿದ ಉಳಿತಾಯ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್, ಎಲ್‌ಐಸಿ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳಲ್ಲಿ ಠೇವಣಿ ಇಟ್ಟರೆ ಕಡಿಮೆ ಬಡ್ಡಿ ಬರುತ್ತದೆ. ಆರ್ಥಿಕ ತಜ್ಞರ ಸಲಹೆಯಂತೆ ಮ್ಯೂಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ, ಲಾಭವಾಗುವ ಸಾಧ್ಯತೆಯಿದೆ. ಹಾಗಾಗಿ ಖಾಸಗಿ ಕ್ಷೇತ್ರದಲ್ಲೂ ಹೂಡಿಕೆ ಮಾಡುವ ಬಗ್ಗೆ ಚಿಂತನೆ ನಡೆಸುವಂತೆ ಸಲಹೆ ನೀಡಿದರು.

ಹಿರಿಯ ನಾಗರಿಕರು ಕೃಷಿ ಜಮೀನಿನ ಮೇಲೆ ಇಲ್ಲವೇ ನಿವೇಶನದ ಮೇಲೆ ಹೂಡಿಕೆ ಮಾಡಿದರೂ ನಿಮ್ಮ ಹಣಕ್ಕೆ ಲಾಭ ಬರುತ್ತದೆ. ಆದರೆ, ಕಾನೂನು ಬದ್ಧವಾಗಿ ಹೂಡಿಕೆ ಮಾಡಬೇಕು. ಕಾನೂನು ಬದ್ಧವಲ್ಲದ ಹೂಡಿಕೆ ಮಾಡುವುದರ ಬಗ್ಗೆ ಎಚ್ಚರವಹಿಸಬೇಕು ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಎಚ್.ಎಂ. ನಾಗರಾಜು, ಕಾರ್ಯದರ್ಶಿ ಕೆ.ಎನ್.ಕೃಷ್ಣ, ಉಪಾಧ್ಯಕ್ಷ ರಾಮನಾಥ್, ಎಸ್.ವಿ.ವೆಂಕಟೇಶ್, ಪಿ.ಎನ್.ಶ್ರೀಧರ್, ಡಿ.ಶ್ರೀನಿವಾಸ, ಸ್ವಾಮಿ, ಜಯಪಾಲ್ ಆರಾಧ್ಯ, ಎಂ.ಕೆ.ನಂಜಯ್ಯ ವಂದನಾರ್ಪಣೆ ಬಿ.ಎನ್.ಶ್ರೀಧರ್ ನಡೆಸಿಕೊಟ್ಟರು.

ಮೃಗಾಲಯದ ನೌಕರರ ಸಮಸ್ಯೆಗೆ ಪ್ರಾಮಾಣಿಕವಾಗಿ ಪರಿಹಾರ ಕಲ್ಪಿಸುತ್ತೇನೆ

ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ ಭರವಸೆ



ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ ಮಾತನಾಡಿದರು

ಮೈಸೂರು, ಡಿ.2(ವಿವಿಹೆಚ್)– ನನ್ನ ಆಡಳಿತಾವಧಿಯಲ್ಲಿ ಮೃಗಾಲಯದ ಯಾವುದೇ ನೌಕರನಿಗೂ ತೊಂದರೆಯಾಗಬಾರದು. ದುಡಿಯುವ ವರ್ಗಕ್ಕೆ ನ್ಯಾಯ ಒದಗಿಸುವುದು ನಮ್ಮ ಕರ್ತವ್ಯ ಎಂದು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ ಹೇಳಿದರು.

ಮೈಸೂರಿನ ವಿಶ್ವಮೈತ್ರಿ ಬುದ್ಧ ವಿಹಾರ ಆವರಣದಲ್ಲಿ ನಡೆದ ಶ್ರೀ ಚಾಮರಾಜೇಂದ್ರ ಮೃಗಾಲಯ ನೌಕರು ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯದಲ್ಲಿರುವ 9 ಮೃಗಾಲಯಗಳಲ್ಲಿಯೂ ಖಾಯಂ ನೌಕರರ ಸಂಖ್ಯೆ ಗಣನೀಯವಾಗಿ ಇಳಿಕೆ ಕಂಡಿದೆ. ಒಳ ಮತ್ತು ಹೊರ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಕನಿಷ್ಠ ವೇತನವನ್ನು ಜಾರಿ ಮಾಡದೇ, ಹೊರಗುತ್ತಿಗೆಯವರಿಗೆ ಅನ್ಯಾಯವಾಗುತ್ತಿರುವುದು ಗಮನಕ್ಕೆ ಬಂದಿದೆ. ಆದರೆ ನ್ಯಾಯ ಒದಗಿಸಲು ಕಾನೂನಿನ ಅಡೆತಡೆಗಳಿವೆ. ಸರ್ಕಾರವು ಗುತ್ತಿಗೆ ಆಧಾರಿತ ನೌಕರರಿಗೆ ಕೃಪಾಂಕ ನೀಡಿ ವೇತನ ನಿಗದಿಗೊಳಿಸುವ ಸಾಧ್ಯತೆಯಿದೆ ಎಂದು ತಿಳಿಸಿದರು.


ನೌಕರರು ಸಮಸ್ಯೆ ಇದ್ದರೆ ನೇರವಾಗಿ ಕಚೇರಿಗೆ ಬನ್ನಿ. ಕೇವಲ ಮೃಗಾಯಲಯ ವಿಷಯಕ್ಕೆ ಮಾತ್ರವಲ್ಲದೇ ಇತರೇ ವಿಷಯಗಳ ಬಗೆಗೂ ಚರ್ಚೆ ಮಾಡಿ. ಇಲ್ಲಿ ಚರ್ಚೆಯಾಗುವ ವಿಚಾರವನ್ನು ಅರಣ್ಯ ಸಚಿವರು ಹಾಗೂ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ. ಆ ಮೂಲಕ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕೆಲಸ ಮಾಡಲಾಗುವುದು ಎಂದು ಹೇಳಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಗುತ್ತಿಗೆ ಪದ್ಧತಿ ಗುಲಾಮಗಿರಿ ವ್ಯವಸ್ಥೆಯಾಗಿದ್ದು, ಎಲ್ಲಾ ಇಲಾಖೆಯಲ್ಲೂ ಆ ಪದ್ಧತಿ ರದ್ದುಗೊಳಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ದುಡಿಯುವ ವರ್ಗಕ್ಕೆ ವೃತ್ತಿಯ ಬದುಕು ಕಟ್ಟಿಕೊಡಲು ಸರ್ಕಾರ ಮೀನಾಮೇಷ ಎಣಿಸುತ್ತಿದೆ. ಆರೋಗ್ಯ, ಶಿಕ್ಷಣ, ನಿತ್ಯ ಜೀವನಕ್ಕೆ ವೇತನ ಸಾಲುತ್ತಿಲ್ಲ. ಸಮಾನ ಕೆಲಸಕ್ಕೆ ಸಮಾನ ವೇತನ ಮೃಗಾಲಯ ಪ್ರಾಧಿಕಾರದಲ್ಲಿ ಸಿಗುತ್ತಿಲ್ಲ. ಈ ಎಲ್ಲಾ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಸಂಘಟನೆ ಮಾಡಿಕೊಂಡಿದ್ದಾರೆ. ಈ ಸಂಘಟನೆ ಜೊತೆಗೂಡಿ ಮೃಗಾಲಯ ಪ್ರಾಧಿಕಾರದ ನೌಕಕರಿಗೆ ನ್ಯಾಯ ಸಿಗುವವರೆಗೂ ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.

ಸಮಾಜ ಸೇವಕ ಪೈಲ್ವಾನ್ ಚಂದ್ರಶೇಖರ್, ಸಂಘಟನೆ ಅಧ್ಯಕ್ಷ ಆನಂದ್ ಹಾಗೂ ಉಪಾಧ್ಯಕ್ಷ ವೆಂಕಟಯ್ಯ ಉಪಸ್ಥಿತರಿದ್ದರು.

ಐಎಸ್‌ಪಿಪಿಡಿ ಐಕಾನ್ ಪ್ರಶಸ್ತಿ



ಇತ್ತೀಚೆಗೆ ಒಡಿಸ್ಸಾದ ಭುವನೇಶ್ವರದಲ್ಲಿ ನಡೆದ 46ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಅಸೋಸಿಯೇಟ್ ಪ್ರೊಫೆಸರ್ ಡಾ. ಬೃಂದಾ ಸುಹಾಸ್ ಗೋಧಿ ಅವರಿಗೆ ಇಂಡಿಯನ್ ಸೊಸೈಟಿ ಆಫ್ ಪೆಡೋಡಾಂಟಿಕ್ಸ್ ಅಂಡ್ ಪ್ರಿವೆಂಟಿವ್ ಡೆಂಟಿಸ್ಟ್ರಿ (ಐಎಸ್‌ಪಿಪಿಡಿ) ಐಕಾನ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಈ ವೇಳೆ ಶಿಕ್ಷಾ 'ಓ' ಅನುಸಂಧಾನ ಉಪಕುಲಪತಿ ಪ್ರೊ ಪ್ರದೀಪ್ತ ಕುಮಾರ್ ನಂದಾ, ಐಎಸ್‌ಪಿಪಿಡಿ ಅಧ್ಯಕ್ಷ ಡಾ. ಎನ್.ಡಿ. ಶಶಿಕಿರಣ್ ಉಪಸ್ಥಿತರಿದ್ದರು.

ಮೊಟ್ಟೆ, ಚಿಕನ್ ಅಲ್ಲ: ಸರ್ಕಾರಿ ಶಾಲೆಯ ಬಿಸಿಯೂಟದಲ್ಲಿ 'ಕಪ್ಪೆ ಸಾಂಬರ್'

ಇಂದೋರ್: ಸರ್ಕಾರಿ ಶಾಲೆಗಳ ಬಿಸಿಯೂಟದ ಮೆನುವಿನಲ್ಲಿ ಮೊಟ್ಟೆ, ಚಿಕನ್ ಸೇರಿದಂತೆ ಮಾಂಸಾಹಾರ ಅಡುಗೆಯನ್ನು ಸೇರಿಸಬೇಕು ಎನ್ನುವ ಅಭಿಪ್ರಾಯವು ಸಾಮಾನ್ಯವಾಗಿ ಕೇಳಿಬರುತ್ತದೆ. ಆದರೆ, ಮಧ್ಯಪ್ರದೇಶದ ಸರ್ಕಾರಿ ಶಾಲೆಯೊಂದರ ಬಿಸಿಯೂಟದಲ್ಲಿ ಕಪ್ಪೆ ಸಾಂಬರ್ ಮಾಡಲಾಗಿದೆ.

ಮಧ್ಯಪ್ರದೇಶದ ಸರ್ಕಾರಿ ಶಾಲೆಯೊಂದರಲ್ಲಿ ಬಿಸಿಯೂಟ ತಯಾರಿಕೆಯ ವೇಳೆ ಅಡುಗೆಯವರ ಅಜಾಗರೂಕತೆಯಿಂದ ಸಾಂಬರ್‌ನಲ್ಲಿ ಕಪ್ಪೆ ಬಿದ್ದಿದೆ. ಸಾಂಬರ್ ಪಾತ್ರೆಯೊಳಗೆ ಸತ್ತ ಕಪ್ಪೆಯು ತೇಲುತ್ತಿರುವ ವಿಡಿಯೊ, ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಕಾಂಗ್ರೆಸ್ ಪಕ್ಷದ ಅಧಿಕೃತ ಜಾಲತಾಣ ಖಾತೆಯಲ್ಲಿ ಕೂಡ ಈ ವೀಡಿಯೊವನ್ನು ಹಂಚಿಕೊಳ್ಳಲಾಗಿದೆ. ಬಿಜೆಪಿ ನಾಯಕರು ಮತ್ತು ಸಚಿವರು ತಮ್ಮ ಮಕ್ಕಳಿಗೆ ಕಪ್ಪೆ ಸಾಂಬರ್ ತಿನ್ನಿಸುತ್ತಾರೆಯೇ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ತಮ್ಮ ಮಕ್ಕಳಿಗೆ ಉತ್ತಮ ಸೌಲಭ್ಯ ಒದಗಿಸುವ ಬಿಜೆಪಿ ನಾಯಕರು, ಬಡವರ ಮಕ್ಕಳಿಗೆ ಮಾತ್ರ ಕಪ್ಪೆ ಸಾಂಬರ್ ನೀಡುತ್ತಾರೆ. ಅವರಿಗೆ ನಾಚಿಕೆಯಾಗಬೇಕು ಎಂದು ಕಿಡಿಕಾರಿದೆ. ಕಪ್ಪೆ ಸಾಂಬರ್ ವೀಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ನೆಟ್ಟಿಗರು ವ್ಯಾಪಕ ಟೀಕೆ ವ್ಯಕ್ತಪಡಿಸಿದ್ದಾರೆ.

ಯೂಟ್ಯೂಬ್ ಪತ್ರಿಕೋದ್ಯಮ ವಿಶ್ವಾಸಾರ್ಹತೆ ಗಳಿಸಬೇಕು

ಮೀಡಿಯಾ ಮಾಸ್ಟರ್ ಸಂಸ್ಥಾಪಕ ಎಂ.ಎಸ್.ರಾಘವೇಂದ್ರ ಕಿವಿಮಾತು



ಎರಡು ದಿನಗಳ ವಿಚಾರಸಂಕಿರಣಕ್ಕೆ ಎಂ.ಎಸ್.ರಾಘವೇಂದ್ರ ಚಾಲನೆ ನೀಡಿದರು.

"ಡಿಜಿಟಲ್ ಯುಗದಲ್ಲಿ ನಮ್ಮ ವಿದ್ಯಾರ್ಥಿಗಳು ಮಿಂಚಿನಂತೆ ಮುನ್ನುಗ್ಗುವಂತಾಗಬೇಕು. ಅದಕ್ಕೆ ಪೂರಕವಾಗಿ ಬೇಕಾದ ತರಬೇತಿ ಕೊಡಿಸಲು ಇಂತಹ ವಿಚಾರಸಂಕಿರಣಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಎಲ್ಲ ವಿದ್ಯಾರ್ಥಿಗಳು ಇಂತಹ ವಿಚಾರ ಸಂಕಿರಣಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು.

-ಪ್ರೊ. ಎನ್.ಮಮತ, ಮುಖ್ಯಸ್ಥರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ

ಮೈಸೂರು, ಡಿ.2(ವಿವಿಹೆಚ್)– ಡಿಜಿಟಲ್ ಯುಗದಲ್ಲಿ ಯೂಟ್ಯೂಬ್ ಬಳಕೆದಾರರ ಪ್ರಮಾಣ ಹೆಚ್ಚಾಗಿದ್ದು, ಸುಳ್ಳು ಸುದ್ದಿ, ತಪ್ಪು ಮಾಹಿತಿ ಹರಡದಂತೆ ಎಚ್ಚರ ವಹಿಸಬೇಕಾದ ಅಗತ್ಯವಿದೆ ಎಂದು ಮೀಡಿಯಾ ಮಾಸ್ಟರ್ ಸಂಸ್ಥಾಪಕ ಎಂ.ಎಸ್.ರಾಘವೇಂದ್ರ ತಿಳಿಸಿದರು.

ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ, ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ ಮತ್ತು ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಸಂಸ್ಥೆಯಿಂದ ಡಿಜಿಟಲ್ ಮಾಧ್ಯಮಗಳ ಕುರಿತು ಮಾನಸಗಂಗೋತ್ರಿಯಲ್ಲಿ ಆಯೋಜಿಸಿದ್ದ ಎರಡು ದಿನಗಳ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಯೂಟ್ಯೂಬ್ ಪತ್ರಿಕೋದ್ಯಮ ವೇಗವಾಗಿ ಬೆಳೆಯುತ್ತಿದ್ದು, ಜನರನ್ನು ಬಹುಬೇಗ ತಲುಪುತ್ತಿದೆ. ಆದರೆ ಸುಳ್ಳು, ತಪ್ಪು ಮಾಹಿತಿ ಹರಡದಂತೆ ಎಚ್ಚರ ವಹಿಸಬೇಕು. ಅದರ ಸಾಧಕ–ಬಾಧಕಗಳ ಬಗ್ಗೆ ಎಚ್ಚರ ವಹಿಸಬೇಕು. ಆಗ ಮಾತ್ರ ಯೂ ಟ್ಯೂಬ್ ಬಗ್ಗೆ ಜನರಲ್ಲಿ ವಿಶ್ವಾಸ ಮೂಡುತ್ತದೆ ಎಂದು ಹೇಳಿದರು.

ಡಿಜಿಟಲ್ ಮಾಧ್ಯಮದ ಮ್ಯಾನೇಜಿಂಗ್ ಪಾರ್ಟ್ನರ್ ಆಕಾಶ್ ಹರಳಕಟ್ಟೆ ಯೂಟ್ಯೂಬ್ ಮಾನಿಟೈಸಿಂಗ್, ಸ್ಟಾರ್ಟಪ್ ಮತ್ತು ಯೂಟ್ಯೂಬ್ ಪ್ರಮೋಷನ್ ಹೇಗೆ ಮಾಡುವುದು ಎನ್ನುವುದರ ಕುರಿತು ಪ್ರಾಯೋಗಿಕವಾಗಿ ಉಪನ್ಯಾಸ ನೀಡಿದರು.

ಎರಡನೇ ದಿನದ ವಿಚಾರಸಂಕಿರಣದಲ್ಲಿ ಹಿರಿಯ ಪತ್ರಕರ್ತ ಎ. ಹರಿಪ್ರಸಾದ್ ಅವರು ಬಿಯಿಂಗ್ ಎ ಡಿಜಿಟಲ್ ನ್ಯೂಸ್ ಇನ್ ಇಕೋ ಸಿಸ್ಟಮ್ ಕುರಿತು ಉಪನ್ಯಾಸ ನೀಡಿ, ಯಾವುದೇ ಸಿದ್ಧಾಂತಗಳಿಗೆ ಒಳಗಾಗದೆ ಮಾಧ್ಯಮದಲ್ಲಿ ಒಂದೇ ಸಿದ್ಧಾಂತವನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪತ್ರಕರ್ತ ಪ್ರಸಾದ್‌ನಾಯಕ್ ಅವರು ಡಿಜಿಟಲ್ ಮಾಧ್ಯಮ ಮತ್ತು ಸುದ್ದಿ ಕುರಿತು ಮಾತನಾಡಿ, ಡಿಜಿಟಲ್ ಪ್ಲಾಟ್ ಫಾರ್ಮ್‌ಗೆ ಬರೆಯುವ ತಂತ್ರಗಾರಿಕೆ ಮತ್ತು ಸುಳ್ಳು ಸುದ್ದಿ ಪತ್ತೆ ಹಚ್ಚುವ ತಂತ್ರಾಂಶಗಳು ಹಾಗೂ ಸವಾಲುಗಳ ಕುರಿತು ಉಪನ್ಯಾಸ ನೀಡಿದರು.

ವಿಭಾಗದ ಮುಖ್ಯಸ್ಥೆ ಪ್ರೊ ಎನ್. ಮಮತಾ ಮಾತನಾಡಿ, ಡಿಜಿಟಲ್ ಯುಗದಲ್ಲಿ ನಮ್ಮ ವಿದ್ಯಾರ್ಥಿಗಳು ಮಿಂಚಿನಂತೆ ಮುನ್ನುಗ್ಗುವಂತಾಗಬೇಕು. ಅದಕ್ಕೆ ಪೂರಕವಾಗಿ, ಅವರಿಗೆ ಬೇಕಾದ ತರಬೇತಿ ಕೊಡಿಸಲು ಇಂತಹ ವಿಚಾರಸಂಕಿರಣಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಪ್ರಾಧ್ಯಾಪಕರಾದ ಪ್ರೊ. ಸಿ.ಕೆ.ಪುಟ್ಟಸ್ವಾಮಿ, ಪ್ರೊ.ಎಂ.ಎಸ್.ಸಪ್ನಾ, ಅತಿಥಿ ಉಪನ್ಯಾಸಕರು, ಸಂಶೋಧಕರು, ವಿದ್ಯಾರ್ಥಿಗಳು ಇದ್ದರು. ವಿಚಾರ ಸಂಕಿರಣದಲ್ಲಿ 70 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಪಿಯು ವಿದ್ಯಾರ್ಥಿಗಳಿಗೆ ಪರಿಹಾರ ಬೋಧನಾ ತರಗತಿ ಹಮ್ಮಿಕೊಳ್ಳಲು ಉಪನ್ಯಾಸಕರಿಗೆ ಡಿಡಿಪಿಯು ಸೂಚನೆ



ಮೈಸೂರಿನಲ್ಲಿ ಪದವಿಪೂರ್ವ ಗಣಿತಶಾಸ್ತ್ರ ಉಪನ್ಯಾಸಕರಿಗೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಗಣಿತ ದೀಪ್ತಿ ಕೈಪಿಡಿಯನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು, ಡಿ.2– ಪಿಯು ವಿದ್ಯಾರ್ಥಿಗಳಿಗೆ ಪರಿಹಾರ ಬೋಧನಾ ತರಗತಿಗಳನ್ನು ನಡೆಸುವ ಮೂಲಕ ಅವರನ್ನು ಪರೀಕ್ಷೆಗೆ ಸಜ್ಜುಗೊಳಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ) ಉಪನಿರ್ದೇಶಕಿ(ಡಿಡಿಪಿಯು) ಶ್ರೀಮತಿ ಎಂ.ಪಿ.ನಾಗಮ್ಮ ಉಪನ್ಯಾಸಕರಿಗೆ ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ) ಮತ್ತು ಮೈಸೂರು ಜಿಲ್ಲಾ ಪದವಿಪೂರ್ವ ಗಣಿತಶಾಸ್ತ್ರ ಉಪನ್ಯಾಸಕರ ವೇದಿಕೆಯ ಸಹಯೋಗದಲ್ಲಿ ನಗರದ ವಿಜಯ ವಿಠಲ ಪದವಿಪೂರ್ವ ಕಾಲೇಜಿನಲ್ಲಿ ಜಿಲ್ಲೆಯ ಗಣಿತಶಾಸ್ತ್ರ ಉಪನ್ಯಾಸಕರಿಗೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ, ಗಣಿತಶಾಸ್ತ್ರ ಕೈಪಿಡಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಗಣಿತಶಾಸ್ತ್ರದಲ್ಲಿ ಉತ್ತಮ ಅಂಕಗಳನ್ನು ಗಳಿಸಲು ಉಪನ್ಯಾಸಕರ ಮಾರ್ಗದರ್ಶನ ಅತ್ಯಗತ್ಯ. ಪ್ರಶ್ನೆಪತ್ರಿಕೆ ಮಾದರಿ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿ, ಪ್ರಶ್ನೆಗಳಿಗೆ ಉತ್ತರಿಸುವ ರೀತಿಯ ಬಗ್ಗೆ ಅರಿವು ಮೂಡಿಸಬೇಕು. ಪರಿಹಾರ ಬೋಧನಾ ತರಗತಿಗಳ ಮೂಲಕ ಪರೀಕ್ಷೆಗೆ ಸಜ್ಜುಗೊಳಿಸಬೇಕು. ಪರೀಕ್ಷೆ ಬಗ್ಗೆ ಯಾವುದೇ ಭಯ ಮೂಡದಂತೆ ಸ್ಥೈರ್ಯ ತುಂಬಬೇಕು. ಇದರಿಂದ ಗಣಿತ ವಿಷಯದಲ್ಲಿ ನಮ್ಮ ಜಿಲ್ಲೆ ಉತ್ತಮ ಫಲಿತಾಂಶ ಗಳಿಸಲು ಸಾಧ್ಯ ಎಂದರು.

ಎಂ.ಐ.ಟಿ ಕಾಲೇಜಿನ ಪ್ರಾಚಾರ್ಯ ವೈ.ಟಿ.ಕೃಷ್ಣೇಗೌಡ ಮಾತನಾಡಿ, ಗಣಿತ ಶಾಸ್ತ್ರವು ತರ್ಕ, ಕ್ರಮ, ಕಲ್ಪನೆ, ನಿಖರತೆ ಮತ್ತು ಸೃಜನಶೀಲತೆಗಳ ಅದ್ಭುತ ಸಂಯೋಜನೆಯಾಗಿದೆ. ಮಾನವನ ಪ್ರಗತಿಯ ಪ್ರತಿಯೊಂದು ಹಂತದಲ್ಲೂ ಗಣಿತಶಾಸ್ತ್ರದ ಕೊಡುಗೆ ಮಹತ್ವದ್ದಾಗಿದೆ. ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್, ರೋಬೊಟಿಕ್ಸ್ ಮುಂತಾದ ಕ್ಷೇತ್ರಗಳಲ್ಲಿ ಯಶಸ್ವಿಯಾಗಲು ಗಣಿತಶಾಸ್ತ್ರದ ಜ್ಞಾನ ಅತ್ಯವಶ್ಯಕ. ಗಣಿತ ಕಠಿಣವಾದ ವಿಷಯವೆಂಬ ಭಯಬಿಟ್ಟು ವಿದ್ಯಾರ್ಥಿಗಳು ಆತ್ಮ ವಿಶ್ವಾಸದಿಂದ ಈ ವಿಷಯದ ಮೂಲ ಪರಿಕಲ್ಪನೆಯನ್ನು ಗ್ರಹಿಸಬೇಕು. ಕೇವಲ ಪರೀಕ್ಷಾ ದೃಷ್ಟಿಯಿಂದ ಅಭ್ಯಾಸ ಮಾಡದೆ ತರ್ಕಬದ್ಧ ಚಿಂತನೆ, ಸಮಸ್ಯೆ ಪರಿಹಾರಕ್ಕೆ ಗಣಿತ ಕಲಿಯಬೇಕು ಎಂದು ಸಲಹೆ ನೀಡಿದರು.

ಈ ವೇಳೆ ವಿಜಯ ವಿಠಲ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಹೆಚ್. ಸತ್ಯಪ್ರಸಾದ್, ವೇದಿಕೆ ಅಧ್ಯಕ್ಷ ಮಂಜೇಗೌಡ, ಹಿರಿಯ ಪ್ರಾಚಾರ್ಯರಾದ ಟಿ.ಸಿ.ಸುದೀಪ್, ರವಿಶಂಕರ್, ಉದಯ ಶಂಕರ್, ಎಂ.ಆರ್.ರಾಜೇಶ್, ಶ್ರೀಮತಿ ಸುಶೀಲ, ಕರೀಗೌಡ, ಟಿ.ಕೆ.ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ವಿಜಯ ವಿಠಲ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಹೆಚ್.ಸತ್ಯಪ್ರಸಾದ್, ಪ್ರಥಮ ಪಿಯುಸಿ ಪ್ರಶ್ನೆಪತ್ರಿಕೆಯ ನೀಲಿ ನಕ್ಷೆ ಮತ್ತು ಮುಖ್ಯ ಪ್ರಶ್ನೆಗಳ ಬಗ್ಗೆ ಸಂವಾದ ನಡೆಸಿದರು. ಚಾಮರಾಜ ಜೋಡಿ ರಸ್ತೆ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ರವಿಶಂಕರ್, ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ ಮತ್ತು ನೀಲಿ ನಕ್ಷೆಯ ಬಗ್ಗೆ ವಿವರಿಸಿದರು. ಕಾರ್ಯಾಗಾರದಲ್ಲಿ ಜಿಲ್ಲೆಯ 120ಕ್ಕೂ ಹೆಚ್ಚು ಉಪನ್ಯಾಸಕರು ಪಾಲ್ಗೊಂಡಿದ್ದರು.

3.13 ಕೋಟಿ ರೂ. ವೆಚ್ಚದ ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ

ಮಾದರಿ ವಿದ್ಯುತ್ ಗ್ರಾಮವಾಗಿ ಗೋಳೂರು ಆಯ್ಕೆ: ದರ್ಶನ್



ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ.

ನಂಜನಗೂಡು: ಗ್ರಾಮೀಣ ಭಾಗದ ಜನರಿಗೆ ಮೂಲಸೌಕರ್ಯ ಒದಗಿಸುವ ಸಲುವಾಗಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ 3.13 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ತಾಲೂಕಿನ ಗೋಳೂರು, ವೀರೇದೇವನಪುರ, ಬದನವಾಳು, ಹಳೇಪುರ, ಹುಣಸನಾಳು, ಕುರಹಟ್ಟಿ, ಕಾಳಿಹುಂಡಿ ಗ್ರಾಮಗಳಲ್ಲಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ರವರು ನಂಜನಗೂಡು ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗಾಗಿ 10 ಕೋಟಿ ಅನುದಾನ ನೀಡಿದ್ದಾರೆ, ಆ ಅನುದಾನದಲ್ಲಿ ಇಂದು 3.13 ಕೋಟಿ ರೂ. ವೆಚ್ಚದಲ್ಲಿ ವಿವಿಧ ಗ್ರಾಮಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ, ಮುಖ್ಯಮಂತ್ರಿ ಸಿದ್ದರಾಮಯ್ಯರವರ ಆಶೀರ್ವಾದದಿಂದಾಗಿ ಕ್ಷೇತ್ರಕ್ಕೆ ಅತಿ ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸಿದ್ದಾರೆ, ಕಳೆದ ಸಾಲಿನಲ್ಲಿ 25 ಕೋಟಿ ವಿಶೇಷ ಅನುದಾನವನ್ನು ನೀಡಿದ್ದರು, ಅದರಲ್ಲಿ 20 ಕೋಟಿ ಸಾಮಾನ್ಯ ವರ್ಗದ ಬೀದಿಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮ ಗಾರಿಗೆ ಮೀಸಲಿಟ್ಟು ಕಾಮಗಾರಿಗಳನ್ನು ನಡೆಸಲಾಗಿದೆ ಎಂದರು.

ತಾಲೂಕಿನ ಗೋಳೂರು ಗ್ರಾಮದಲ್ಲಿ 1 ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ, ತಾಲೂಕಿನ ಬದನವಾಳು ಗ್ರಾಮದಲ್ಲಿ ಗಾಂಧೀಜಿ ಅವರು ಸ್ಥಾಪಿಸಿರುವ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರದಲ್ಲಿ 25 ಲಕ್ಷ ವೆಚ್ಚದಲ್ಲಿ ಕಾಂಪೌಂಡ್ ನಿರ್ಮಾಣ ಮಾಡಲಾಗುವುದು, ವೀರೇದೇವನಪುರ, ಕಾಳಿಹುಂಡಿ, ಹಳೇಪುರ ಗ್ರಾಮಗಳಲ್ಲಿ ತಲಾ 14.5 ಲಕ್ಷ ವೆಚ್ಚದಲ್ಲಿ ನೂತನ ಶಾಲಾ ಕೊಠಡಿ ನಿರ್ಮಾಣ, ತಾಲೂಕಿನ ಕುರಹಟ್ಟಿ ಗ್ರಾಮದ ಗೆಜ್ಜಗಾರ ಕಾಲೋನಿಯಲ್ಲಿ 20 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ, ನಾಯಕರ ಜನಾಂಗದ ಬೀದಿಯಲ್ಲಿ 20 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ, ತಾಲೂಕಿನ ಹುಣಸನಾಳು ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ, ಕಾಳಿಹುಂಡಿ ಗ್ರಾಮದಲ್ಲಿ 30 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು, ಕಾಮಗಾರಿಗಳು ಗುಣಮಟ್ಟದಿಂದ ನಡೆದು ಜನರಿಗೆ ಅನುಕೂಲವಾಗಲಿವೆ ಎಂದರು.

ಗೋಳೂರು ಮಾದರಿ ವಿದ್ಯುತ್ ಗ್ರಾಮ: ತಾಲೂಕಿನ ಗೋಳೂರು ಗ್ರಾಮವನ್ನು ಮಾದರಿ ವಿದ್ಯುತ್ ಗ್ರಾಮವನ್ನಾಗಿ ಆಯ್ಕೆ ಮಾಡಲಾಗಿದೆ, ಸುಮಾರು 50 ಲಕ್ಷ ವೆಚ್ಚದಲ್ಲಿ ಹೊಸ ವಿದ್ಯುತ್ ಪರಿವರ್ತಕಗಳು, ಎಲ್.ಟಿ, ಹೆಚ್ ಕೇಬಲ್ ಅಳವಡಿಸಲಾಗುವುದು, ಅಗತ್ಯವಿದ್ದ ಕಡೆ ವಿದ್ಯುತ್ ಕಂಬ ಅಳವಡಿಕೆ, ಸ್ಥಳಾಂತರ ಕಾಮಗಾರಿಗಳು ನಡೆಯಲಿವೆ ಇದರಿಂದ ಗ್ರಾಮದಲ್ಲಿ ವಿದ್ಯುತ್ ಸಮಸ್ಯೆ ಬಗೆಹರಿಸಲು ಮತ್ತು ವಿದ್ಯುತ್ ಅಪಘಾತಗಳನ್ನು ತಪ್ಪಿಸಲು ಸಾಧ್ಯವಾಗಲಿದೆ ಜನರಿಗೆ ಗುಣಮಟ್ಟದ ವಿದ್ಯುತ್ ಲಭ್ಯವಾಗಲಿದೆ, ಮುಂದಿನ ದಿನಗಳಲ್ಲಿ ಕ್ಷೇತ್ರದ ಒಂಬತ್ತು ಗ್ರಾಮಗಳಲ್ಲಿ ಮಾದರಿ ವಿದ್ಯುತ್ ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು ತಲಾ 50 ಲಕ್ಷ ವೆಚ್ಚದಲ್ಲಿ ಕಾಮಗಾರಿ ನಡೆಯಲಿವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿಕೆ.ಜಿ.ಮಹೇಶ್, ಗ್ರಾಪಂ ಸದಸ್ಯರಾದ ಗೋಳೂರು ಮುದ್ದುಮಾದಶೆಟ್ಟಿ, ದೊಡ್ಡಮ್ಮ, ಶೋಭಾ, ವೀರದೇವನಪುರ ರಂಗದಾಸ್, ಮುಖಂಡರಾದ ವಿಜಯ್ ಕುಮಾರ್, ಶ್ರೀನಿವಾಸಮೂರ್ತಿ, ಮಹದೇವಸ್ವಾಮಿ, ಹುಣಸನಾಳುಸಿದ್ದರಾಜು, ಬದನವಾಳು ಸೋಮು, ಕುರಹಟ್ಟಿ ಜಗದೀಶ್, ಶಿವಮೂರ್ತಿ, ರಂಗಸ್ವಾಮಿ, ವಿಜಯ್ ಕುಮಾರ್, ಚೆಸ್ಕಾಂ ಕಾರ್ಯಪಾಲಕ ಇಂಜಿನಿಯರ್ ಆನಂದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ದೇವರಾಜಯ್ಯ, ಕಿರಣ್ ಕುಮಾರ್, ಎಇ ರಂಗಸ್ವಾಮಿ, ಸಂಗೀತ, ಪಂಚಾಯತ್ ರಾಜ್ ಎಇಇ ರಾಜು, ಎಇ ಶಿವಮೂರ್ತಿ, ಮಹದೇವ, ಶಿವಪ್ರಕಾಶ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಕೊಪ್ಪಲು ಡೇರಿ ಅಧ್ಯಕ್ಷರಾಗಿ ಸುನಿಲ್, ಜಯಲಕ್ಷ್ಮಿ ಉಪಾಧ್ಯಕ್ಷೆ



ಕಂಪಲಾಪುರ: ಕಂಪಲಾಪುರ ಕೊಪ್ಪಲು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಎನ್.ಸುನಿಲ್ ಹಾಗೂ ಉಪಾಧ್ಯಕ್ಷರಾಗಿ ಎಸ್.ಎಲ್.ಜಯಲಕ್ಷ್ಮಿ ಆಯ್ಕೆಯಾಗಿದ್ದಾರೆ.

11 ಸದಸ್ಯರ ಬಲ ಹೊಂದಿರುವ ಈ ಸಂಘದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸುನಿಲ್, ಮಣಿಕಂಠ, ಮಹೇಶ್ ನಾಮಪತ್ರ ಸಲ್ಲಿಸಿದ್ದರು. ಅದರಲ್ಲಿ ಮಣಿಕಂಠ ನಾಮಪತ್ರ ವಾಪಾಸ್ ಪಡೆದರು. ನಂತರ ಚುನಾವಣೆ ನಡೆದು ಸುನಿಲ್ 7 ಮತ ಪಡೆದು ಜಯಗಳಿಸಿದರೆ ಮಹೇಶ್ ಯಾವುದೇ ಮತ ಪಡೆಯದೇ ಸೋಲುಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಜಯಲಕ್ಷ್ಮಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಗಿರೀಶ್ ಅಧಿಕೃತವಾಗಿ ಘೋಷಿಸಿದರು.

ಇದೇ ಸಂದರ್ಭದಲ್ಲಿ ಸಿಇಒ ಲೋಕೇಶ್, ನಿರ್ದೇಶಕರಾದ ಗಿರೀಶ್, ಕೀರ್ತಿ, ಶಿವಕುಮಾರ್, ಸದಾನಂದ, ರಾಮಚಂದ್ರ, ಹಾಲು ಪರೀಕ್ಷಕ ಮಂಜು ಮತ್ತಿತರರು ಹಾಜರಿದ್ದರು.

ಎನ್.ಎಂ.ರಾಮಚಂದ್ರ ಬಿಜೆಪಿಗೆ ನೇಮಕ



ತಿ.ನರಸೀಪುರ, ಡಿ.2–ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿಯ ಪ್ರಧಾನ ಕಾರ್ಯದರ್ಶಿಯಾಗಿ ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ನುಗ್ಗಹಳ್ಳಿ ಕೊಪ್ಪಲು ಎನ್.ಎಂ.ರಾಮಚಂದ್ರರವರನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆದೇಶದ ಮೇರೆಗೆ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಕೆ.ಆರ್.ನಗರ, ಸಾಲಿಗ್ರಾಮದಲ್ಲಿ ಭತ್ತ, ರಾಗಿ ಖರೀದಿ ಏಜೆನ್ಸಿ

ಕೆ.ಆರ್.ನಗರ: ಮುಂಗಾರು ಋತುವಿನಲ್ಲಿ ರೈತರು ಬೆಳೆದಿರುವ ಭತ್ತ ಮತ್ತು ರಾಗಿಯನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಸರ್ಕಾರದಿಂದ ಆದೇಶವಾಗಿದೆ. ಕೆ.ಆರ್.ನಗರ, ಸಾಲಿಗ್ರಾಮ ತಾಲೂಕುಗಳಲ್ಲಿ ಭತ್ತ ಮತ್ತು ರಾಗಿ ಖರೀದಿ ಏಜೆನ್ಸಿಯಾಗಿ ಕರ್ನಾಟಕ ಆಹಾರ ಮತ್ತು ಸರಬರಾಜು ನಿಗಮವನ್ನು ಸರ್ಕಾರದಿಂದ ನೇಮಿಸಲಾಗಿದೆ.

ಕೆ.ಆರ್.ನಗರ ಪಟ್ಟಣದ ಎಪಿಎಂಎಸ್ ಮಾರುಕಟ್ಟೆ ಆವರಣದಲ್ಲಿ ಮತ್ತು ಸಾಲಿಗ್ರಾಮ ಪಟ್ಟಣದ ಎಪಿಎಂಎಸ್ ಮಾರುಕಟ್ಟೆ ಆವರಣದಲ್ಲಿ ಹಾಗೂ ಚುಂಚನಕಟ್ಟೆ ಪ್ರವಾಸಿ ಮಂದಿರದ ಆವರಣದಲ್ಲಿ ಈಗಾಗಲೆ ರಾಗಿ ಖರೀದಿ ಸಂಬಂಧ ನೋಂದಣಿ ಪ್ರಕ್ರಿಯೆ ನಡೆಯುತ್ತಿದ್ದು, ಭತ್ತ ಖರೀದಿ ಸಂಬಂಧ ನೋಂದಣಿಯನ್ನು ಪುನರ್ ಪ್ರಾರಂಭಿಸಲಾಗಿದ್ದು, ರೈತರು ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಲು ಕೋರಿದೆ. ಭತ್ತ ಮತ್ತೂ ರಾಗಿ ಖರೀದಿ ನೊಂದಣಿ ಕೇಂದ್ರವನ್ನು ತೆರೆಯಲಾಗಿದ್ದು, ರೈತ ಬಾಂದವರು ಫ್ರೂಟ್ ಐಡಿ, ಆಧಾರ್ ಪ್ರತಿ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳೊಂದಿಗೆ ನೋಂದಣಿ ಮಾಡಿಸಬಹುದಾಗಿದೆ.

14 ವರ್ಷದ ನಂತರ ದಲಿತರಿಗೆ ದೇವಸ್ಥಾನಕ್ಕೆ ಪ್ರವೇಶ



ದೇವಸ್ಥಾನಕ್ಕೆ ಪ್ರವೇಶಾವಕಾಶ ಕಲ್ಪಿಸಿದವರಿಗೆ ಅಭಿನಂದಿಸುತ್ತಿರುವುದು.

ಹುಣಸೂರು.ಡಿ.2– ತಹಸೀಲ್ದಾರ್ ಮಂಜುನಾಥ್ ಅವರ ಪ್ರಯತ್ನದಿಂದ ಗಾವಡಗೆರೆ ಹೋಬಳಿ ಬಿಳಿಗೆರೆ ಗ್ರಾಮದ ದಲಿತರಿಗೆ 14 ವರ್ಷಗಳ ನಂತರ ದೇವಸ್ಥಾನಕ್ಕೆ ಮುಕ್ತ ಪ್ರವೇಶ ಕಲ್ಪಿಸಲಾಯಿತು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಮಂಜುನಾಥ್ ಅವರು ದಲಿತರು ಮತ್ತು ಸವರ್ಣೀಯರಿಂದ ಒಟ್ಟಾಗಿ ದೇವಸ್ಥಾನದ ಪೂಜಾ ಕಾರ್ಯ ನೆರವೇರಿಸಿ ಮಾತನಾಡಿ ಬಿಳಿಗೆರೆ ಗ್ರಾಮದ ಮುಜರಾಯಿ ಇಲಾಖೆಗೆ ಸೇರಿದ ಮಲ್ಲೇಶ್ವರ ದೇವಸ್ಥಾನದ ಪೂಜಾ ಕಾರ್ಯವು ಕಳೆದ 14 ವರ್ಷಗಳಿಂದ ಗ್ರಾಮದಲ್ಲಿ ನಿಂತು ಹೋಗಿತ್ತು.

ಈ ಬಗ್ಗೆ ದಲಿತ ಮುಖಂಡರಾದ ನಿಂಗರಾಜ್ ಮಲ್ಲಾಡಿ, ಡಿ.ಕುಮಾರ್, ರೈತ ಸಂಘದ ಹೊಸೂರು ಕುಮಾರ್ ಮುಂತಾದವರು ಬಿಳಿಗೆರೆ ಗ್ರಾಮದಲ್ಲಿ ಆಚರಿಸಲಾಗುತ್ತಿರುವ ಈ ಅಸಮಾನತೆಯನ್ನು ತಾಲೂಕು ಆಡಳಿತ ತುಂಬಾ ಗಂಭೀರವಾಗಿ ಪರಿಗಣಿಸಿ ದಲಿತರಿಗೆ ಸಮಾನತೆಯನ್ನು ಕಲ್ಪಿಸಿಕೊಟ್ಟು ಗ್ರಾಮದಲ್ಲಿ ಶಾಂತಿ, ಸೌಹಾರ್ದತೆ ನೆಲೆಸುವಂತೆ ಕ್ರಮ ಕೈಗೊಳ್ಳಬೇಕೆಂದು ಉಪವಿಭಾಗ ಮಟ್ಟದ ಎಸ್.ಸಿ/ಎಸ್.ಟಿ ಸಭೆಯಲ್ಲಿ ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಈ ವಿಷಯವನ್ನು ನಾನು ತುಂಬಾ ಗಂಭೀರವಾಗಿ ಪರಿಗಣಿಸಿ ಬಿಳಿಗೆರೆ ಗ್ರಾಮದ ದಲಿತರು ಮತ್ತು ಸವರ್ಣೀಯ ಮುಖಂಡರುಗಳನ್ನು ಪ್ರತ್ಯೇಕವಾಗಿ ಸಭೆ ಮಾಡಿ ಅವರ ಸಮಸ್ಯೆಗಳನ್ನು ಕೇಳಿಕೊಂಡು ಎರಡು ಸಮುದಾಯದ ಮುಖಂಡರು ಮತ್ತು ತಾಲೂಕು ಮಟ್ಟದ ಸಂಘಟನೆಯ ಮುಖಂಡರುಗಳನ್ನು ಒಟ್ಟಿಗೆ ಸೇರಿಸಿ ದೇವಸ್ಥಾನದಲ್ಲಿ ಪೂಜಾ ಕಾರ್ಯವನ್ನು ಮಾಡಿಸಿದರು.

ದೇವಸ್ಥಾನದ ಅರ್ಚಕರಾದ ಮಹದೇವಪ್ಪ ಸುರೇಶರವರು ತಹಸೀಲ್ದಾರ್ ಮಂಜುನಾಥ್ ಹಾಗೂ ಎರಡು ಕೋಮಿನ ಮುಖಂಡರ ಸಮ್ಮುಖದಲ್ಲಿ ಪೂಜೆ ಮಾಡಿ ಆರತಿ ಕೊಟ್ಟು ಪ್ರಸಾದ ವಿತರಿಸಿದರು.

ಎಪಿಎಂಸಿಯಲ್ಲಿ ಮಳಿಗೆ ನಿರ್ಮಿಸಿದರೆ ತರಕಾರಿ ಮಾರಾಟ ಸ್ಥಗಿತ

ತರಕಾರಿ ವ್ಯಾಪಾರಿಗಳು, ದಲ್ಲಾಳಿ, ಎಪಿಎಂಸಿ ಕಾರ್ಯದರ್ಶಿ ನಡುವೆ ಮಾತಿನ ಚಕಮಕಿ



ಮಳಿಗೆ ಕಾಮಗಾರಿಯನ್ನು ಕೈ ಬಿಡುವಂತೆ ತರಕಾರಿ ವ್ಯಾಪಾರಸ್ಥರು ಹಾಗೂ ದಲ್ಲಾಳಿಗಳು ಕಾರ್ಯದರ್ಶಿಯವರನ್ನು ಒತ್ತಾಯಿಸಿದರು.

ತಿ.ನರಸೀಪುರ, ಡಿ.2– ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದ ಪ್ಲಾಟ್ ಫಾರಂನಲ್ಲಿ ಮಳಿಗೆ ನಿರ್ಮಾಣ ಮಾಡಲು ಹೊರಟಿರುವ ಅಧಿಕಾರಿಗಳ ನಡೆಗೆ, ಪರವಾನಗಿ ಪಡೆದಿರುವ ಮಾರುಕಟ್ಟೆ ದಲ್ಲಾಳಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಒಂದು ವೇಳೆ ಮಳಿಗೆ ನಿರ್ಮಾಣ ಮಾಡಿದ್ದೇ ಆದಲ್ಲಿ ವ್ಯಾಪಾರಿಗಳು ಮಾರುಕಟ್ಟೆ ಆವರಣದಲ್ಲಿ ತರಕಾರಿ ಮಾರಾಟ ಮಾಡುವುದನ್ನು ನಿಲ್ಲಿಸುತ್ತೇವೆ ಎಂದು ಎಚ್ಚರಿಸಿದ್ದಾರೆ.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಹಲವಾರು ವರ್ಷಗಳಿಂದ ಬೆಳಿಗ್ಗೆ 4 ಗಂಟೆಗಳ ಕಾಲ ವ್ಯಾಪಾರಿಗಳು ಚಿಲ್ಲರೆಯಾಗಿ ತರಕಾರಿ ವ್ಯಾಪಾರ ಮಾಡುತ್ತಾ ಬಂದಿದ್ದು, ಈಗ ತರಕಾರಿ ವ್ಯಾಪಾರ ಮಾಡುವ ಪ್ಲಾಟ್ ಫಾರಂನಲ್ಲಿ ಮಳಿಗೆ ನಿರ್ಮಾಣ ಮಾಡಲು ಮಾರುಕಟ್ಟೆ ಸಮಿತಿ ಮುಂದಾಗಿದೆ. ಈ ಸಂಬಂಧ ಈಗಾಗಲೇ ಮಳಿಗೆ ನಿರ್ಮಾಣಕ್ಕೆ ಬೇಕಾದ ಇಟ್ಟಿಗೆಯನ್ನು ಸ್ಥಳದಲ್ಲಿ ಸಂಗ್ರಹಿಸಿಟ್ಟಿದೆ. ಇದನ್ನು ಗಮನಿಸಿದ ದಲ್ಲಾಳಿಗಳು ಮಳಿಗೆ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಎಂ.ಸೋಮಣ್ಣರವರನ್ನು ಭೇಟಿ ಮಾಡಿ ಉದ್ದೇಶಿತ ಕಾಮಗಾರಿ ಕೈ ಬಿಡುವ ಮೂಲಕ ವ್ಯಾಪಾರಸ್ಥರಿಗೆ ಅನುಕೂಲ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಆದರೆ ಇದಕ್ಕೊಪ್ಪದ ಕಾರ್ಯದರ್ಶಿ ಎಂ.ಸೋಮಣ್ಣ ಕೃಷಿ ಉತ್ಪನ್ನ ಮಾರುಕಟ್ಟೆಯು ವ್ಯಾಪಾರಸ್ಥರ ಅನುಕೂಲಕ್ಕಾಗಿಯೇ ಮಳಿಗೆ ನಿರ್ಮಾಣಕ್ಕೆ ಮುಂದಾಗಿದೆ. ಮಳಿಗೆ ನಿರ್ಮಾಣಕ್ಕಾಗಿ ಸರ್ಕಾರದ ಹಂತದಲ್ಲಿ ಕೆಲಸ ಮಂಜೂರಾಗಿದೆ. ಕಾಮಗಾರಿಗೆ 15 ಲಕ್ಷ ರೂ.ಗಳ ಅನುದಾನ ಸಹ ಬಿಡುಗಡೆ ಮಾಡಲಾಗಿದೆ ಮಳಿಗೆ ನಿರ್ಮಾಣ ಮಾಡದೇ ಇದ್ದಲ್ಲಿ ಅನುದಾನ ವಾಪಸ್ ಹೋಗಲಿರುವುದರಿಂದ ಮಳಿಗೆ ನಿರ್ಮಾಣ ಅನಿವಾರ್ಯವಾಗಿದ್ದು ಇದರಲ್ಲಿ ಯಾವುದೇ ಬದಲಾವಣೆ ಇಲ್ಲ, ಅದೂ ಅಲ್ಲದೇ ದಲ್ಲಾಳಿಗಳು ಕಾಮಗಾರಿ ಆರಂಭಿಸುವ ಹಂತದಲ್ಲಿ ಕಾಮಗಾರಿ ನಿಲ್ಲಿಸುವಂತೆ ಒತ್ತಡ ಹೇರಿರುವುದರಿಂದ ನಾವು ಸರ್ಕಾರದ ಆದೇಶವನ್ನು ಕಡೆಗಣಿಸಲು ಸಾಧ್ಯವಿಲ್ಲ ಎಂದರು.

ಈ ವೇಳೆ ಕಾರ್ಯದರ್ಶಿ ಹಾಗು ದಲ್ಲಾಳಿ ಮತ್ತು ತರಕಾರಿ ವ್ಯಾಪಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು, ಮಳಿಗೆ ನಿರ್ಮಿಸುವ ಸಂಬಂಧ ನೀವು ನಮಗೆ ನೋಟಿಸ್ ನೀಡಿಲ್ಲ, ಏಕಾಏಕಿ ಕಾಮಗಾರಿಗೆ ಮುಂದಾದರೆ ನಾವು ಒಪ್ಪಲು ಸಾಧ್ಯವಿಲ್ಲ. ನೀವು ಬೇಕಂತಲೇ ನಮ್ಮ ವ್ಯಾಪಾರಕ್ಕೆ ಅಡ್ಡಿ ಪಡಿಸಲು ಮುಂದಾಗಿದ್ದೀರಾ ಎಂದು ಮಂಡಿ ಮಹೇಶ್ ದೂರಿದರು.

ಅಂತಿಮವಾಗಿ ಕಾರ್ಯದರ್ಶಿ ಸೋಮಣ್ಣ ದಲ್ಲಾಳಿಗಳ ಬೇಡಿಕೆಯನ್ನು ಜಿಲ್ಲಾ ಎಪಿಎಂಸಿ ಅಧಿಕಾರಿಗಳ ಗಮನಕ್ಕೆ ತಂದು ಆಗಬಹುದಾದ ಅನುಕೂಲ ಕಲ್ಪಿಸಿಕೊಡಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ದಲ್ಲಾಳಿಗಳು ನಿಯೋಗದ ಮೂಲಕ ಜಿಲ್ಲಾ ಎಪಿಎಂಸಿ ಅಧಿಕಾರಿಗಳನ್ನು ಭೇಟಿ ಮಾಡಿ ಮಾರುಕಟ್ಟೆ ಸಮಿತಿ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮಳಿಗೆ ನಿರ್ಮಾಣವನ್ನು ಕೈಬಿಡುವಂತೆ ಮನವಿ ಸಲ್ಲಿಸಲು ನಿರ್ಧರಿಸಿದರು.

ಈ ವೇಳೆ ಎಸ್.ಡಿ.ಸಿದ್ದರಾಜು, ಪ್ರಸನ್ನ, ಕರಿಯಪ್ಪ, ಟಿ.ಕುಮಾರ್, ನವೀನ್, ಮಧು, ಶಶಿಕುಮಾರ್, ರಾಜನಾಯಕ, ದುಂಡಪ್ಪ, ದಿಲೀಪ್, ಸೀನ ಹಾಜರಿದ್ದರು.

ವಾಲ್ಮೀಕಿ ಮಹರ್ಷಿಗಳ ತತ್ವ, ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಲು ಶಾಸಕ ದರ್ಶನ್ ಕರೆ



ಮಲ್ಕುಂಡಿ: ವಾಲ್ಮೀಕಿ ಮಹರ್ಷಿಗಳ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಂಡಾಗ ತಮ್ಮ ಜೀವನದಲ್ಲಿ ಸುಧಾರಣೆಯಾಗುತ್ತದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ಸಮೀಪದ ಹುರ ಗ್ರಾಮದಲ್ಲಿ ಶ್ರೀ ವಾಲ್ಮೀಕಿ ಯುವಕರ ಬಳಗದ ವತಿಯಿಂದ ಆಯೋಜಿಸಿದ ಶ್ರೀ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯದಂತಹ ಅಮರ ಕಾವ್ಯವನ್ನು ರಚಿಸಿ ಮಾನವೀಯತೆಯಿಂದ ಬದುಕಲು ದಾರಿ ದೀಪ ತೋರಿಸಿಕೊಟ್ಟ ಒಬ್ಬ ಮಹಾನ್ ವ್ಯಕ್ತಿ ವಾಲ್ಮೀಕಿ. ಅವರು ತೋರಿದ ಅದರ್ಶ ನೀತಿ ಪಾಠಗಳನ್ನು ಯುವ ಜನಾಂಗ ತಮ್ಮ ಬದುಕಿನಲ್ಲಿ ಅಳವಡಿಕೊಂಡಾಗ ನಮ್ಮ ಬದುಕು ಅದರ್ಶಮಯವಾಗುವ ಜೊತೆಗೆ ವಾಲ್ಮೀಕಿ ಅವರಿಗೆ ನಿಜವಾದ ಗೌರವ ನೀಡಿದಂತಾಗುತ್ತದೆ. ರಾಮಾಯಣ ಮಹಾಕಾವ್ಯ ಸರ್ವಕಾಲಕ್ಕೂ ಪ್ರಸ್ತುತವಾಗಿರುತ್ತದೆ ಎಂದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ ವಾಲ್ಮೀಕಿ ಮಹರ್ಷಿ ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ವಿರೋಧಿಸಿ ಇಂದಿನ ಜಾತಿಯನ್ನು ಪ್ರತಿಪಾದಿಸುವವರನ್ನು ಖಂಡಿಸಬೇಕು ಎಂದರು.

ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್ ಮಹದೇವಯ್ಯ ಮಾತನಾಡಿದರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕುಂಬ್ರಳ್ಳಿ ಸುಬ್ಬಣ್ಣ, ಕೆ ಮಾರುತಿ, ತಾಯಮ್ಮ, ಶಿವರಾಜು, ನಿಂಗರಾಜು, ಶಂಭುಲಿಂಗನಾಯಕ, ಪುಟ್ಟಸ್ವಾಮಿ, ನಾಗೇಂದ್ರ, ಕುಮಾರ್, ಅಶೋಕ್ ಸೇರಿದಂತೆ ವಾಲ್ಮೀಕಿ ಯುವ ಬಳಗದವರು ಹಾಜರಿದ್ದರು.

ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಶಂಕರೇಗೌಡ ಸೇರಿ ಹಲವರಿಗೆ ತಿ.ನರಸೀಪುರದಲ್ಲಿ ಸನ್ಮಾನ



ವೈ.ಎನ್.ಶಂಕರೇಗೌಡ, ಡಣಾಯಕನಪುರ ಮಲ್ಲಣ್ಣ ಹಾಗೂ ಟಿ.ಪಿ.ಬೋರೇಗೌಡ ಅವರನ್ನು ಟಿಎಪಿಸಿಎಂಎಸ್ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು.

ತಿ.ನರಸೀಪುರ, ಡಿ.2– ಸಹಕಾರ ರತ್ನ ಪ್ರಶಸ್ತಿ ಪಡೆದ ಸಹಕಾರಿ ದುರೀಣ ವೈ.ಎನ್.ಶಂಕರೇಗೌಡ, ಜಿಲ್ಲಾ ಸಹಕಾರ ಯೂನಿಯನ್ ಬ್ಯಾಂಕ್‌ನ ನಿರ್ದೇಶಕ ಡಣಾಯಕನಪುರ ಮಲ್ಲಣ್ಣ ಹಾಗೂ ತಾಲೂಕಿನಿಂದ ಡಿಸಿಸಿ ಬ್ಯಾಂಕಿಗೆ ನಿರ್ದೇಶಕರಾಗಿ ಆಯ್ಕೆಯಾದ ಟಿ.ಪಿ.ಬೋರೇಗೌಡರನ್ನು ಟಿಎಪಿಸಿಎಂಎಸ್ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು.

ಟಿಎಪಿಸಿಎಂಎಸ್ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಸರಳ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರದ ಮೂವರು ಗಣ್ಯರನ್ನು ಮೈಸೂರು ಪೇಟ ತೊಡಿಸಿ ಫಲಪುಷ್ಪ ನೀಡಿ ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸಹಕಾರಿ ರತ್ನಪ್ರಶಸ್ತಿ ಪುರಸ್ಕೃತರಾದ ವೈ.ಎನ್.ಶಂಕರೇಗೌಡ ಸಹಕಾರಿ ಕ್ಷೇತ್ರದಲ್ಲಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ.ಈ ಕ್ಷೇತ್ರದಲ್ಲಿ ನನ್ನದು ಬಹಳ ದೊಡ್ಡ ಇತಿಹಾಸವೇನಿಲ್ಲ. ಆದರೆ ಸಾರ್ವಜನಿಕ ಬದುಕಿನಲ್ಲಿ 40 ವರ್ಷಗಳ ಕಾಲ ನನ್ನದೇ ಆದ ಕಾರ್ಯ ಚಟುವಟಿಕೆ ಹಮ್ಮಿಕೊಂಡು ಬರುತ್ತಿದ್ದೇನೆ. ಸಹಕಾರಿ ಕ್ಷೇತ್ರದ ಬದುಕಿನಲ್ಲಿ ನನ್ನ ಇತಿ ಮಿತಿಯಲ್ಲಿ ಕೆಲಸ ನಿರ್ವಹಿಸಿಕೊಂಡು ಬಂದಿದ್ದೇನೆ ಎಂದರು.

ಸಹಕಾರಿ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಮಹಾರಾಷ್ಟ್ರದ ನಂತರದಲ್ಲಿ ಎರಡನೇ ಸ್ಥಾನದಲ್ಲಿ ಬೆಳೆದಿರುವುದು ಹೆಮ್ಮೆಯ ವಿಷಯವಾಗಿದ್ದು, ಸೌತ್ ಮತ್ತು ನಾರ್ತ್ ಕೆನರಾ, ಮಡಿಕೇರಿ ಸೇರಿದಂತೆ ಎಲ್ಲ ಜಿಲ್ಲೆಗಳಲ್ಲೂ ಅಭ್ಯುದಯ ಕಾಣುತ್ತಿದೆ, ಸಹಕಾರ ಸಂಸ್ಥೆಯನ್ನು ಜನ ಸಾಮಾನ್ಯರ ಹತ್ತಿರ ಕರೆದುಕೊಂಡು ಹೋಗುವ ಕೆಲಸವಾಗಬೇಕಿದೆ. ಆ ಮೂಲಕ ಪ್ರತಿಯೊಂದು ಕುಟುಂಬಕ್ಕೂ ಒಂದಲ್ಲಾ ಒಂದು ರೀತಿಯ ಫಲ ಸಿಗುವಂತಾಗಬೇಕು ಆ ನಿಟ್ಟಿನಲ್ಲಿ ಸ್ಥಳೀಯ ಆಡಳಿತ ಮಂಡಳಿ ಕೆಲಸ ಮಾಡಬೇಕಿದೆ ಎಂದರು.

ಟಿಎಪಿಸಿಎಂಎಸ್ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಮಾತನಾಡಿದರು. ನಿರ್ದೇಶಕ ಟಿ.ವಾಸುದೇವ ಮಾತನಾಡಿ ಹಿರಿಯ ಸಹಕಾರಿ ಶಂಕರೇಗೌಡರಿಗೆ ಅತ್ಯುನ್ನತ ಪ್ರಶಸ್ತಿ ದೊರಕಿರುವುದು ಅವರು ಸಹಕಾರಿ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಗಾಗಿ, ಯಾವಾಗಲೂ ಸಹಕಾರಿ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರ ಮಾಡುವ ತುಡಿತ ಹೊಂದಿರುವ ಅವರಿಗೆ ಹೆಚ್ಚಿನ ಪ್ರಶಸ್ತಿಗಳು ಲಭಿಸಿ ಮತ್ತಷ್ಟು ಸಾರ್ವಜನಿಕ ಸೇವೆ ಮಾಡಲು ಪ್ರೇರೇಪಣೆ ನೀಡುವಂತಾಗಲಿ ಎಂದು ಆಶಿಸಿದರು.

ಕಸಬಾ ಪಿಎಸಿಸಿಎಸ್ ಅಧ್ಯಕ್ಷ ಮಲ್ಲಣ್ಣ, ಡಿಸಿಸಿ ಬ್ಯಾಂಕ್ ನಿರ್ದೇಶಕ ಟಿ.ಪಿ ಬೋರೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ವೈ.ಟಿ. ರಾಮಸ್ವಾಮಿ ಹಾಗು ಸಮಿತಿಯ ಕಾರ್ಯನಿರ್ವಹಣಾಧಿಕಾರಿ ರಘುನಂದನ್ ಮಾತನಾಡಿದರು. ಪಿಎಸಿಸಿಎಸ್ ಉಪಾಧ್ಯಕ್ಷ ಟಿ.ಸಿ.ಫಣೀಶ್ ಹಾಜರಿದ್ದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ವಿನಯ್ ಕುಮಾರ್ ನೇಮಕ



ನಂಜನಗೂಡು: ಮೈಸೂರು ಜಿಲ್ಲೆ ಗ್ರಾಮಾಂತರ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ನಂಜನಗೂಡಿನ ಎನ್.ವಿ.ವಿನಯ್ ಕುಮಾರ್ ನೇಮಕಗೊಂಡಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ ಈ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಮೈಸೂರು ಜಿಲ್ಲೆಯಾದ್ಯಂತ ಪ್ರವಾಸ ಕೈಗೊಂಡು ತಳ ಮಟ್ಟದಿಂದ ಪಕ್ಷವನ್ನು ಸಂಘಟಿಸಿ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತರಲು ತಾವು ಪ್ರಯತ್ನಿಸುವುದಾಗಿ ಇದೇ ವೇಳೆ ಭರವಸೆ ನೀಡಿದರು.

ಎನ್.ವಿ.ವಿನಯ್ ಕುಮಾರ್ ಈ ಹಿಂದೆ ನಂಜನಗೂಡು ನಗರ ಅಧ್ಯಕ್ಷರಾಗಿಯೂ ಹಾಗೂ ಮೈಸೂರು ಜಿಲ್ಲಾ ಉಪಾಧ್ಯಕ್ಷರಾಗಿಯು ಸಹ ಪಕ್ಷಕ್ಕೆ ಸೇವೆ ಸಲ್ಲಿಸಿದ್ದರು.

ಶಾಲೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಶಾಲೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಎಂಎಲ್ಸಿ ಯತೀಂದ್ರ ಮಾತನಾಡುತ್ತಿರುವುದು.

ಸುತ್ತೂರು: ಒಂದೂವರೆ ಕೋಟಿಗೂ ಅಧಿಕ ವೆಚ್ಚದಲ್ಲಿ ವರುಣ ಕ್ಷೇತ್ರದ ಕೀಳನಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪುಟ್ಟೇಗೌಡನಹುಂಡಿ. ಚಟ್ನಳ್ಳಿ, ಮೆಲ್ಲಹಳ್ಳಿ ಈ ಗ್ರಾಮಗಳಿಗೆ ಸೇರಿದ ಶಾಲೆಗಳು ಮತ್ತು ವಿವಿಧ ಕಾಮಗಾರಿಗಳನ್ನು ನಡೆಸಲು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು ಗ್ರಾಮೀಣ ಭಾಗದಲ್ಲಿ ಪ್ರತಿಯೊಂದು ಗ್ರಾಮಗಳಲ್ಲೂ ಶಾಲೆಗಳನ್ನು ತೆರೆಯಬೇಕು. ಎಲ್ಲಾ ಗ್ರಾಮಗಳಲ್ಲಿ ಮಕ್ಕಳ ಕಲಿಕೆಗೆ ಅನುಕೂಲ ಕಲ್ಪಿಸಿಕೊಡಬೇಕು. ಇದರಿಂದ ಮಕ್ಕಳು ಶಾಲೆಗಳನ್ನು ಬಿಡುವುದು ಕಡಿಮೆಯಾಗುತ್ತದೆ. ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ತಮ್ಮ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಕಲಿಕೆಯಲ್ಲಿ ಮುಂದಾಗಬೇಕು. ಮಕ್ಕಳು ಶಾಲೆಗೆ ತಪ್ಪದೆ ಹಾಜರಾಗಲು ಪೋಷಕರ ಹೆಚ್ಚಿನ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಮನೆಯಲ್ಲೂ ವಿದ್ಯಾವಂತ ಮಗುವಿದ್ದರೆ ವಿದ್ಯಾವಂತ ಕುಟುಂಬವಾಗಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಶಿಕ್ಷಣಾಧಿಕಾರಿ ಉದಯಕುಮಾರ್, ತಹಸಿಲ್ದಾರ್ ಮಹೇಶ್ ಕುಮಾರ್, ಗ್ರಾಪಂ ಅಧ್ಯಕ್ಷ ಕೀಳನಪುರ ನಂಜುಂಡಸ್ವಾಮಿ, ಮಹದೇಶ್ವರ ಧರ್ಮದರ್ಶಿ ಮಂಡಳಿ ನಿರ್ದೇಶಕ ಮಹದೇವಪ್ಪ, ಬೀರೇಗೌಡ, ಪುಟ್ಟಗೌಡನಹುಂಡಿ ಮಹಾದೇವಪ್ಪ ಮೂಡಲುಂಡಿ ರವಿ ಕುಮಾರ್, ತಾಪಂ ಮಾಜಿ ಸದಸ್ಯ ಮುದ್ರಾವೇಗೌಡ, ವರಕೋಡು ಉಮೇಶ್, ಗಂಗನ ತಿಮ್ಮಯ್ಯ ಶಿವಣ್ಣ, ನಾಗರಾಜು, ಬಸವರಾಜು, ಬೈರೇಗೌಡ, ಪ್ರಭಾಕರ್, ಮಂಜು ಪ್ರಕಾಶ್ ಕೀಳನಪುರ ಪಂಚಾಯಿತಿಯ ಎಲ್ಲಾ ಗ್ರಾಮಗಳ ಮುಖಂಡರು ಹಾಜರಿದ್ದರು.

ಹೆಚ್.ಡಿ.ಕೋಟೆ ಸರಣಿ ಮನೆಗಳ್ಳತನ ಪ್ರಕರಣ

ಸ್ಥಳ ಮಹಜರು ಜಾಗದಲ್ಲೆ ಮತ್ತೊಂದು ಕಳ್ಳತನ



ಕಳ್ಳರೊಂದಿಗೆ ಸ್ಥಳ ಮಹಜರು ನಡೆಸುತ್ತಿರುವ ಪೊಲೀಸರು.

ಹೆಚ್.ಡಿ.ಕೋಟೆ: ಸರಣಿ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳ್ಳರನ್ನು ಸ್ಥಳ ಮಹಜರ್ ನಡೆಸಲು ಕರೆತಂದಿದ್ದ ಸ್ಥಳದಲ್ಲೇ ಮತ್ತೊಂದು ಮನೆ ಕಳ್ಳತನ ಮಾಡಿರುವ ಘಟನೆ ಪಟ್ಟಣದಲ್ಲಿ ವರದಿಯಾಗಿದೆ.

ಪಟ್ಟಣದಲ್ಲಿ ಕಳೆದ ಒಂದೂವರೆ ತಿಂಗಳ ಹಿಂದೆ ಸರಣಿ ಕಳ್ಳತನ ಮಾಡಿ ಕಳ್ಳರು ಲಕ್ಷಾಂತರ ರೂಪಾಯಿ ನಗದು, ಚಿನ್ನಾಭರಣಗಳನ್ನ ದೋಚಿಕೊಂಡು ಪರಾರಿಯಾಗಿದ್ದರು. ಈ ಕುರಿತು ಮನೆಗಳ ಮಾಲೀಕರು ಪೊಲೀಸರಿಗೆ ದೂರು ನೀಡಿದ್ದರು.

ಈ ಹಿನ್ನೆಲೆಯಲ್ಲಿ ಪೊಲೀಸರು ತನಿಖೆ ಕೈಗೊಂಡು ಕಳ್ಳರನ್ನು ಪತ್ತೆ ಹಚ್ಚಿ ಮಹಜರ್ ನಡೆಸಲು ಹೆಚ್.ಡಿ.ಕೋಟೆ ಪಟ್ಟಣಕ್ಕೆ ಸೋಮವಾರ ಕರೆತಂದಿದ್ದರು. ಭಾನುವಾರ ರಾತ್ರಿ ಸ್ಟೇಡಿಯಂ ಬಡಾವಣೆಯ ಮನೆಯೊಂದರ ಹಿಂಬಾಗಿಲು ಮುರಿದ ಕಳ್ಳರು ದೇವರ ಮನೆಯಲ್ಲಿದ್ದ ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದಾರೆ.

ಪಟ್ಟಣದ ಸ್ಟೇಡಿಯಂ ಬಡಾವಣೆಯ ನಿವಾಸಿ ಜಯರಾಮ್ ಅವರ ಮನೆ ಬಾಡಿಗೆ ಪಡೆದುಕೊಂಡಿದ್ದ ಸಂತೋಷ್ ಎಂಬುವವರು ಕುಟುಂಬ ಸಮೇತ ಭಾನುವಾರ ಮನೆಗೆ ಬೀಗ ಹಾಕಿ ಸಂಬಂಧಿಕರ ಮನೆಗೆ ತೆರಳಿದ್ದರು, ಹೀಗಾಗಿ ಮನೆಯಲ್ಲಿ ಯಾರೂ ಇಲ್ಲದ್ದನ್ನು ಖಚಿತ ಪಡಿಸಿಕೊಂಡ ಕಳ್ಳರು ತಡರಾತ್ರಿ ಮನೆಯ ಹಿಂಬಾಗಿಲು ಮೀಟಿ ಒಳ ಪ್ರವೇಶಿಸಿ ದೇವರ ಮನೆಯಲ್ಲಿದ್ದ ಬೆಲೆ ಬಾಳುವ ಬೆಳ್ಳಿ ಪದಾರ್ಥಗಳನ್ನು ಹೊತ್ತೊಯ್ದಿದ್ದಾರೆ.

ಸೋಮವಾರ ಸಂತೋಷ್ ಕುಟುಂಬದವರು ಮನೆಗೆ ಆಗಮಿಸಿದಾಗ ಕಳ್ಳತನವಾಗಿರುವುದು ತಿಳಿದು ಬಂದಿದೆ. ಈ ಸಂಬಂಧ ಪಟ್ಟಣದ ಪೊಲೀಸರಿಗೆ ದೂರು ನೀಡಲಾಗಿದೆ. ದೂರು ಪಡೆದುಕೊಂಡು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕಳೆದ ಒಂದೂವರೆ ತಿಂಗಳ ಹಿಂದೆ ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಒಂದೇ ರಾತ್ರಿ 3 ಕಡೆಗಳಲ್ಲಿ ನಡೆದಿದ್ದ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಹುಣಸೂರು ಪೊಲೀಸರು ಬಂಧಿಸಿ ಪ್ರಕರಣವನ್ನು ಎಚ್.ಡಿ. ಕೋಟೆ ಪೊಲೀಸರಿಗೆ ವರ್ಗಾಯಿಸಿದ್ದಾರೆ.

ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿ ಮೊಹಮ್ಮದ್ ಫರಾಜ್ ಅಲಿಯಾಸ್ ಫರಾಜ್ ಮತ್ತು ಸರಗೂರು ಪಟ್ಟಣದ ಫಯಾಜ್ ಅಹಮ್ಮದ್ ಅಲಿಯಾಸ್ ಚೊತ್ತ ಅವರನ್ನು ಹುಣಸೂರಿನ ಕಳವು ಪ್ರಕರಣದಲ್ಲಿ ಬಂಧಿಸಿದ ಪೊಲೀಸರು ವಿಚಾರಣೆ ನಡೆಸಿದ ಸಂದರ್ಭದಲ್ಲಿ ಹೆಚ್.ಡಿ.ಕೋಟೆ ಕಳವು ಪ್ರಕರಣ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಕದ್ದ ಮಾಲುಗಳನ್ನು ವಶಪಡಿಸಿಕೊಂಡು ಪ್ರಕರಣವನ್ನು ಹೆಚ್.ಡಿ. ಕೋಟೆ ಪೊಲೀಸರಿಗೆ ವರ್ಗಾಯಿಸಿ ಆರೋಪಿಗಳನ್ನು ಕೋಟೆ ಪೊಲೀಸರ ವಶಕ್ಕೆ ಒಪ್ಪಿಸಿದ್ದರು.

ಕಳೆದ ಆ.14ರಂದು ರಾತ್ರಿ ಪಟ್ಟಣದಲ್ಲಿ ಇಡೀ ರಾತ್ರಿ ವಿದ್ಯುತ್ ಕಡಿತಗೊಂಡಿದ್ದಾಗ ಪಟ್ಟಣದ ಸ್ಟೇಡಿಯಂ ಬಡಾವಣೆಯಲ್ಲಿ ವಾಸವಾಗಿರುವ ಪೇದೆ ಮಹದೇವಸ್ವಾಮಿ ಎಂಬುವವರ ಮನೆ ಮತ್ತು ಪಟ್ಟಣದ ಸೋಮೇಶ್ವರ ಸ್ವಾಮಿ ದೇವಸ್ಥಾನ ರಸ್ತೆಯಲ್ಲಿರುವ ಭಾಗ್ಯಲಕ್ಷ್ಮಿ ಅವರ ಮನೆಗೆ ಕನ್ನ ಹಾಕಿದ ಖದೀಮರು ನಗದು ಸೇರಿದಂತೆ ಲಕ್ಷಾಂತರ ಬೆಲೆಬಾಳುವ ವಸ್ತುಗಳನ್ನು ರಾತ್ರೋರಾತ್ರಿ ಕಳವು ಮಾಡಿಕೊಂಡು ಪರಾರಿಯಾಗಿದ್ದರು.

ಘಟನೆಯಿಂದ ಹೆಚ್.ಡಿ.ಕೋಟೆ ಪಟ್ಟಣದ ನಿವಾಸಿಗರು ಭಯಭೀತರಾಗಿದ್ದರು, ಪೇದೆಯೊಬ್ಬರ ಮನೆಯಲ್ಲೇ ಕಳ್ಳತನ ಆಗಿರುವುದು ಜನರ ಮತ್ತಷ್ಟು ಭಯ ಸೃಷ್ಟಿಸಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸುತ್ತಿದ್ದರು. ಅಷ್ಟರಲ್ಲಿ ಆರೋಪಿಗಳ ಬಂಧನವಾಗಿದ್ದು, ಆರೋಪಿಗಳ ವಿರುದ್ಧ 40ಕ್ಕೂ ಅಧಿಕ ಕಳವು ಪ್ರಕರಣಗಳಲ್ಲಿ ಭಾಗಿಯಾಗಿರುವುದು ವಿಚಾರಣೆ ವೇಳೆಯಲ್ಲಿ ತಿಳಿದು ಬಂದಿದೆ. ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಕಾನೂನು ಕ್ರಮ ಕೈಗೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಗಂಗಾಧರ್, ಪಿಎಸ್ಐ ಸುರೇಶ ನಾಯಕ, ಸಿಬ್ಬಂದಿಗಳಾದ ಸೈಯಾದ್ ಕಬೀರುದ್ದೀನ್, ಮೋಹನ್, ಯೋಗೇಶ್, ಗ್ರಾಮದ ಮುಖಂಡರಾದ ಭುಜಂಗರಾವ್, ಚಂದ್ರಮೌಳಿ, ಭಾಗ್ಯಲಕ್ಷ್ಮಿ ಹಾಜರಿದ್ದರು.

ಲಕ್ಷ್ಮಮ್ಮ ನಿಧನ



ಕೆ.ಆರ್.ನಗರ: ಪಟ್ಟಣದ ಕನಕನಗರ ಬಡಾವಣೆಯ ನಿವಾಸಿ ನಿವೃತ್ತ ಮುಖ್ಯ ಶಿಕ್ಷಕಿ ಲಕ್ಷ್ಮಮ್ಮ(80) ನಿಧನರಾದರು.

ಪತಿ ನಿವೃತ್ತ ಆರೋಗ್ಯ ಇಲಾಖೆ ಬೋರಲಿಂಗೇಗೌಡ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಕೆ.ಆರ್.ಪೇಟೆ ತಾಲೂಕಿನ ಬಸ್ತಿ ಗ್ರಾಮದಲ್ಲಿ ನಡೆಯಿತು.

ಇವರ ನಿಧನಕ್ಕೆ ಶಾಸಕ.ಡಿ.ರವಿಶಂಕರ್, ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್, ಎಂ.ಡಿ.ಸಿ.ಸಿ.ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ, ಆಳಿಯ ಡಾ.ಶ್ರೀಕಾಂತ್, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ.ನಾಗರಾಜ್, ರಾಷ್ಟ್ರೀಯ ಅಹಿಂದ ಸಂಘಟನೆ ರಾಜ್ಯ ಉಪಾಧ್ಯಕ್ಷ ಗರುಡಗಂಭ ಮಂಜುನಾಥ್, ಪುರಸಭಾ ಮಾಜಿ ಸದಸ್ಯ ನಟರಾಜ್, ಪ್ರೊಫೆಸರ್ ಡಾ.ಕಾಂತರಾಜ್ ಸೇರಿದಂತೆ ಅನೇಕರು ಸಂತಾಪ ಸೂಚಿಸಿದ್ದಾರೆ.

ಹಸಿರೆಲೆ ಬಿತ್ತನೆ ಬೀಜ ವಿತರಿಸುವಲ್ಲಿ ಸರ್ಕಾರದ ವೈಫಲ್ಯ

ಈ ಮಹತ್ವದ ಕಾರ್ಯಕ್ಕೆ ಸಮರ್ಪಕ ಅನುದಾನ ಕಲ್ಪಿಸದಿರುವುದಕ್ಕೆ ರೈತರ ಬೇಸರ

ಮೈಸೂರು, ಡಿ.2(ಎಂಕೆ)– ಅಂದು ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಸಿರೆಲೆ ಬಿತ್ತನೆ ಬೀಜ ಖರೀದಿಸಿ ಎಂದು ರೈತರ ಬೆನ್ನು ಬಿದ್ದಿದ್ದ ಕೃಷಿ ಇಲಾಖೆಯ ಬೆನ್ನ ಹಿಂದೆ ಇಂದು ರೈತರು ಹಸಿರೆಲೆ ಬಿತ್ತನೆ ಬೀಜ ನೀಡುವಂತೆ ದುಂಬಾಲು ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ...!

ಮಣ್ಣಿನ ಫಲವತ್ತತೆ ಹೆಚ್ಚಿಸಿ ಉತ್ತಮ ಇಳುವರಿ ಪಡೆಯಲು ಅನುಕೂಲವಾಗುವ ಹಸಿರೆಲೆ ಬಿತ್ತನೆ ಬೀಜ(ಸನ್‌ಹೆಂಪ್ ಮತ್ತು ಡಯಾಂಚಾ) ವಿತರಿಸಲು, ರಾಜ್ಯ ಸರ್ಕಾರ ಅನುದಾನ ನೀಡದಿರುವುದು ರೈತರನ್ನಷ್ಟೇ ಅಲ್ಲದೆ ಕೃಷಿ ಇಲಾಖೆ ಅಧಿಕಾರಿಗಳನ್ನು ಸಂಕಷ್ಟಕ್ಕೀಡು ಮಾಡಿದೆ.

ಕಬ್ಬು, ಭತ್ತ ನಾಟಿಗೂ ಮುನ್ನ ಬಿತ್ತನೆ ಮಾಡಿ, 70–80 ದಿನಗಳ ಬಳಿಕ ಅಂದರೆ 4–5 ಅಡಿ ಎತ್ತರ ಬೆಳೆಸಿ, ನಂತರ ಜಮೀನಿನಲ್ಲೇ ಕತ್ತರಿಸಿ ಮಣ್ಣಿನೊಂದಿಗೆ ಬೆರೆಸುವ ಹಸಿರೆಲೆಯಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುವುದು ಮಾತ್ರವಲ್ಲದೆ ಇಳುವರಿ ಹೆಚ್ಚಳ, ರಾಸಾಯನಿಕ ಗೊಬ್ಬರ ಬಳಕೆ ಕಡಿಮೆಯಾಗಲಿದೆ. ಜೊತೆಗೆ ಮಣ್ಣಿನ ಸತ್ವ ಮತ್ತು ಸ್ವರೂಪವೂ ಬದಲಾಗಲಿದೆ. ಮಣ್ಣಿಗೆ ಹಸಿರೆಲೆ ಸೇರಿಸುವುದು ಚಿನ್ನವನ್ನೇ ಸೇರಿಸಿದಂತೆ ಎಂದೇಳುತ್ತಿದ್ದ ಕೃಷಿ ಇಲಾಖೆ, ಈಗ ರೈತರ ಬೇಡಿಕೆಗೆ ಅನುಗುಣವಾಗಿ ಹಸಿರೆಲೆ ಬಿತ್ತನೆ ಬೀಜ ನೀಡಲಾಗದ ಪರಿಸ್ಥಿತಿಯಲ್ಲಿದೆ.


ಡಯಾಂಚಾ


ಸನ್‌ಹೆಂಪ್

ಮೈಸೂರು ಜಿಲ್ಲೆಯಲ್ಲಿ ಒಣ ಭೂಮಿ ಪ್ರದೇಶ ಹೆಚ್ಚಾಗಿರುವುದರಿಂದ ಹಸಿರೆಲೆ ಬಿತ್ತನೆ ಬೀಜಕ್ಕೆ ವರ್ಷದಿಂದ ವರ್ಷಕ್ಕೆ ಡಿಮ್ಯಾಂಡ್ ಹೆಚ್ಚಾಗುತ್ತಲೇ ಇದೆ. ಆದರೆ, 'ಅಕ್ಕಿ ಖರ್ಚಾಗಬಾರದು ಮಕ್ಕಳು ಬಡವಾಗಬಾರದು' ಎಂಬ ಗಾದೆ ಮಾತಿನಂತೆ ರಾಜ್ಯ ಸರ್ಕಾರ ಬೇಡಿಕೆಗೆ ಅನುಸಾರವಾಗಿ ಅನುದಾನ ನೀಡದೆ, ಇತ್ತ ಹಸಿರೆಲೆ ಬಿತ್ತನೆ ಬೀಜ ವಿತರಣೆ ಮಾಡಿದಂತೆಯೂ ಆಗಬೇಕು... ಅತ್ತ ಕೊರತೆಯೂ ಉಂಟಾಗಬೇಕು ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದು ರೈತರನ್ನಷ್ಟೇ ಅಲ್ಲದೆ ಕೃಷಿ ಇಲಾಖೆ ಅಧಿಕಾರಿಗಳಿಗೂ ಕಿರಿಕಿರಿ ಅನುಭವ ಉಂಟಾಗುವಂತೆ ಮಾಡಿದೆ.

ಕಳೆದ ಸಾಲಿನಲ್ಲಿ(2024–25) ಮೈಸೂರು ಜಿಲ್ಲೆಗೆ 5 ಸಾವಿರ ಕ್ವಿಂಟಾಲ್‌ಗೂ ಹೆಚ್ಚು ಹಸಿರೆಲೆ ಬಿತ್ತನೇ ಬೀಜಕ್ಕೆ ಬೇಡಿಕೆ ಇದ್ದರೂ ಕೃಷಿ ಇಲಾಖೆಯಿಂದ ವಿತರಣೆಯಾಗಿರುವುದು ಕೇವಲ 110.21(ಸನ್‌ಹೆಂಪ್ 81.20 ಕ್ವಿಂಟಾಲ್ ಮತ್ತು ಡಯಾಂಚಾ 28.1 ಕ್ವಿಂಟಾಲ್) ಕ್ವಿಂಟಾಲ್ ಮಾತ್ರ. ಹಾಗೆಯೇ 2025–26ನೇ ಸಾಲಿಗೆ 6,100 ಕ್ವಿಂಟಾಲ್ (ಸನ್‌ಹೆಂಪ್ 5050 ಕ್ವಿಂಟಾಲ್ ಮತ್ತು ಡಯಾಂಚಾ 1050 ಕ್ವಿಂಟಾಲ್) ಹಸಿರೆಲೆ ಬಿತ್ತನೆ ಬೀಜಕ್ಕೆ ಬೇಡಿಕೆ ಇದೆ ಎಂದು ಈಗಾಗಲೇ ಇಲಾಖೆಯಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಆದರೆ, ಎಷ್ಟು ಅನುದಾನ ಬಿಡುಗಡೆಯಾಗುತ್ತದೆ, ಸರ್ಕಾರ ಸ್ಪಂದನೆ ಏನು ಎಂಬುದು ಮಾತ್ರ ಇನ್ನೂ ತಿಳಿದಿಲ್ಲ.

ತಾಲೂಕುವಾರು ಬೇಡಿಕೆ: ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿಗೆ 1500 ಕ್ವಿಂಟಾಲ್ ಸನ್‌ಹೆಂಪ್ ಬೇಡಿಕೆ ಇದ್ದರೆ, ಹುಣಸೂರು ತಾಲೂಕಿಗೆ 500 ಕ್ವಿಂಟಾಲ್ ಸನ್‌ಹೆಂಪ್, ಕೆ.ಆರ್.ನಗರ ತಾಲೂಕಿಗೆ 400 ಕ್ವಿಂಟಾಲ್ ಸನ್‌ಹೆಂಪ್ ಮತ್ತು 100 ಕ್ವಿಂಟಾಲ್ ಡಯಾಂಚಾ, ಪಿರಿಯಾಪಟ್ಟಣಕ್ಕೆ 2000 ಕ್ವಿಂಟಾಲ್ ಸನ್‌ಹೆಂಪ್, ಮೈಸೂರು ತಾಲೂಕಿಗೆ 100 ಕ್ವಿಂಟಾಲ್ ಸನ್‌ಹೆಂಪ್ ಮತ್ತು 200 ಕ್ವಿಂಟಾಲ್ ಡಯಾಂಚಾ, ನಂಜನಗೂಡು ತಾಲೂಕಿಗೆ 350 ಕ್ವಿಂಟಾಲ್ ಸನ್‌ಹೆಂಪ್ ಮತ್ತು 150 ಕ್ವಿಂಟಾಲ್ ಡಯಾಂಚಾ ಹಾಗೂ ಟಿ.ನರಸೀಪುರ ತಾಲೂಕಿಗೆ 200 ಕ್ವಿಂಟಾಲ್ ಸನ್‌ಹೆಂಪ್ ಮತ್ತು 600 ಕ್ವಿಂಟಾಲ್ ಡಯಾಂಚಾ ಬೇಡಿಕೆ ಇದೆ.

ಸಿಎಂಗೂ ನೇರ ಮನವಿ: ಕೃಷಿ ಇಲಾಖೆ ಮೈಸೂರು ಜಿಲ್ಲೆಯಿಂದ ಕೃಷಿ ಆಯುಕ್ತಾಲಯಕ್ಕೆ ಸತತ ಮೂರು ಪತ್ರ ಬರೆದು ಹಸಿರೆಲೆ ಬಿತ್ತನೆ ಬೀಜಕ್ಕೆ ಮನವಿ ಮಾಡಲಾಗಿದೆ. ಅಲ್ಲದೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೂ ತರಲಾಗಿದೆ. ಇತ್ತೀಚೆಗೆ ಮೈಸೂರು ಜಿಪಂ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ನೇರವಾಗಿ ಕೃಷಿ ಇಲಾಖೆ ಅಧಿಕಾರಿಗಳು ಅನುದಾನಕ್ಕಾಗಿ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದರು. ಇಷ್ಟಾದರೂ ಇನ್ನೂ ಅನುದಾನ ನೀಡದಿರುವುದು ವಿಪರ್ಯಾಸವಾಗಿದೆ ಎಂದು ಕೃಷಿ ಇಲಾಖೆಯ ಕೆಲ ಅಧಿಕಾರಿಗಳು, ರೈತ ಮುಖಂಡರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

> ಜಿಲ್ಲೆಯಲ್ಲಿ ಹಸಿರೆಲೆ ಬಿತ್ತನೆ ಬೀಜಕ್ಕೆ ಬೇಡಿಕೆ ಹೆಚ್ಚಾಗಿದ್ದು, ಅನುದಾನ ನೀಡುವಂತೆ ಮನವಿ ಸಲ್ಲಿಸಲಾಗಿದೆ. ಮೊದಲೆಲ್ಲಾ ಕೃಷಿ ಇಲಾಖೆಯಿಂದ ಹಸಿರೆಲೆ ಬೀಜ ಬಿತ್ತನೆ ಮಾಡಿ ಎಂದು ರೈತರಿಗೆ ಹೇಳಲಾಗುತ್ತಿತ್ತು. ಈಗ ರೈತರೇ ಇಲಾಖೆಗೆ ಬಿತ್ತನೆ ಬೀಜ ನೀಡುವಂತೆ ಕೇಳುತ್ತಿದ್ದಾರೆ. ಮಳೆಗಾಲದ ಆರಂಭದಲ್ಲಿ ಹಸಿರೆಲೆ ಬಿತ್ತನೆ ಬೀಜ ಬಳಕೆ ಮಾಡಲಾಗುವುದು. ಹಸಿರೆಲೆ ಬಿತ್ತನೆ ಬೀಜದಿಂದ ಮಣ್ಣಿನ ಫಲವತ್ತತೆ ಹೆಚ್ಚಾಗಲಿದೆ. ನೀರನ್ನು ಹಿಡಿದಿಡುವ ಸಾಮರ್ಥ್ಯವೂ ಹೆಚ್ಚಾಗಲಿದೆ. ಹಸಿರೆಲೆ ಬಿತ್ತನೆ ಬೀಜಕ್ಕೆ ವಿಶೇಷ ಅನುದಾನ ನೀಡುವಂತೆ ಮನವಿ ಮಾಡಲಾಗಿದೆ.
> – **ಕೆ.ಹೆಚ್.ರವಿ,** ಕೃಷಿ ಜಂಟಿ ನಿರ್ದೇಶಕರು, ಮೈಸೂರು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರೇ ಇಷ್ಕ್ ಮೇ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಓಎಲ್‌ಸಿ (ಕ)	4 ಪ್ರದರ್ಶನಗಳು
ಲಿಡೋ	
ಫ್ಲರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು

ಫ್ಲೈಓವರ್, ಗ್ರೇಟರ್ ಮೈಸೂರು ಯೋಜನೆಗೆ ಆಮ್ ಆದ್ಮಿ ವಿರೋಧ

ಪಾರಂಪರಿಕ ಸೌಂದರ್ಯ ಹಾಳು ಮಾಡುವ ಯೋಜನೆ ಬೇಡವೇ ಬೇಡ

ಮೈಸೂರು, ಡಿ.2–ಮೈಸೂರಿನಲ್ಲಿ ಫ್ಲೈಓವರ್ ಮತ್ತು ಗ್ರೇಟರ್ ಮೈಸೂರು ಯೋಜನೆಯನ್ನು ಕೈಬಿಡುವಂತೆ ಆಮ್ ಆದ್ಮಿ ಪಾರ್ಟಿಯು ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಆಗ್ರಹಿಸಿದ್ದಾರೆ.

ಬೆಂಗಳೂರಿನ ಸೌಂದರ್ಯ ಹಾಳು ಮಾಡಿದ ಸರ್ಕಾರ ಈಗ ಮೈಸೂರಿನ ಪಾರಂಪರಿಕ ಸೌಂದರ್ಯವನ್ನು ಹಾಳು ಮಾಡುವ ಮೊದಲನೇ ಹೆಜ್ಜೆಯಾಗಿ ಫ್ಲೈಓವರ್ ಆಗಿದೆ. ಈ ಹಿನ್ನೆಲೆಯಲ್ಲಿ ಆಮ್ ಆದ್ಮಿ ಪಾರ್ಟಿಯೂ ಸಂಪೂರ್ಣವಾಗಿ ಇದನ್ನು ವಿರೋಧಿಸಿದೆ ಎಂದು ತಿಳಿಸಿದ್ದಾರೆ.

ವಿಶ್ವವಿಖ್ಯಾತ ಮೈಸೂರನ್ನು ಅನ್ಯ ರಾಜ್ಯದವರಿಗೆ ಮಾರಾಟ ಮಾಡಲು ಗ್ರೇಟರ್ ಮೈಸೂರು ಯೋಜನೆಯನ್ನು ಸಿದ್ಧ ಪಡಿಸಿದ್ದಾರೆ. ಇದರಿಂದ ಮೈಸೂರಿನ ಮಹಾರಾಜರು ಕಟ್ಟಿಸಿರುವ ಪಾರಂಪರಿಕ ಕಟ್ಟಡಗಳು, ಪ್ರಮುಖ ವೃತ್ತಗಳು ಕಣ್ಮರೆಯಾಗುತ್ತವೆ. ಹಾಗೇ ನಂತರದ ದಿನಗಳಲ್ಲಿ ಮೆಟ್ರೋ ಬಂದು ಪರಿಸರಕ್ಕೆ ಧಕ್ಕೆಯಾಗಲಿದೆ. ನಗರದ ಟ್ರಾಫಿಕ್ ಸಮಸ್ಯೆಗೆ ಫ್ಲೈಓವರ್ ಒಂದೇ ಪರಿಹಾರವಲ್ಲ. ಬೇರೆ ಪರಿಹಾರ ಹುಡುಕಬೇಕಿದೆ ಎಂದು ಹೇಳಿದ್ದಾರೆ.

ಪ್ರಮುಖವಾಗಿ ಅರಮನೆ ಸುತ್ತ ರಸ್ತೆ ಬದಿಯಲ್ಲಿರುವ ತರಕಾರಿ, ಹೂವು, ದಿನಸಿ ಮಾರುಕಟ್ಟೆ, ಕೃಷಿಗೆ ಸಂಬಂಧಪಟ್ಟ ಅಂಗಡಿಗಳನ್ನು ಬಂಡಿಪಾಳ್ಯಕ್ಕೆ ವರ್ಗಾಯಿಸಿ, ಪಾದಚಾರಿ ರಸ್ತೆ ಮಾರ್ಗವನ್ನು ಉಳಿಸಿ. ಆಯಾ ತಾಲೂಕುಗಳಿಂದ ಬರುವ ಬಸ್‌ಗಳಿಗೆ ರಿಂಗ್‌ರಸ್ತೆಯಲ್ಲಿ ಬಸ್ ನಿಲ್ದಾಣ ನಿರ್ಮಿಸಬೇಕಾಗಿದೆ. ಸಾರ್ವಜನಿಕರ ಜೊತೆ ಮುಕ್ತ ಸಂವಾದ ನಡೆಸಿ, ಅಭಿಪ್ರಾಯ ಸಂಗ್ರಹಿಸಬೇಕು. ಕೇವಲ ಟ್ರಾಫಿಕ್ ನೆಪ ಹೇಳಿ ಮೈಸೂರಿನ ಸೌಂದರ್ಯವನ್ನು ಹಾಳು ಮಾಡುವುದನ್ನು ತಡೆಯಬೇಕು. ಈ ನಿಟ್ಟಿನಲ್ಲಿ ಮೈಸೂರಿಗರು ಎಚ್ಚೆತ್ತುಕೊಂಡು ಕೂಡಲೇ ಧ್ವನಿ ಎತ್ತಬೇಕು ಎಂದು ಪ್ರಕಟಣೆ ಮೂಲಕ ಒತ್ತಾಯಿಸಿದ್ದಾರೆ.

ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್ ವಾರ್ಷಿಕೋತ್ಸವ


ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್‌ನ ವಾರ್ಷಿಕೋತ್ಸವದಲ್ಲಿ ಭಾಗಿಯಾಗಿದ್ದ ಗಣ್ಯರು

ಮೈಸೂರು, ಡಿ. 2–ಮೈಸೂರಿನ ಜಯನಗರದ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್‌ನಲ್ಲಿ ವಿವೇಕ ಕುಟುಂಬಕಂ ಹೆಸರಿನಲ್ಲಿ 46ನೇ ಶಾಲಾ ವಾರ್ಷಿಕೋತ್ಸವವನ್ನು ಕಲಾಮಂದಿರದಲ್ಲಿ ಆಚರಿಸಲಾಯಿತು. ಮೈಸೂರಿನ ಶ್ರೀರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಸಂಸ್ಥೆಯ ಪರಮಪೂಜ್ಯ ಇಷ್ಟನಾಥಾನಂದ ಮಹಾರಾಜ್ ಸಾನಿಧ್ಯ ವಹಿಸಿದ್ದರು.

ಹಿರಿಯ ವಿಜ್ಞಾನಿಗಳು ಮತ್ತು ಧಾರವಾಡದ ಇಂಡಿಯನ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯ ಡೀನ್ ಹಾಗೂ ಪ್ರಾಧ್ಯಾಪಕರು ಮತ್ತು ಉನ್ನತ ಶಿಕ್ಷಣ ಅಕಾಡೆಮಿ ಕರ್ನಾಟಕ ಸರ್ಕಾರದ ಮಾಜಿ ನಿರ್ದೇಶಕರು ಆದ ಡಾ. ಎಸ್ ಎಂ ಶಿವಪ್ರಸಾದ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಂತರ ಕಲಾಮಂದಿರದಲ್ಲಿ ನಡೆದ ವೇದಿಕೆಯ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದರ ಪುತ್ಥಳಿಗೆ ಪುಷ್ಪಾರ್ಚನೆಯನ್ನು ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಾನಿಧ್ಯ ವಹಿಸಿದ್ದ ಇಷ್ಟನಾಥಾನಂದ ಮಹಾರಾಜ್ ಆಶೀರ್ವಚನ ನೀಡಿ ಮಾತನಾಡಿ, ಪೋಷಕರಾಗಲೀ, ಶಾಲೆಗಳಾಗಲೀ ಮಕ್ಕಳ ನಡುವೆ ಆರೋಗ್ಯಕರವಾದ ಸ್ಪರ್ಧೆಯನ್ನು ಏರ್ಪಡಿಸಬೇಕು. ಪ್ರತಿ ಸಣ್ಣ ಸಾಧನೆಯನ್ನು ಮಾಡಿದಾಗಲೂ ಅವರನ್ನು ಪ್ರೋತ್ಸಾಹಿಸುತ್ತಾ ಬಂದರೆ ಮುಂದೆ ಉತ್ತಮ ಸಾಧನೆ ಮಾಡಬಲ್ಲರು. ಯಾವುದೇ ಕಾರಣಕ್ಕೂ ಮತ್ತೊಬ್ಬರೊಡನೆ ಹೋಲಿಕೆ ಮಾಡಿ ಅವರ ಸಾಧನೆಯನ್ನು ಅಳೆಯಬಾರದು. ಪ್ರತಿಯೊಬ್ಬರಿಗೂ ಅವರದೇ ಆದ ಪ್ರತಿಭೆ ಇದ್ದೇ ಇದೆ ಎಂದು ನುಡಿದರು.

ಆಡಳಿತ ಮಂಡಳಿಯ ಉಪಾಧ್ಯಕ್ಷ ಬಿ. ಎನ್ ಪ್ರಭಾಕರ್, ಖಜಾಂಚಿ ಎಚ್. ಎಸ್ ಶಿವಶಂಕರ್, ಶಾಲೆಯ ಮುಖ್ಯ ಆಡಳಿತ ಅಧಿಕಾರಿ ಶ್ರೀಮತಿ ಭವಾನಿ ನಾಗೇಶ್, ಪ್ರಾಂಶುಪಾಲೆ ಶ್ರೀಮತಿ ಸುಮಾ ಎಚ್.ಎಂ. ಉಪಸ್ಥಿತರಿದ್ದರು.

ಯುಜಿಸಿ ಮಾನದಂಡ ಕೈಬಿಡುವಂತೆ ಆಗ್ರಹಿಸಿ ಇಂದಿನಿಂದ ಅತಿಥಿ ಉಪನ್ಯಾಸಕರ ಹೋರಾಟ

ಮೈಸೂರು, ಡಿ.2(ಎಂಟಿವೈ)– ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಯುಜಿಸಿ ಅರ್ಹತೆ ಮಾನದಂಡ ಕೈ ಬಿಡುವಂತೆ ಆಗ್ರಹಿಸಿ ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಕಾಲೇಜು ಶಿಕ್ಷಣ ಇಲಾಖೆಯ ಕಚೇರಿ ಬಳಿ ಬುಧವಾರ(ಡಿ.3)ದಿಂದ ನಿರಂತರ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿಯ ಗೌರವಾಧ್ಯಕ್ಷ ಹನುಮಂತೇಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 440 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರ ನೇಮಕಕ್ಕೆ ಕೌನ್ಸಿಲಿಂಗ್ ನಡೆಸುವ ವೇಳೆ ಹೊಸ ನಿಯಮವೊಂದನ್ನು ಜಾರಿಗೊಳಿಸಲಾಗಿದೆ. ರಾಜ್ಯದಾದ್ಯಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 10 ರಿಂದ 20 ವರ್ಷಗಳಿಂದ 10,972ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಅತ್ಯಂತ ಕನಿಷ್ಠ ಗೌರವಧನ ಪಡೆದು ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಪ್ರಸಕ್ತ ಸಾಲಿನಲ್ಲಿ ಯುಜಿಸಿ ಅರ್ಹತೆ ಪಡೆದಿಲ್ಲವೆಂಬ ಕಾರಣಕ್ಕಾಗಿ 6,904 ಅತಿಥಿ ಉಪನ್ಯಾಸಕರನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈ ಬಿಡಲಾಗಿದೆ. ಇವರೆಲ್ಲರನ್ನೂ ಕೆಲಸದಿಂದ ತೆಗೆದು ಹಾಕಲು, ಹೊಸದಾಗಿ ನೇಮಕಾತಿ ಪ್ರಕ್ರಿಯೆಗೆ ಕ್ರಮ ಕೈಗೊಳ್ಳಲಾಗಿದೆ. ಇದು ಖಂಡನೀಯ ಎಂದರು.

ಈಗಾಗಲೇ ಸೇವೆ ಸಲ್ಲಿಸಿದವರ ವಯೋಮಿತಿ ಮೀರಿದೆ. ಇವರು ಕೆಲಸ ಕಳೆದುಕೊಂಡರೆ ಜೀವನ ಅತಂತ್ರವಾಗುತ್ತದೆ. ಇವರನ್ನೇ ಅವಲಂಬಿಸಿರುವ ಕುಟುಂಬ ನಿರ್ವಹಣೆ ಸಾಧ್ಯವಾಗದಂತಾಗುತ್ತದೆ. ಹೀಗಾಗಿ ಕಾಲೇಜು ಶಿಕ್ಷಣ ಇಲಾಖೆ ತಾನು ಕೈಗೊಂಡಿರುವ ನಿಯಮ ಬಾಹಿರ ಕೌನ್ಸಿಲಿಂಗ್ ಪ್ರಕ್ರಿಯೆ ಕೈಬಿಡಬೇಕು. ನಿಯಮ ಮಾರ್ಪಾಡು ಮಾಡಿ, ಈಗಾಗಲೇ ಸೇವೆ ಸಲ್ಲಿಸುತ್ತಿರುವವರನ್ನೇ ಮುಂದುವರಿಸಬೇಕು. ಈ ಕುರಿತು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ಜಿ. ಮಹೇಶ್, ಆಶಾ, ಶಿವೇಗೌಡ ಇದ್ದರು.

ಇಂದಿನ ಕವಿಗಳು ಬೋನ್ಸಾಯ್ ಮರಗಳಾಗುತ್ತಿದ್ದಾರೆ

ಕಾವ್ಯ ಕುಸುಮ ಕವನ ಸಂಕಲನ ಬಿಡುಗಡೆ ವೇಳೆ ಸಾಹಿತಿ ಜಯಪ್ಪ ಹೊನ್ನಾಳಿ ಗಂಭೀರ ನುಡಿ


ಚಿತ್ರಕಲಾ ವಾರ್ಷಿಕೋತ್ಸವ, ಕನ್ನಡ ರಾಜ್ಯೋತ್ಸವ ಕವಿಗೋಷ್ಠಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿದರು.

ಮೈಸೂರು, ಡಿ. 2– ಇಂದಿನ ಬಹುಪಾಲು ಕವಿಗಳು ನಾಡಿಗೆ ಪಸರಿಸುವ ಕಾಡು ಮರಗಳಾಗದೆ, ಬೋನ್ಸಾಯ್ ಮರಗಳಾಗುತ್ತಿದ್ದಾರೆ. ಅವುಗಳಲ್ಲಿ ಹೂವಿಲ್ಲ ಹಣ್ಣಿಲ್ಲ, ಹಕ್ಕಿಯ ಗೂಡು ಪಾಡು ಹಾಡುಗಳಂತೂ ಮೊದಲೇ ಇಲ್ಲ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನಗರಾಧ್ಯಕ್ಷ, ಕವಿ ಜಯಪ್ಪ ಹೊನ್ನಾಳಿ ಹೇಳಿದರು.

ನಗರದ ಅರಮನೆ ಜಪದ ಕಟ್ಟೆ ಮಠದಲ್ಲಿ ಚಿತ್ರಕಲಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನವು ಎಸ್ ಜಿಎಂ ಟೂರ್ಸ್ ಸಹಯೋಗದಲ್ಲಿ ಆಯೋಜಿಸಿದ್ದ ಚಿತ್ರಕಲಾ ವಾರ್ಷಿಕೋತ್ಸವ, ಕನ್ನಡ ರಾಜ್ಯೋತ್ಸವ ಕವಿಗೋಷ್ಠಿಯಲ್ಲಿ ಅವರು, ಎಂ.ಕೆ. ಮಹದೇವಸ್ವಾಮಿ ಅವರ ಕಾವ್ಯ ಕುಸುಮ ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಎಸಿ ಕೊಠಡಿಗಳಿಂದ ಬಂದವರಿಗೆ ತಂಗಾಳಿ ಖುಷಿ ಕೊಟ್ಟೀತು ಹೇಗೆ? ಮರದ ತಂಪು ನೆರಳು ಸ್ವರ್ಗೀಯವೆನಿಸೀತು ಹೇಗೆ? ಹಾಗಾಗಿಯೇ ಭಾವದ ಬಡತನದಿಂದಾಗಿ ಬಡವಾಗಿದ್ದಾರೆ. ಆ ಕಾರಣದಿಂದಲೇ ಅವರ ಕವಿತೆಗಳೂ ಬಡಕಲಾಗುತ್ತಿವೆ ಎಂದು ಅವರು ಹೇಳಿದರು.

ಹರಿದ ಬಟ್ಟೆಯ, ಹಸಿದ ಹೊಟ್ಟೆಯ ಎಳೆಯ ಕವಿ ಗೆಳೆಯ ಮಹದೇವಸ್ವಾಮಿ ಶೋಕದಿಂದಲೇ ಶ್ಲೋಕ ಹುಟ್ಟುತ್ತದೆಂಬ ಪೂರ್ವ ಸೂರಿಗಳ ಮಾತನ್ನು ನಿಜ ಮಾಡಿದ್ದಾರೆ. ಕಷ್ಟದ ಕುಲುಮೆಯಲ್ಲಿ ಬೇಯುತ್ತ ಅಪರಂಜಿಯಾಗುವ ಹಂತದಲ್ಲಿದ್ದಾರೆ, ಹಾಗಾಗಿಯೇ ಅವರ ಇಲ್ಲಿಯ ಕೆಲ ಕವನಗಳು ನರಳುವ ಮನಸ್ಸುಗಳನ್ನು ಅರಳಿಸುವ ಕಾವ್ಯ ಕುಸುಮಗಳಾಗಿವೆ. ಅವುಗಳಲ್ಲಿ ಪರಿಮಳದೊಂದಿಗೆ ಮಕರಂದವೂ ಅಂದ ಚೆಂದವೂ ಮೇಳೈಸಿವೆ ಎಂದು ಅವರು ಶ್ಲಾಘಿಸಿದರು.

ಶಾಸಕ ಟಿ.ಎಸ್. ಶ್ರೀವತ್ಸ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಚಿತ್ರಕಲಾ ಪ್ರತಿಷ್ಠಾನದ ಅಧ್ಯಕ್ಷೆ ಕೆ.ಜಿ. ರೂಪದರ್ಶಿನಿ, ಮಲ್ಲಿಕಾರ್ಜುನ, ಎಂ.ಕೆ. ಮಹದೇವಸ್ವಾಮಿ, ಎಸ್ ಜಿಎಂ ಟೂರ್ಸ್ ಎಂ. ಲೋಕೇಶಯ್ಯ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಚಂದ್ರಶೇಖರ್ ಮೊದಲಾದವರು ಇದ್ದರು.

ಸರ್ದಾರ್ ವಲ್ಲಭಭಾಯಿ ಪಟೇಲ್‌ನಗರದ ನೇತಾಜಿ ಉದ್ಯಾನವನದಲ್ಲಿ ಶಿವಾನುಭವ ದಾಸೋಹ ಕಾರ್ಯಕ್ರಮ



ಮೈಸೂರು, ಡಿ.2– ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಮೈಸೂರು ವತಿಯಿಂದ ಬಸವ ಬಳಗ ಪೂರ್ವ ವಲಯ ಟ್ರಸ್ಟ್ ವತಿಯಿಂದ ಎಸ್‌ವಿಪಿ ನಗರದ ಪದಾಧಿಕಾರಿಗಳಿಂದ ಶಿವಾನುಭವ ದಾಸೋಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಪೊಲೀಸ್ ಅಧಿಕಾರಿ ಹೆಚ್ ಪಿ ದೇವಪ್ಪ ಹಾಗೂ ನಿವೃತ್ತ ಹಿರಿಯ ಉದ್ಘೋಷಕರಾದ ಪ್ರಭುಸ್ವಾಮಿ 'ವಚನಕಾರರ ದೃಷ್ಟಿಯಲ್ಲಿ ಮಾಯೆ' ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಟ್ರಸ್ಟ್ ಅಧ್ಯಕ್ಷ ಎಸ್ ಶಿವಸ್ವಾಮಿ, ಶ್ರೀಕಂಠಮೂರ್ತಿ, ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಡಿ ಲೋಹಿತ್, ನಿರ್ದೇಶಕರಾದ ಸಿದ್ದಪ್ಪಸ್ವಾಮಿ, ಪ್ರಭುಸ್ವಾಮಿ, ಮಹೇಶ್, ನಾಗೇಂದ್ರ, ಜೆಎಸ್‌ಎಸ್ ಬಡಾವಣೆಯ ಎರಡನೇ ಹಂತದ ಸೇವಾ ಸಮಿತಿ, ಕ್ಷೇಮಾಭಿವೃದ್ಧಿ ಸಂಘ, ಲಲಿತಾದ್ರಿ ಮಹಿಳಾ ವೇದಿಕೆ, ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದ ಸಮಾನ ಮನಸ್ಕರ ಸ್ನೇಹ ಬಳಗ, ಶ್ರೀ ವೀರಶೈವ ಲಿಂಗಾಯತ ಸಮಾನಮನಸ್ಕರ ಸ್ನೇಹ ಬಳಗ ಕುದೇರು ಮಠ, ಎಸ್ ಪಿ ವೈ ಎಸ್ ಎಸ್ ಯೋಗ ಸಂಘ, ಹಾಗೂ ಬಡಾವಣೆಯ ನಿವಾಸಿಗಳು ಉಪಸ್ಥಿತರಿದ್ದರು.

ಸುಜಯ ಸುರೇಶ್ ಅವರ ಕೊನೆ ಮೊದಲು ಕೃತಿ ಬಿಡುಗಡೆ


ಕೊನೆ ಮೊದಲು' ಕೃತಿಯನ್ನು ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ ಬಿಡುಗಡೆ ಮಾಡಿದರು.

ಮೈಸೂರು, ಡಿ. 2– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾ ಕೂಟ, ಸ್ಪಂದನ ಸಾಂಸ್ಕೃತಿಕ ಪರಿಷತ್ತು ಹಾಗೂ ಕದಂಬ ಕಲಾವೇದಿಕೆಯು ಎಂಜಿನಿಯರುಗಳ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಸುಜಯ ಸುರೇಶ್ ಅವರ ಕೊನೆ ಮೊದಲು ಕೃತಿಯನ್ನು ಕುಂದೂರು ಮಠದ ಶ್ರೀ ಶರತ್ ಚಂದ್ರ ಸ್ವಾಮೀಜಿ ಬಿಡುಗಡೆ ಮಾಡಿದರು.

ಕೃತಿ ಕುರಿತು ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಿ, ವ್ಯಕ್ತಿಯ ಸಾವಿನ ನಂತರದ ಚಟುವಟಿಕೆಗಳನ್ನು ಇಲ್ಲಿ ದಾಖಲು ಮಾಡಲಾಗಿದೆ. ಸುತ್ತಲೂ ಇರುವ ಜನರು ಸಾವಿಗೆ ಹೇಗೆ ಪ್ರತಿಕ್ರಿಯೆ ನೀಡಿದರು ಎಂಬುದು ಮುಖ್ಯವಾಗುತ್ತದೆ. ಸಾವಿನ ನಂತರದ ಆಳ–ಅಗಲ ಈ ಕೃತಿಯಲ್ಲಿದೆ ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಈ ಬಾರಿಯ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ಪ್ರಾಸ್ತಾವಿಕ, ಸ್ಪಂದನ ಸಾಂಸ್ಕೃತಿಕ ಪರಿಷತ್ತು ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಆಶಯ ಭಾಷಣ ಮಾಡಿದರು. ಕದಂಬ ಕಲಾಪೀಠದ ಅಧ್ಯಕ್ಷ ಬಿ. ವಿದ್ಯಾಸಾಗರ ಕದಂಬ ಸ್ವಾಗತಿಸಿದರು. ಪಿಯು ಕಾಲೇಜಿನ ಉಪನ್ಯಾಸಕಿ ವೀಣಾ ಕದಂಬ ಕಾರ್ಯಕ್ರಮ ನಿರೂಪಿಸಿದರು.

ಎ.ಟಿ.ಸದೆಬೋಸ್‌ಗೆ ಪಿಎಚ್.ಡಿ ಪದವಿ



ಮೈಸೂರು, ಡಿ. 2– ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ.ಎಚ್.ಚಂದ್ರಕಿರಣ್ ಅವರ ಮಾರ್ಗದರ್ಶನದಲ್ಲಿ ಸಂತ ಫಿಲೋಮಿನಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಎ.ಟಿ. ಸದೆಬೋಸ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ನವ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಜಾಗತೀಕರಣದ ಆಯಾಮಗಳು' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.


ಅರ್ಜಿ ಆಹ್ವಾನ

ಮೈಸೂರು, ಡಿ.2– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಾಜ್ಯಾದ್ಯಂತ ಹಾಗೂ ಹೊರ ರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ– ಸಂಸ್ಥೆಗಳಿಗೆ ಧನ ಸಹಾಯ ನೀಡಲು ಹಾಗೂ ಕಲಾವಿದರಿಗೆ ವಾದ್ಯ ಪರಿಕರ ಮತ್ತು ವೇಷಭೂಷಣಗಳ ಖರೀದಿಗೆ ಸಹಾಯಧನ ಹಾಗೂ ಚಿತ್ರಕಲೆ, ಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ ನೀಡಲು 2025–26ನೇ ಸಾಲಿನ ಸಾಮಾನ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಸೇವಾಸಿಂಧು sevasidhu.karnataka.gov.in ಮುಖಾಂತರ ಅರ್ಜಿ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಅರ್ಜಿ ಸಲ್ಲಿಸಲು ಡಿ.30 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2513225 ಅನ್ನು ಸಂಪರ್ಕಿಸಬಹುದು.

ಬೆಮೆಲ್‌ನಲ್ಲಿ ಪೋಸ್ ನೀಡಿದ್ದ ಹುಲಿ ಈಗ ನಾಪತ್ತೆ!

ಸುತ್ತಮುತ್ತಲ ಗ್ರಾಮಸ್ಥರಿಗೆ ಅರಣ್ಯ ಇಲಾಖೆ ಎಚ್ಚರಿಕೆ



ಮೈಸೂರು, ಡಿ.2(ಎಂಟಿವೈ)– ಮೈಸೂರಿನ ಬೆಮೆಲ್(ಬಿಇಎಂಎಲ್) ಆವರಣದಲ್ಲಿ ಪ್ರತ್ಯಕ್ಷವಾಗಿದ್ದ ಹುಲಿ ಮೂರನೇ ದಿನವೂ ಪತ್ತೆಯಾಗದ ಹಿನ್ನೆಲೆಯಲ್ಲಿ ಸುತ್ತಮುತ್ತಲಿನ ಗ್ರಾಮಗಳ ಜನರಲ್ಲಿ ಎಚ್ಚರಿಕೆಯಿಂದ ಇರುವಂತೆ ಅರಣ್ಯ ಇಲಾಖೆ ಜಾಗೃತಿ ಮೂಡಿಸಲು ಮುಂದಾಗಿದೆ.

ಬೆಮೆಲ್ ಆವರಣದ ಪಾರ್ಕಿಂಗ್ ಸ್ಥಳದ ರಸ್ತೆಯಲ್ಲಿ ಸಾಗಿ ಕಾಂಪೌಂಡ್ ಹಾರಿ ಹೋಗಿರುವ ಶಂಕೆ ವ್ಯಕ್ತವಾಗಿದೆ. ಮೂರು ದಿನಗಳಿಂದ ಬೆಮೆಲ್ ಆವರಣದಲ್ಲಿ ಅಳವಡಿಸಿರುವ ಕ್ಯಾಮರಾ ಟ್ರ್ಯಾಪ್‌ನಲ್ಲಿ ಹುಲಿ ದೃಶ್ಯ ಸೆರೆಯಾಗಿಲ್ಲ. ಅಲ್ಲದೆ, ಸಂಸ್ಥೆ ಆವರಣದಲ್ಲಿರುವ ಸಿಸಿ ಕ್ಯಾಮರಾದಲ್ಲೂ ಹುಲಿ ದೃಶ್ಯ ಸೆರೆಯಾಗಿಲ್ಲ. ಇದರಿಂದ ಬೆಮೆಲ್ ಆವರಣದಿಂದ ಹುಲಿ ಪಲಾಯನವಾಗಿರುವ ಸಾಧ್ಯತೆ ಇದೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಹುಲಿ ಅಲೋಕ ಅಥವಾ ಅರಬ್ಬೀತಿಟ್ಟು ಅರಣ್ಯದ ಕಡೆ ವಲಸೆ ಹೋಗಿರುವ ಸಾಧ್ಯತೆ ಹೆಚ್ಚಾಗಿದೆ. ಹಾಗಾಗಿ ಆ ಭಾಗದ ಗ್ರಾಮಸ್ಥರಿಗೆ ಮಾಹಿತಿ ನೀಡಲಾಗಿದ್ದು, ಹುಲಿ ಸುಳಿವು ಸಿಕ್ಕರೆ ಮಾಹಿತಿ ನೀಡುವಂತೆ ಹಾಗೂ ಮುಂಜಾನೆ, ಸಂಜೆ ಹೊಲದತ್ತ ಒಬ್ಬೊಬ್ಬರೇ ಹೋಗದಂತೆ ಸಲಹೆ ನೀಡಲಾಗಿದೆ.

ಈ ಮಧ್ಯೆ ಡಿಸಿಎಫ್ ಕೆ.ಪರಮೇಶ್ ಮಾತನಾಡಿ, ಮೂರು ದಿನಗಳಿಂದಲೂ ಬೆಮೆಲ್ ಆವರಣದಲ್ಲಿ ಹುಲಿ ಸುಳಿವಿಲ್ಲ. ಬೋನ್‌ಗೂ ಬಿದ್ದಿಲ್ಲ. ಕ್ಯಾಮರಾ ಟ್ರ್ಯಾಪ್‌ನಲ್ಲೂ ಹುಲಿ ದೃಶ್ಯ ಸೆರೆ ಸಿಕ್ಕಿಲ್ಲ. ಇದರಿಂದ ಬೆಮೆಲ್ ಕ್ಯಾಂಪಸ್‌ನಿಂದ ಹುಲಿ ಬೇರೆಡೆ ಸ್ಥಳಾಂತರಗೊಂಡಿದೆ ಎಂಬ ಅನುಮಾನವಿದೆ. ಈ ಹಿನ್ನೆಲೆಯಲ್ಲಿ ಕೂರ್ಗಳ್ಳಿ, ಇಲವಾಲ, ರಟ್ನಹಳ್ಳಿ, ಮರಟಿಕ್ಯಾತನಹಳ್ಳಿ, ಮಾದಳ್ಳಿ, ಚಿಕ್ಕನಹಳ್ಳಿ ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ಎಚ್ಚರದಿಂದ ಇರುವಂತೆಯೂ ಹುಲಿ ಕಂಡು ಬಂದರೆ ಮಾಹಿತಿ ನೀಡುವಂತೆಯೂ ಕೋರಲಾಗಿದೆ ಎಂದರು.

> **ಇದುವರೆಗೂ ಯಾರ ಕಣ್ಣಿಗೂ ಬೀಳದ ಹುಲಿ**
> ಬೆಮೆಲ್ ಆವರಣದಲ್ಲಿ ಕಂಡು ಬಂದ ಹುಲಿ ಇದುವರೆಗೂ ಯಾವ ವಲಯ, ವಿಭಾಗದಲ್ಲೂ ಅರಣ್ಯ ಇಲಾಖೆ ಕಣ್ಣಿಗೆ ಬಿದ್ದಿಲ್ಲದೇ ಇರುವುದು ವಿಶೇಷ. ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಹುಲಿ ಗಣತಿ ನಡೆಸಲಾಗುತ್ತದೆ. ಅದಕ್ಕಾಗಿ ಕ್ಯಾಮರಾ ಟ್ರ್ಯಾಪ್ ಅಳವಡಿಸಿ, ಹುಲಿಗಳ ಚಿತ್ರ ಸೆರೆ ಹಿಡಿದು ಟೈಗರ್ ಸೆಲ್‌ಗೆ ಕಳುಹಿಸಲಾಗುತ್ತಿತ್ತು. ಹುಲಿ ಮೇಲಿನ ಪಟ್ಟೆ ಆಧರಿಸಿ, ಒಂದೊಂದು ಹುಲಿಗೂ ಒಂದೊಂದು ಐಡಿ ಸಂಖ್ಯೆ ನೀಡಲಾಗುತ್ತದೆ. ಆದರೆ ಬೆಮೆಲ್ ಆವರಣದಲ್ಲಿ ಪ್ರತ್ಯಕ್ಷವಾಗಿರುವ ಹುಲಿಯ ಚಿತ್ರವನ್ನು ಟೈಗರ್ ಸೆಲ್‌ಗೆ ಕಳುಹಿಸಲಾಗಿದ್ದು, ಆ ಹುಲಿಗೆ ಇದುವರೆಗೂ ಎಲ್ಲಿಯೂ ಅರಣ್ಯ ಇಲಾಖೆಯ ಕ್ಯಾಮರಾ ಟ್ರ್ಯಾಪ್ ಕಣ್ಣಿಗೆ ಬಿದ್ದಿಲ್ಲದೇ ಇರುವುದು ಖಚಿತವಾಗಿದೆ. ಈ ಹುಲಿಗೆ 2 ವರ್ಷ ವಯಸ್ಸಾಗಿರಬಹುದೆಂದು ಅಂದಾಜಿಸಲಾಗಿದ್ದು, ಈ ಹುಲಿ ಇದುವರೆಗೂ ಎಲ್ಲಿತ್ತು ಎಂದು ಪ್ರಶ್ನೆ ಅರಣ್ಯ ಸಿಬ್ಬಂದಿಗಳಲ್ಲಿ ಉದ್ಭವಿಸಿದೆ.

ಮೈಸೂರು ಚಳಿಗಾಲದ ರೇಸ್

3ನೇ ದಿನ, ಬುಧವಾರ, 3–12–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಪಟ್ಟದಕಲ್ ಪ್ಲೇಟ್ –1600 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1 ಅಲ್ಲೂರಿಂಗ್ ಬ್ಯೂಟಿ 2. ನಿಂಬಲ್ ಸ್ಪಿರಿಟ್

II. ಸಹ್ಯಾದ್ರಿ ಪ್ಲೇಟ್–1400 ಮೀ. ಡಿII ರೇಟೆಡ್ 20 ರಿಂದ 45. ಮ.2.30ಕ್ಕೆ
1. ನ್ಯಾಚುರಲ್ ಸ್ಪೀಡ್ 2. ಸಿರಾ

III. ಫೇಮ್ ಅಂಡ್ ಗ್ಲೋರಿ ಪ್ಲೇಟ್ –1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಚಾಯ್ಸ್ 2. S.D. ಕ್ವೀನ್

IV. ಸಹ್ಯಾದ್ರಿ ಪ್ಲೇಟ್–1400 ಮೀ. ಡಿI ರೇಟೆಡ್ 20 ರಿಂದ 45. ಮ.3.30ಕ್ಕೆ
1 ಸೆಲ್ಮ 2 ಸಿ ಕೋಕಾಟ್ಸ್

V. ಡಾ. ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಆಲ್ಡ್ ಗೇಟ್ 2. ಜ಼ಾರ್

VI. ಸಂಗಮ್ ಪ್ಲೇಟ್ –1600 ಮೀ. ರೇಟೆಡ್ 40 ರಿಂದ 65. ಸಂ.4.00ಕ್ಕೆ
1 ಔರ್ಲಿ 2. ಸರ್ ಕ್ಯಾಲ್‌ಕ್ಯೂಲಸ್

VII. ಬಂಡಿಪುರ್ ಪ್ಲೇಟ್–1100ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1 ಮೂನ್ ಲೈಟ್ ಕ್ವೀನ್ 2 ಅಥೆಂಟಿಕ್ ಬೆಲ್


ದಿನದ ಅತ್ಯುತ್ತಮ	ಆಲ್ಡ್ ಗೇಟ್
ಡಬ್ಬಲ್	ಚಾಯ್ಸ್, ಔರ್ಲಿ
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಅಯೋಧ್ಯೆ ಮಾತ್ರವಲ್ಲ.. ಮುಸ್ಲಿಮರು ಇನ್ನೂ 2 ಐತಿಹಾಸಿಕ ಸ್ಥಳಗಳ ಬಿಟ್ಟುಕೊಡಿ

ಭಾರತ ಜಾತ್ಯಾತೀತವಾಗಿರಲು ಹಿಂದೂಗಳೇ ಕಾರಣ: ಮುಹಮ್ಮದ್

ಕೋಝಿಕ್ಕೋಡ್, ಡಿ.2– ಅಯೋಧ್ಯೆ ರಾಮಮಂದಿರ ಮಾತ್ರವಲ್ಲ.. ಮುಸ್ಲಿಮರು ಇನ್ನೂ ಎರಡು ಐತಿಹಾಸಿಕ ಸ್ಥಳಗಳನ್ನು ಹಿಂದೂಗಳಿಗೆ ಬಿಟ್ಟುಕೊಡಬೇಕು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್ಐ) ಮಾಜಿ ಪ್ರಾದೇಶಿಕ ನಿರ್ದೇಶಕ ಕೆ.ಕೆ. ಮುಹಮ್ಮದ್ ಹೇಳಿದ್ದಾರೆ.



ಕೇರಳದ ಕೋಝಿಕ್ಕೋಡ್‌ನಲ್ಲಿ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಕೆ.ಕೆ. ಮುಹಮ್ಮದ್, ನನ್ನ ಪ್ರಕಾರ ಮುಸ್ಲಿಮರು ಇನ್ನೂ ಎರಡು ಐತಿಹಾಸಿಕ ಸ್ಥಳಗಳನ್ನು ಹಿಂದೂಗಳಿಗೆ ಬಿಟ್ಟುಕೊಡಬೇಕೆಂದು ನಾನು ಹೇಳಿದ್ದೆ. ಅವುಗಳೆಂದರೆ ಶ್ರೀಕೃಷ್ಣನ ಜನ್ಮಸ್ಥಳವಾದ ಮಥುರಾ ಮತ್ತು ಶಿವನೊಂದಿಗೆ ಸಂಬಂಧ ಹೊಂದಿರುವ ಜ್ಞಾನವಾಪಿ ದೇಗುಲಗಳಾಗಿವೆ. ಅಂತೆಯೇ ಭವ್ಯವಾದ ಹಿಂದೂ ದೇವಾಲಯಗಳನ್ನು ನಿರ್ಮಿಸಲು ಮುಸ್ಲಿಮರು ಹಿಂದೂ ಸಮುದಾಯಕ್ಕೆ ಹಸ್ತಾಂತರಿಸ ಬೇಕಾದ ಎರಡು ಪ್ರಮುಖ ಸ್ಥಳಗಳು ಇವು. ಏಕೆಂದರೆ ಮೆಕ್ಕಾ ಮತ್ತು ಮದೀನಾ ಮುಸ್ಲಿಮರಿಗೆ ಎಷ್ಟು ಮುಖ್ಯವೋ ಅಷ್ಟೇ ಈ ಎರಡು ಪ್ರಮುಖ ಸ್ಥಳಗಳು ಹಿಂದೂಗಳಿಗೂ ಅಷ್ಟೇ ಮುಖ್ಯ ಎಂದು ಮುಹಮ್ಮದ್ ಹೇಳಿದರು.


ಭಾರತ ಜಾತ್ಯಾತೀತವಾಗಿರುವುದಕ್ಕೇ ಹಿಂದೂಗಳೇ ಕಾರಣ: ಇದೇ ವೇಳೆ ಮುಸ್ಲಿಂ ಸಮುದಾಯಕ್ಕೆ ಪ್ರತ್ಯೇಕ ದೇಶ ಪಾಕಿಸ್ತಾನವನ್ನು ನೀಡಿದ ನಂತರವೂ, ಭಾರತ ಇಂದು ಜಾತ್ಯತೀತ ದೇಶವಾಗಿದ್ದರೆ, ಅದು ಹಿಂದೂ ಬಹುಮತದ ಕಾರಣದಿಂದಾಗಿ ಮಾತ್ರ ಎಂಬ ಅಂಶವನ್ನು ಮುಸ್ಲಿಮರು ಪ್ರಶಂಸಿಸಬೇಕು.

ಅದು ಮುಸ್ಲಿಂ ಬಹುಮತದ ದೇಶವಾಗಿದ್ದರೆ, ಅದು ಎಂದಿಗೂ ಜಾತ್ಯತೀತ ದೇಶವಾಗುತ್ತಿರಲಿಲ್ಲ. ಆದ್ದರಿಂದ, ಈ ಸಂಗತಿಯನ್ನು ಮುಸ್ಲಿಮರು ಸಹ ಅರಿತುಕೊಳ್ಳಬೇಕು. ಅವರ ಕಡೆಯಿಂದ ಕೆಲವು ಸನ್ನೆಗಳು ಇರಬೇಕು ಎಂದರು.

ಕಮ್ಯುನಿಸ್ಟ್ ಇತಿಹಾಸಕಾರರ ಮೊರೆ ಹೋಗಬೇಡಿ: ಅಲ್ಲದೆ ನೀವು ಕಮ್ಯುನಿಸ್ಟ್ ಇತಿಹಾಸಕಾರರೊಂದಿಗೆ ಈ ಎಲ್ಲಾ ವಿಷಯಗಳ ಬಗ್ಗೆ ಮಾತನಾಡಬಾರದು. ಏಕೆಂದರೆ ಹಿಂದಿನ ಪ್ರಕರಣದಲ್ಲಿ ಇರ್ಫಾನ್ ಹಬೀಬ್ ಮತ್ತು ಕೆಲವು ಜೆಎನ್‌ಯು ಜನರು ಸಹ ಸಮಸ್ಯೆಯನ್ನು ಸಂಕೀರ್ಣಗೊಳಿಸಿದ್ದರು.

'ಕಾಂತಾರ' ದೈವಕ್ಕೆ ಅವಮಾನ; ಕ್ಷಮೆ ಕೇಳಿದ ನಟ ರಣವೀರ್ ಸಿಂಗ್

ಮುಂಬೈ: ಗೋವಾದಲ್ಲಿ ನಡೆದ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಬಾಲಿವುಡ್ ನಟ ರಣವೀರ್ ಸಿಂಗ್ ಅವರು 'ಕಾಂತಾರ ಚಾಪ್ಟರ್ 1' ಚಿತ್ರದ ದೈವವನ್ನು ದೆವ್ವ ಎಂದಿದ್ದು, ನಟ ನಿರ್ದೇಶಕ ರಿಷಬ್ ಶೆಟ್ಟಿ ನಟನೆಯನ್ನು ತಮಾಷೆಯಾಗಿ ಅನುಕರಣೆ ಮಾಡಿ ವಿವಾದಕ್ಕೀಡಾಗಿತ್ತು. 'ಕಾಂತಾರ' ಚಿತ್ರದ ದೈವವನ್ನು 'ಹೆಣ್ಣು ದೆವ್ವ' ಎಂದು ಹೇಳಿ ರಣವೀರ್ ಟೀಕೆಗೆ ಗುರಿಯಾಗಿದ್ದು, ಅವರು ಕ್ಷಮೆಯಾಚಿಸಬೇಕು ಎಂದು ವ್ಯಾಪಕ ಆಗ್ರಹ ಕೇಳಿ ಬಂದಿತ್ತು. ಕರಾವಳಿಯ ಹಲವರು ಸಾಮಾಜಿಕ ಜಾಲತಾಣಗಳಲ್ಲಿ ರಣವೀರ್ ಸಿಂಗ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು.



ನಟ ರಣವೀರ್ ಸಿಂಗ್ ಸ್ಪಷ್ಟನೆ: ಕಾಂತಾರ ಅನುಕರಣೆ ವಿವಾದದ ಬಗ್ಗೆ ಇಂದು ಮೌನ ಮುರಿದ ರಣವೀರ್ ಸಿಂಗ್, ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿ, ಕಾಂತಾರ ಅಧ್ಯಾಯ 1ರಲ್ಲಿ ರಿಷಬ್ ಅವರ ಅದ್ಭುತ ಅಭಿನಯವನ್ನು ಎತ್ತಿ ತೋರಿಸುವುದು ತಮ್ಮ ಉದ್ದೇಶವಾಗಿತ್ತು ಹೊರತು ಬೇರೇನೂ ಅಲ್ಲ, ನಾನು ಭಾರತದಲ್ಲಿನ ಪ್ರತಿಯೊಂದು ಸಂಸ್ಕೃತಿ, ಸಂಪ್ರದಾಯವನ್ನು ಗೌರವಿಸುತ್ತೇನೆ ಎಂದಿದ್ದಾರೆ.